

ಶಿರೂರು ಫಣಿಯಪ್ಪಯ್ಯ ವಿರಚಿತ ಮತ್ತು ಸಂಗ್ರಹಿತ

ಯಕ್ಷಗಾನ ಪ್ರಸಂಗಸಂಪುಟ

(ಭಾಗ ಎರಡು)

ಶಿರೂರು ಫಣಿಯಪ್ಪಯ್ಯ ವಿರಚಿತ
ಶ್ರೀ ಕೃಷ್ಣ ಗಾರುಡಿ
ಮಹೇಂದ್ರ ವಿಜಯ





ಹಟ್ಟಿಯಂಗಡಿ ರಾಮಭಟ್ಟ ವಿರಚಿತ
ಬಿಲ್ಲಹಬ್ಬ ಕಂಸವಧೆ
ರತ್ನಪುರದ ರಾಮ ವಿರಚಿತ
ಮೂಲಕಾಸುರ ಕಾಳಗ

ಸಂಪಾದಕರು:
ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್

ಪ್ರಕಾಶಕರು:
ಫಣಿಗಿರಿ ಪ್ರತಿಷ್ಠಾನ ಶಿರೂರು

ಶಿರೂರು ಫಣಿಯಪ್ಪಯ್ಯ ವಿರಚಿತ ಮತ್ತು ಸಂಗ್ರಹಿತ

ಫಣಿಗಿರಿ ಯಕ್ಷಸಂಪುಟ

ಸಂಪಾದಕರು
ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಪ್ರಕಾಶಕರು
ಫಣಿಗಿರಿ ಪ್ರತಿಷ್ಠಾನ
ಶಿರೂರು, ಬೈಂದೂರು ತಾಲೂಕು
ಉಡುಪಿ ಜಿಲ್ಲೆ– 576228

'Phanigiri Yaksha Samputa'

(Yakshagana Prasangas composed and collected
by Late Shiroor Phaniyappayya and
Edited by Dr. Kabbinale Vasantha Bharadwaj,
and
Published by Phanigiri Pratishtana, Shiroor,
Udupi Dist. Karnataka-576228.
(Mob: 94483 53910).

Year of Publication: 2023

Pages: 313

Price: Rs. : 300/-

Paper Used : 70 gsm Maplitho

Printed at :
Techfiz Inc.,
60/46/2, 10th B Main,
First Block, Jayanagar, Bengaluru-560011

ಸಂಪಾದಕೀಯ

ಯಕ್ಷಗಾನ ಪ್ರಸಂಗಗಳನ್ನು ಮುದ್ರಿಸುವ ಬಗೆಗೆ ಮೊದಲು ಆಲೋಚಿಸಿದವರು ಮಂಗಳೂರಿನ ಬಾಸೆಲ್ ಮಿಷನ್ನಿನವರು. ಗೇರುಸೊಪ್ಪೆ ಶಾಂತಪ್ಪಯ್ಯನವರ 'ರಾವಣದಿಗ್ವಿಜಯ' ಅವರಿಂದ 1848ರಲ್ಲಿ ಕಲ್ಲಚ್ಚಿನಲ್ಲಿ ಮುದ್ರಿತವಾಯಿತು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಬೆಂಗಳೂರಿನ ಕೆಲವು ಪ್ರಕಾಶಕರು ಯಕ್ಷಗಾನಪ್ರಸಂಗಗಳ 'ಬಾಜಾರುಪ್ರತಿ'ಗಳನ್ನು ಮುದ್ರಿಸಿದರೆಂದು ತಿಳಿದುಬರುತ್ತದೆ. ಉಡುಪಿಯ ಪಾವಂಜೆ ಗುರುರಾವ್ ಅವರು 'ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ'ದ ಮೂಲಕ (1927–2002) ನೂರಾರು ಪ್ರಸಂಗಗಳನ್ನು ಪ್ರಕಟಿಸಿದ್ದಾರೆ. ದಾಸಸಾಹಿತ್ಯದ ಸಂಗ್ರಹಕಾರ್ಯದ ಜೊತೆಜೊತೆಗೇ ಅವರು ಯಕ್ಷಗಾನ ಪ್ರಸಂಗಗಳ ಹಸ್ತಪ್ರತಿಯನ್ನು ಸಂಪಾದಿಸಿ ಮುದ್ರಿಸುವ ಬಹುದೊಡ್ಡ ಅಭಿಯಾನವನ್ನು ಆರಂಭಿಸಿದವರು. ಅವರ ಈ ಮಹತ್ಕಾರ್ಯಕ್ಕೆ ಕಡಂದಲೆ ರಾಮರಾಯರಂತಹ ಕೆಲವು ಮಹನೀಯರು ನೆರವಾದರೆಂಬುದೂ ಗಮನಾರ್ಹ. ಈ ಐತಿಹಾಸಿಕ ಪ್ರಯತ್ನಗಳಿಂದಲೇ ಇಂದು ನಮ್ಮ ನಡುವೆ ನೂರಾರು ಪ್ರಸಂಗಗಳು ಉಳಿದುಕೊಂಡಿವೆ ಎಂಬುದನ್ನು ಮರೆಯಬಾರದು. ಕುಕ್ಕಿಲ ಕೃಷ್ಣಭಟ್ಟರು ಸಂಪಾದಿಸಿದ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ 'ಪಾರ್ತಿಸುಬ್ಬನ ಯಕ್ಷಗಾನಗಳು' (1975) ಆಧುನಿಕ ಸಂಪಾದನವಿಧಾನದಿಂದ ಮೂಡಿಬಂದ ಇನ್ನೊಂದು ಮಹತ್ತರ ಹೆಜ್ಜೆ. ಅನಂತರದಲ್ಲಿ ಮಂಗಳೂರು ವಿ.ವಿ, ಮುಂಬಯಿಯ ಪದವೀಧರ ಯಕ್ಷಗಾನ ಸಮಿತಿ, ಉಡುಪಿಯ ಯಕ್ಷಗಾನ ಕೇಂದ್ರ, ಮಣೂರಿನ ಸಂಯಮಂ ಪ್ರಕಾಶನ ಮುಂತಾದ ಸಂಸ್ಥೆಗಳು ಮಹತ್ವದ ಪ್ರಸಂಗಗಳನ್ನು ಪ್ರಕಟಿಸಿವೆ. ಇತ್ತೀಚೆಗೆ ದಿ|| ಶಿರೂರು ಫಣಿಯಪ್ಪಯ್ಯನವರ ಸ್ಮರಣಾರ್ಥ ಸಂಸ್ಥಾಪಿತವಾದ 'ಫಣಿಗಿರಿ ಪ್ರತಿಷ್ಠಾನ'ವೂ ಪ್ರಮುಖ ಯಕ್ಷಗಾನಕೃತಿಗಳನ್ನು ಪ್ರಕಟಿಸುವ ಸ್ತುತ್ಯರ್ಹಪ್ರಯತ್ನವನ್ನು ಆರಂಭಿಸಿದೆ. ಈಗಾಗಲೇ 'ಮಾನಸಚರಿತ್ರೆ'ಯಂತಹ ಸಾಂಸ್ಕೃತಿಕಮೌಲ್ಯದ ಕೃತಿಯನ್ನು ಪ್ರಕಟಿಸಿ, ಶಿರೂರು ಫಣಿಯಪ್ಪಯ್ಯ ವಿರಚಿತ ಪ್ರಸಂಗಗಳ ಒಂದು ಸಂಪುಟವನ್ನೂ ಹೊರತಂದಿದೆ. ಇದೀಗ ಶಿರೂರು ಫಣಿಯಪ್ಪಯ್ಯ ವಿರಚಿತ ಮತ್ತು ಅವರ ಸಂಗ್ರಹದ ತಾಡವಾಲೆ/ ಹಸ್ತಪ್ರತಿಗಳಲ್ಲಿರುವ ನಾಲ್ಕು ಪ್ರಸಂಗಗಳನ್ನು ಇನ್ನೊಂದು ಸಂಪುಟ ರೂಪದಲ್ಲಿ

ಪ್ರಕಟಿಸುವ ಸಾಹಸಕ್ಕೆ ಕೈಹಾಕಿರುವುದು ಪ್ರಶಂಸನೀಯವಾದ ವಿಚಾರ. ಈ ಸಂಪುಟದಲ್ಲಿ ಶಿರೂರು ಫಣಿಯಪ್ಪಯ್ಯನವರು ರಚಿಸಿದ 'ಶ್ರೀಕೃಷ್ಣಗಾರುಡಿ' ಮತ್ತು 'ಮಹೇಂದ್ರವಿಜಯ' ಹಾಗೂ ಹಟ್ಟಿಯಂಗಡಿ ರಾಮಭಟ್ಟರ 'ಬಿಲ್ಲಹಬ್ಬ-ಕಂಸವಧೆ' ಮತ್ತು ರತ್ನಪುರದ ರಾಮ ವಿರಚಿತ 'ಮೂಲಕಾಸುರ ಕಾಳಗ' ಎಂಬ ಒಟ್ಟು ನಾಲ್ಕು ಯಕ್ಷಗಾನ ಪ್ರಸಂಗಗಳು ಸಂಪಾದಿತವಾಗಿವೆ.

ಶ್ರೀಕೃಷ್ಣಗಾರುಡಿ :

ಶಿರೂರು ಫಣಿಯಪ್ಪಯ್ಯ (1918–2004) ಯಕ್ಷಗಾನ ಕವಿಯಾಗಿ, ಭಾಗವತರಾಗಿ, ಮೇಳದ ಸಂಚಾಲಕರಾಗಿ ಪ್ರಸಿದ್ಧರು. ಅದಕ್ಕಿಂತಲೂ ಮಿಗಿಲಾಗಿ ಅವರು ಯಕ್ಷಗಾನ ಪ್ರಸಂಗಗಳ ತಾಡವಾಲೆ ಮತ್ತು ಹಸ್ತಪ್ರತಿಗಳ ಸಂಗ್ರಾಹಕರಾಗಿ ಬಹುದೊಡ್ಡ ಸೇವೆಯನ್ನು ಮಾಡಿದವರು. ಯಕ್ಷಗಾನ ವಲಯದಲ್ಲಿ ಬಹುಚರ್ಚಿತವಾದ 'ಮಾನಸಚರಿತ್ರೆ' ಎಂಬ ಮೂಲಿಕೆ ವೆಂಕಣ್ಣಕವಿಯ ಅಮೂಲ್ಯಪ್ರಸಂಗದ ತಾಡವಾಲೆ ಅವರ ಸಂಗ್ರಹದಲ್ಲೇ ಲಭಿಸಿರುವುದು ನಾಡಿನ ಭಾಗ್ಯ. ಅವರು ರಚಿಸಿದ ಹದಿನೈದು ಪ್ರಸಂಗಗಳಲ್ಲಿ 'ಶ್ರೀಕೃಷ್ಣಗಾರುಡಿ' 1963ರಲ್ಲೇ ಪ್ರಕಟಗೊಂಡು ರಂಗಪ್ರದರ್ಶನ ಕಂಡಿದೆ. ಚಲನಚಿತ್ರದ ಕಥೆಯನ್ನು ಆಧರಿಸಿ ರಚನೆಗೊಂಡ ಈ ಪ್ರಸಂಗವು ಯಕ್ಷಗಾನ ಸಾಹಿತ್ಯಚರಿತ್ರೆಯ ದೃಷ್ಟಿಯಿಂದ ಮುಖ್ಯವಾದುದು. ಪೌರಾಣಿಕ ಪಾತ್ರಗಳನ್ನು ಬಳಸಿಕೊಂಡು ಕಲ್ಪಿತವಾದ ಆಖ್ಯಾನಗಳ ಸರಣಿಯಲ್ಲಿ ಇದಕ್ಕೆ ಮುಖ್ಯವಾದ ಸ್ಥಾನವಿದೆ.

'ಶ್ರೀಕೃಷ್ಣ ಗಾರುಡಿ' ಒಟ್ಟು 203 ಪದ್ಯಗಳಿರುವ ಪ್ರತಿಭಾಪೂರ್ಣ ಪ್ರಸಂಗ. ವಿನೂತನ ಕಥಾಹಂದರ, ಸನ್ನಿವೇಶರಮ್ಯತೆ, ರಸವೈವಿಧ್ಯ, ಸಾಹಿತ್ಯಸೌಂದರ್ಯ, ಸುಲಲಿತವಾದ ಪದ್ಯಬಂಧಗಳು ಈ ಪ್ರಸಂಗದ ಹಿರಿಮೆ.

ಕವಿಯು ಸ್ವಯಂ ಭಾಗವತರಾದುದರಿಂದ ಪದ್ಯಗಳ ರಚನೆಯಲ್ಲಿ ಸಂಗೀತ-ಸಾಹಿತ್ಯಗಳ ಸಮಾಮೇಲನ ಸಮುಚಿತವಾಗಿ ಮೂಡಿಬಂದಿದೆ. ಒಂದೆರಡು ಉದಾ:

ಯಾರೇ ಭಾಮಿನಿ ಸುಂದರಾಂಗಿ । ಗಜಗಮನೆ ಲತಾಂಗಿ ।
ತೋರೇ ನಿನ್ನಾನನ ಕೋಮಲಾಂಗಿ ॥
ಘೋರ ವಿಪಿನವಿದ । ಸಾರಿದ ಬಗೆಯೇ ।
ನೂರೆಲ್ಲಿದೆ ಮದ । ವಾರಣಗಾಮಿನಿ ॥ ಯಾರೇ ॥ (140)

ಸುಮಕೋಮಲಾಂಗಿ ನಿನ್ನ ನೋಡಿ । ಭ್ರಮೆಗೊಂಡೆನು ಖೋಡಿ ।
ಸುಮಶರನೆನ್ನೊಳ್ ನಿರ್ದಯ ಮಾಡಿ ॥
ಸುಮಬಾಣವನೆದೆ । ಗಮರಿಸಿ ಬಿಡುತಿಹ ।
ನಮಮ ಸಹಿಸೆ ನೀ । ಶಮಿಸೆಲೆ ಮೋದದಿ ॥ ಯಾರೇ ॥ (141)

ಶೃಂಗಾರರಸವನ್ನು ಸುರಿಸುವ ಸುಂದರ ಪದ್ಯಬಂಧವಿದು. ಆದ್ಯಂತಪ್ರಾಸಗಳ ಹೆಣಿಗೆ ಆಪಾತಮಧುರವಾಗಿದೆ.

ವಡಿಯ ಕೈಮುಗಿವೆ ಪರಾಕು । ಧರ್ಮ ।
ದೊಡಿಯರೆನ್ನಯ ನುಡಿಯವಧರಿಸ್ಬೇಕು ॥ ವಡಿಯ ॥ ಪ ॥

ಊರೆಮಗಾಯ್ತು ಬೌ ದೂರ । ನಮ್ಮ ।
ಊರಾಗಾಯ್ಕಂಡ್ ಕಂಡ್ರೆ ಸುತ್ಲು ಸಮ್ದೂರ ॥
ಯಾರೂ ಫಕ್ಕನೆ ಬಪ್ಕೆಯಡಿಯ । ಅಂಥ ।
ಊರಿಂದ ಪೊರಟಿಲ್ಲಿ ಬಂದೆವ್ನಮ್ಮೊಡಿಯಾ ॥ (110)

ಇದೊಂದು ದೇಸಿಯ ಸೊಗಡಿನ ಪದ್ಯ. ಕುಂದಗನ್ನಡದ ಸಹಜಸುಂದರ ವಿಲಾಸವಿಲ್ಲಿದೆ. ವಡಿಯ (ಒಡೆಯ), ಬೌ (ಬಹು), ಆಯ್ಕಂಡ್ (ಇದ್ದುಕೊಂಡು), ಸಮ್ದೂರ (ಸಮುದ್ರ), ಬಪ್ಕೆ (ಬರುವುದಕ್ಕೆ), ಯಡಿಯ (ಅಸಾಧ್ಯ) ಮುಂತಾದ ಪದಸಂಪತ್ತಿಯಿಂದ ಈ ಪದ್ಯ ಮನಸೆಳೆಯುತ್ತದೆ. ಇದರೊಂದಿಗೆ ಅಲ್ಲಲ್ಲಿ ಬರುವ 'ನೀರು ಪಾಲೆರಕವಾಗಿ ಇರ್ಪಂದದಿ', 'ಶಿರಕೆರೆದಿಹ ನೀರು ಚರಣಕಿಳಿಯದುಂಟೆ' ಮುಂತಾದ ಜನಪದ ನುಡಿರೂಪಗಳೂ ಮುದನೀಡುತ್ತವೆ.

ಯಕ್ಷಗಾನ ಕವಿಗಳಲ್ಲಿ ಕಂಡುಬರುವ ಚಿತ್ರಕವಿತಾಪ್ರಸಕ್ತಿಗೆ ದೀರ್ಘ ಪರಂಪರೆಯೇ ಇದೆ. ದೇವಿದಾಸ, ಹಳೆಮಕ್ಕಿ ರಾಮ, ಹಟ್ಟಿಯಂಗಡಿ ರಾಮ ಭಟ್ಟ, ಮುದ್ದಣ, ಚವರ್ಕಾಡು ಶಂಭುಜೋಯಿಸ, ಕಲ್ಯಾಣಿ ಭೀಮರಾಯ, ಬವುಲಾಡಿ ಹಿರಿಯಣ್ಣ ಹೆಬ್ಬಾರ ಮುಂತಾದ ಕವಿಗಳ ಒಗಟಿನಂತಹ ರಚನೆಗಳು

ಯಕ್ಷಗಾನಕಾವ್ಯವನ್ನು ಪಂಡಿತಮಾನ್ಯಗೊಳಿಸಿವೆ. ಈ ಪ್ರಸಂಗದ ಒಂದು ಭಾಮಿನಿಷಟ್ಪದಿಯ ರಚನೆಯೂ 'ಪಾರಿಹಾರಿಕಿ' ಎಂಬ ಚಿತ್ರಕವಿತಾ ಪ್ರಭೇದವಾಗಿದೆ ಎಂಬುದು ಗಮನಾರ್ಹ.

[ಜ]ನಕಭೂಪತಿಯಣುಗನಾತ್ಮಜ ।
ನನು ರಣದಿ ಕೆಡಹಿದನ ದರ್ಪವ ।
ಘನದಿ ಮುರಿದವನರಸಿಯಯ್ಯನ ಪೆಸರಹುದು ನಿನಗೆ ॥
ಜನಿಸುವರ್ಭಕರಿಂದ ಮುಂದವ ।
ರನು ಸಲಹಿ ತನ್ನಿಚ್ಛೆಯಂದದಿ ।
ನಿನಗೆ ನಡೆಯಲಸಾಧ್ಯ ಬಿಡು ಸಾರಿದೆನು ಪಿಂತೆರಳು ॥ (152)

"ಜನಕಭೂಪತಿ ಎಂಬುದು ಕೃತವೀರ್ಯರಾಜನ ತಂದೆಯ ಹೆಸರು. (ಮೂಲದಲ್ಲಿ 'ಸನಕಭೂಪತಿ' ಎಂಬ ಪ್ರಯೋಗವಿದ್ದು ಅರ್ಥದೂರವಾದುದರಿಂದ ಇಲ್ಲಿ ಬದಲಾಯಿಸಲಾಗಿದೆ. ಪುರಾಣಭಾರತಕೋಶದಲ್ಲಿ 'ಜನಕ'ನೆಂದೂ, ಪುರಾಣನಾಮಚೂಡಾಮಣಿಯಲ್ಲಿ 'ಧನಕ'ನೆಂದೂ ಉಲ್ಲೇಖವಿದೆ.) ಜನಕರಾಜನ ಮಗನಾದ ಕೃತವೀರ್ಯನ ಸುಪುತ್ರನೇ ಕಾರ್ತವೀರ್ಯಾರ್ಜುನ. ಅವನನ್ನು ಯುದ್ಧದಲ್ಲಿ ಸೋಲಿಸಿದವನು ಪರಶುರಾಮ. ಆ ಪರಶುರಾಮನನ್ನು ಪರಾಭವಗೊಳಿಸಿದವನು ಶ್ರೀರಾಮಚಂದ್ರ. ಅವನ ಮಡದಿಯೇ ಸೀತಾದೇವಿ. ಆ ಸೀತೆಯ ತಂದೆಯೇ ಜನಕರಾಜ! ನನ್ನನ್ನು ಮದುವೆಯಾಗುವ ನೀನು ಮುಂದೆ 'ಮಕ್ಕಳಿಗೆ ಜನಕ'ನೆನಿಸುವೆ! ಆ ಮಕ್ಕಳನ್ನು ನನ್ನ ವಾಂಛೆಯಂತೆ ಸಾಕಿಸಲಹುವುದು ನಿನ್ನಿಂದಾಗದು, ಹಿಂದೆ ಹೋಗು" ಎಂದು ಅರ್ಜುನನಿಗೆ ಹೇಳುವ ಮಾಯಾಮೋಹಿನಿಯ ಮಾತಿದು. 'ನೀನು ಅಪ್ಪನಾಗುವೆ' ಎಂಬುದನ್ನು ಬಳಸುಮಾತಿನಿಂದ ಹೇಳಿರುವುದು ಇಲ್ಲಿಯ ನುಡಿಬೆಡಗು!

ಹರಿ ಮುರಾಂತಕ ಮುಕುಂದ । ಬಂಧನ ಪರಿ ।
ಹರಿಸೋ ನಂಬಿದೆ ಗೋವಿಂದ ॥
ಹರಿಣಲೋಚನೆಗಾಗಿ ನರ ತರ ।
ಹರಿಸುತಿಹ ಬಂದೀಗ ಭಯ ಪರಿ ।
ಹರಿಸಿ ನಮ್ಮನು ಸಲಹಿ ಕರುಣವ ।
ಹರಿಸು ನಿತ್ಯಾನಂದ ಮಹಿಮನೆ ॥ ಪಾಹಿ ॥ (182)

ಇಲ್ಲಿ 'ಹರಿ' ಶಬ್ದದ ಪುನರಾವೃತ್ತಿಯಿದೆ. ಅವುಗಳು ವಿಭಿನ್ನಾರ್ಥವನ್ನು ನೀಡುವಂತಿರುವುದು ಗಮನಾರ್ಹ.

ಮಹೇಂದ್ರವಿಜಯ :

ಇದೇ ಕವಿಯ ಇನ್ನೊಂದು ಕೃತಿಯಿದು. ಜನಪದಲೋಕದ ಸಂಕೀರ್ಣಕಥಾ ವರ್ಗಕ್ಕೆ ಸೇರುವ ಈ ಕಥೆಯೂ ಹೊಸಮಾದರಿಯ ಪ್ರಸಂಗಗಳ ಕಕ್ಷೆಯಲ್ಲಿ ಕಾಣಿಸಿಕೊಳ್ಳುವ ಮುಖ್ಯಕೃತಿ. ಮಲತಾಯಿಯ ಕಾಮವಾಂಛೆ, ಕಟುಕರಿಂದ ಜೀವದಾನ, ಕಾಳಿಕಾಂಬೆಗೆ ನರಬಲಿ, ರಾಕ್ಷಸಿಯು ಅಜ್ಜಿಯ ರೂಪತಾಳುವುದು, ಭೂತದ ನೆರವು, ಕಲ್ಲುಗಳನ್ನು ಮಂತ್ರಿಸಿಕೊಡುವುದು, ಶಿಲಾವಿಗ್ರಹವು ಮಾತಾಡುವುದು, ಸರ್ಪವು ಮಾನವನಾಗುವುದು, ಶಾಪದಿಂದ ಕಲ್ಲಾಗುವುದು ಮತ್ತು ನಾಯಿಯಾಗುವುದು, ಮಂತ್ರದಿಂದ ಪೂರ್ವರೂಪಧಾರಣೆ ಇವೇ ಮೊದಲಾದ ಆಶಯಗಳು ಜನಪದಕಥೆಗಳ ಮುಖ್ಯಲಕ್ಷಣವಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ಇಂತಹ ರಮ್ಯಕಥಾವಸ್ತುಗಳು ಯಕ್ಷಗಾನ ರಂಗಕ್ಕೆ ಬಂದ ಕಾಲಘಟ್ಟದ ಪ್ರಾತಿನಿಧಿಕ ಕೃತಿಯಾಗಿ ಈ ಪ್ರಸಂಗವನ್ನು ಗಮನಿಸಬಹುದು.

ಪೂರ್ವಕವಿಗಳ ಪದ್ಯಬಂಧಗಳನ್ನೇ ಹೋಲುವ ಸುಂದರ ರಚನೆಗಳನ್ನು ಹೆಣೆಯುವಲ್ಲಿ ಈ ಕವಿಗೆ ವಿಶೇಷ ಒಲವಿದ್ದಂತೆ ತೋರುತ್ತದೆ. ಹಟ್ಟಿಯಂಗಡಿ ರಾಮಭಟ್ಟ, ಮುದ್ದಣ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಮೂಲ್ಕಿ ರಾಮಕೃಷ್ಣಯ್ಯ ಮುಂತಾದವರ ಪ್ರಭಾವ ಪ್ರೇರಣೆಗಳು ಅಲ್ಲಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಉದಾ:

ಬಾರೊ ಬಾರೋ ನವಮೋಹನಾಂಗ ।
ದೂರದಿ ದಣಿದಂತಿರುವುದು ನಿನ್ನಂಗ ।
ವಿ–ಶ್ರಮಿಸಂತರಂಗ ।
ಪೇ–ಳುವೆನು ಶುಭಾಂಗ ॥ (59)

ನೋಡದೆ ನಿನ್ನನು ಬಲುದಿನವಾಯ್ತು ।
ನೋಡಿದೆನೀಗದಕಾನಂದವಾಯ್ತು ।
ಬೇ–ಸರವೆಲ್ಲ ಹೋಯ್ತು ।
ಮ–ನ್ಮನದಿಚ್ಛೆಯಾಯ್ತು ॥ (61)

ಈ ಪದ್ಯಗಳ ಉತ್ತರಾರ್ಧದಲ್ಲಿ ಕಂಡುಬರುವ ವರಣಸಂಯೋಜನೆ ಆಹ್ಲಾದಕಾರಿಯಾದುದು. ಇದು ಮುದ್ದಣನ 'ಕುಮಾರವಿಜಯ'ದ "ಮಾತನಾಡೋ ಮಮ ಪ್ರಾಣನಾಥ" ಎಂಬ ಪದ್ಯಬಂಧವನ್ನು ಹೋಲುತ್ತದೆ.

ನೀರೆ ಸುಗುಣೆ ಗಂ । ಭೀರೆ ಸುಧಾಕರ । ಮೋರೆ ಕುಮುದನೇತ್ರೆ ॥
ಮಾರನ ಗಿಣಿವೈ । ಯ್ಯಾರ ಬೆಡಗುನಗೆ । ಬೀರೆ ವಿಮಲಗಾತ್ರೆ ॥
ಯಾರೆಂದರಿಯೆ ವಿ । ಚಾರಿಪೆ ತವಮನ ।
ಕೋರಿಕೆ ಸಲಿಸುವೆ । ಸೂರೆ ನಿನಗೆ ನಾ । ನೀರೆ ॥ (159)

ಬಾ । ಬಾರೆ ಸುಗುಣ । ಪಾರೆ ಮೊಗವ । ದೋರೆ ಭಾಮಿನಿ ॥
ದೂರವಿರಿಸು ಭಯವನಿತ್ತ । ಸೇರೆಕಾಮಿನಿ ॥
ನಿ । ನ್ನಂಗವರಸಿ । ಭಂಗಬಡುತ । ನಂಗಬಾಣದಿ ॥
ತುಂಗಕುಚೆ ಕು । ರಂಗನಯನೆ । ಯಂಗಗಾಣದಿ ॥ (340–341)

ಈ ಪದ್ಯಗಳಲ್ಲಿಯೂ ಮುದ್ದಣನ 'ಕುಮಾರವಿಜಯ' ಪ್ರಸಂಗದ "ಕುಂದರದನೆ ಪೂರ್ಣೇಂದುವದನೆ" ಮತ್ತು "ಆನಂದಮುಖೀ ಸುಂದರಾಂಗಿ" ಪದ್ಯಗಳ ಧಾಟಿಯನ್ನು ನೋಡಬಹುದು. ಯಕ್ಷಗಾನ ಕಾವ್ಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅರಿಸಮಾಸಗಳು ಈ ಕವಿಯ ರಚನೆಗಳಲ್ಲೂ ಕಂಡು ಬರುವುದುಂಟು. ಉದಾ: ಕಡಲಂಬರೇಶ (ಸಮುದ್ರವಸನೆಯಾದ ಭೂಮಿಯ ಅಧಿಪತಿ–ರಾಜ), ಎಲರಶನ (ಗಾಳಿಯೇ ಆಹಾರವಾಗಿ ಉಳ್ಳ ಹಾವು) ಇತ್ಯಾದಿ. ಹಳು (ಚ್ಯುತಿ), ತಾಳ (ಕೀಲು), ಕುಕ್ಕರ (ನಾಯಿ), ಬಟ್ಟೆ (ದಾರಿ), ಸವನಿಸು (ಒದಗು), ಹೊಲಬು (ದಾರಿ), ಪೊರೆ (ಆಶ್ರಯ) ಇತ್ಯಾದಿ ನಡುಗನ್ನಡಕ್ಕೆ ಒಪ್ಪುವ ಪದಪ್ರಯೋಗಗಳೂ ಇಲ್ಲಿ ಗಮನಾರ್ಹ. ಜೊತೆಗೆ ಸಂಸ್ಕೃತ ಭೂಯಿಷ್ಠವಾದ ಸಮಾಸಪದಗಳನ್ನೂ ಕವಿ ಬಳಸಿರುವುದುಂಟು. ಉದಾ: ಶ್ರೀಲಕ್ಷ್ಮೀವದನಾರವಿಂದಮಿಹಿರ, ವಾಸವಮುಖ್ಯದಿವೌಕಸಪೋಷ, ಮತ್ಕುಲಕೀರ್ತಿವೃಕ್ಷ ಕುಠಾರ, ವಿಕ್ರಮಾಂಕಿತ ಗುಣಶರಧಿಗಂಭೀರ ಇತ್ಯಾದಿ.

ಯಕ್ಷಗಾನದ ಆಹಾರ್ಯವೈಭವವನ್ನು ಸಾಕ್ಷಾತ್ಕರಿಸಲು ಈ ಪ್ರಸಂಗ ಅತ್ಯಂತ ಪ್ರಶಸ್ತವಾಗಿದೆ. ರಾಜ, ರಾಣಿ, ರಾಜಕುಮಾರ, ರಾಜಕುಮಾರಿ, ಅಡಗೂಳಜ್ಜಿ, ಯಕ್ಷ, ಗಂಧರ್ವ, ರಾಕ್ಷಸ, ರಾಕ್ಷಸಿ, ಭೂತ, ದೇವತೆಗಳು,

ಜೋಯಿಸ, ಚಾರಕರು, ವನಪಾಲಕರು, ಕಟುಕರು ಮುಂತಾದ ವೇಷವೈವಿಧ್ಯಗಳು ಭವ್ಯಲೋಕವನ್ನು ಸೃಷ್ಟಿಸಲು ಸಹಕಾರಿಯಾಗಿವೆ. ಇಡೀರಾತ್ರಿಯ ಪ್ರದರ್ಶನಕ್ಕೆ ಇದು ಸೂಕ್ತವಾಗಿದೆ.

ಬಿಲ್ಲಹಬ್ಬ–ಕಂಸವಧೆ:

ಹಟ್ಟಿಯಂಗಡಿ ರಾಮಭಟ್ಟ (ಕ್ರಿ. ಶ. 1794–1854) ಕುಂದಾಪುರದ ಸಮೀಪದ ಹಟ್ಟಿಯಂಗಡಿಯವರು. ಅಲ್ಲಿರುವ ಲೋಕನಾಥೇಶ್ವರ ದೇಗುಲದ ಅರ್ಚಕ ಸೂರಭಟ್ಟರ ಮಗ. ಅವಧೂತನಂತಿದ್ದ ಆಶುಕವಿ. ಅತಿಕಾಯ ಕಾಳಗ, ಧ್ರುವಚರಿತ್ರೆ, ಲವಕುಶರ ಕಾಳಗ, ದ್ರೌಪದಿಸ್ವಯಂವರ, ಸುಭದ್ರಾಕಲ್ಯಾಣ, ರತಿಕಲ್ಯಾಣ ಮುಂತಾದ (17) ಪ್ರಸಂಗಗಳನ್ನು ರಚಿಸಿದವರು. ಇವರ 'ಬಿಲ್ಲಹಬ್ಬ–ಕಂಸವಧೆ' ಭಾಗವತ ಪುರಾಣವನ್ನು ಆಧರಿಸಿದ ಅತ್ಯುತ್ತಮ ಪ್ರಸಂಗ. ಭಾಷಾಶೈಲಿ, ಛಂದೋಬಂಧ, ಕಾವ್ಯಮೌಲ್ಯಗಳ ದೃಷ್ಟಿಯಿಂದ ಇದನ್ನು ಕವಿಯ ಉತ್ಕೃಷ್ಟ ರಚನೆ ಎನ್ನಬೇಕು.

ಶಬ್ದಾಲಂಕಾರದ ಸೊಬಗು:

ಮಕರಕುಂಡಲ ಭೂಷ ಮಾಧುರ್ಯತರಭಾಷ ।
ಶಕಟದಾನವಭಂಗ ಶ್ಯಾಮಳ ಘನಾಂಗ ॥
ಸಕಲ ಜಗದಾಧಾರ ಸಿಂಧುಸಮ ಗಂಭೀರ ।
ಮುಕುರಸಮ ಸುಕಪೋಲ ವರಪೀತ ಚೇಲ (3)

ಥರವಿಡಿದು ಬರುವ ಸುತರಂಗದಿಂ ಸಾಂಗದಿಂ ।
ಚರಿಸುತಿಹ ಮತ್ಸ್ಯಸಂದೋಹದಿಂ ಗ್ರಾಹದಿಂ ।
ಪರಿಪೂತೆ ತಾನೆಂಬ ಪೆಂಪಿನಿಂ ತಂಪಿನಿಂ ವಿವಿಧಜಲಚರಗಳಿಂದ ॥
ಪರಿಮಳಿತ ಕುಸುಮ ಫಲಭಾರದಿಂ ಕೀರದಿಂ ।
ಮೆರೆವ ನಾನಾವಿಧದ ತರುಗಳಿಂ ಹರಿಗಳಿಂ ।
ಪರಿಶೋಭಿಪುಭಯಪ್ರತೀರದಿಂ ಸ್ವೈರದಿಂದಿಹ ರವಿಜೆಯಂ ಕಂಡರು (172)

ಇಲ್ಲಿಯ ಒಳಪ್ರಾಸಗಳ ಚೆಲುವು ಗಮನಾರ್ಹ. ಲಾಟಾನುಪ್ರಾಸಗಳಿರುವ ಇಂತಹ ವಾರ್ಧಕಷಟ್ಪದಿಗಳು ಲಕ್ಷ್ಮೀಶನ ಜೈಮಿನಿ ಭಾರತವನ್ನು ನೆನಪಿಸುತ್ತವೆ.

ವರ್ಣನೆಗಳು :

ಭಯದಿ ಕಂಸಂಗಖಿಳ ಜಗ ಹರಿ ।
ಮಯವೆನಿಸಿ ತೋರಿತ್ತು ಮೇಣ್ ಸರ ।
ಸಿಯಲಿ ಪಂಕಜವರಳ್ದುದಳಿಮಕರಂದ ವಾರಿಯಲಿ ॥
ಪ್ರಿಯದೊಳಘಮರುಷಣವ ಗೈದುದು ।
ನಯಸರದಿ ಕೋಗಿಲೆಗಳುಲಿದುದು ।
ನಯನಗೋಚರನಾದನಿನನವನೀಶ ಕೇಳೆಂದ ॥ (310)

ಇದೊಂದು ಸುಂದರ ಸೂರ್ಯೋದಯದ ವರ್ಣನೆ. "ಸರೋವರದಲ್ಲಿ ತಾವರೆಗಳು ಅರಳಿದವು. ದುಂಬಿಗಳು ಮಕರಂದದ ನೀರಿನಲ್ಲಿ ಅಘಮರ್ಷಣವನ್ನು ಮಾಡಿದವು. ಕೋಗಿಲೆಗಳು ಇಂಪಾಗಿ ಕೂಗಿದವು. ಆಗ ಸೂರ್ಯನು ಮೂಡಿದನು." ಇಲ್ಲಿ 'ಅಘಮರ್ಷಣ'ವೆಂದರೆ ಪಾಪಪರಿಮಾರ್ಜನೆಯ ಮಂತ್ರವಿಧಿ. ದುಂಬಿಗಳ ಝೇಂಕಾರವನ್ನು ಮಂತ್ರಘೋಷದೊಂದಿಗೆ ಸಮೀಕರಿಸಿದುದು ಒಂದು ಸೌಂದರ್ಯವಾದರೆ, ಕಂಸನ ದುಷ್ಕೃತ್ಯಗಳಿಗೆ ಪರಿಸಮಾಪ್ತಿ ಒದಗಿಬಂದಿದೆ ಎಂಬ ಕಾವ್ಯಧ್ವನಿಯೂ ಇಲ್ಲಿದೆ!

ಸೂರ್ಯಾಸ್ತವನ್ನು ವಿಭಿನ್ನವಾಗಿ ವರ್ಣಿಸುವ ಪರಿಯೊಂದು ಹೀಗಿದೆ:

ಮನೆಗೆ ಪೋಗಲ್ಕನ್ನೆಗಂ ಮಿಸುನಿವೆಟ್ಟಮಂ ।
ತನಗೆ ನಿಚ್ಚಂ ಸುತ್ತುವೀ ದುಃಖ ತೀರದೆಂ ।
ದೆನುತ ಮುನಿಸಂದಳೆದು ಪಶ್ಚಿಮಾಚಲದಿಂದಲಿನನಿಳಿದನಂಬುನಿಧಿಗೆ (72)

"ಮೇರುಪರ್ವತವನ್ನು ಪ್ರತಿನಿತ್ಯ ತನಗೆ ಪ್ರದಕ್ಷಿಣೆಗೈಯುವ ಸಂಕಷ್ಟ ಬೇಡವೆಂದು ಸಿಟ್ಟುಗೊಂಡ ಸೂರ್ಯ ಪಡುವಣಬೆಟ್ಟದಿಂದ ಸಮುದ್ರಕ್ಕೆ ಇಳಿದ"ನೆಂಬ ಮಾತು ಮನೋಹರವಾದುದು. (ಕನಕದಾಸರ ಮೋಹನತರಂಗಿಣಿಯಲ್ಲಿ ಇಂತಹ ಮಾತಿದೆ. "ಮೇರುಪರ್ವತವ ಸುತ್ತುವ ಭಾರ ತನಗಿರ್ದು ತೀರುವುದಿಲ್ಲೆಂದು ಸೂರ್ಯ; ವಾರುವರಥಗೂಡಿ ಪಡುವೆಟ್ಟ ಶಿಖರದಿ ನೀರೊಟ್ಟಿಲೊಳು ಬಿದ್ದ ಮುದದಿ" – 18–3).

ಕಾಲಂದುಗೆಯನು ಕರದೊಳ್ । ಕೆಲ ।
ರೋಲೆಯ ಬೆರಳ್ಗಳೊಳ್ ಕಡಗವ ಕಿವಿಯೊಳ್ ॥
ಲೀಲೆಯೊಳಿಟ್ಟು ಚಚ್ಚರದೊಳ್ । ಶ್ರೀ ।
ಲೋಲನ ಮುಖಕಮಲವ ಕಾಂಬ ಭರದೊಳ್ ॥ (221)

ಮಥುರಾನಗರಿಯಲ್ಲಿ ಶ್ರೀಕೃಷ್ಣನನ್ನು ನೋಡಲೆಳಸಿದ ಹೆಂಗಸರ ಗಡಿಬಿಡಿಯಿಲ್ಲಿದೆ! "ಕಾಲಿಗೆ ಧರಿಸುವ ಗೆಜ್ಜೆಯನ್ನು ಕೈಗೆ ಇಟ್ಟರಂತೆ! ಓಲೆಗಳನ್ನು ಬೆರಳಿಗೆ ಹಾಕಿಕೊಂಡರಂತೆ! ಕೈಬಳೆಗಳನ್ನು ಕಿವಿಗಳಿಗೆ ಸಿಕ್ಕಿಸಿಕೊಂಡರಂತೆ!" ಇದೇ ತೆರನಾದ ವರ್ಣನೆ ಮುದ್ದಣಕವಿಯ ಶ್ರೀರಾಮಪಟ್ಟಾಭಿಷೇಕದಲ್ಲೂ ("ಪಸುರೆಲೆಯ ಬೆಲ್ಲವತ್ತಂಗೆತ್ತು: 4–13) ಬರುತ್ತದೆ.

ಭ್ರಮರ ಬಾಲಹಿಮಾಂಶು ಕಾರ್ಮುಕ ಕುಮುದ ಸ್ಫುಟ ತಿಲಕುಸುಮವೋ ॥
ಪ್ರಮದೆಯಳ ಕುಂತಳ ಲಲಾಟ ಭ್ರೂ ನಯನ ನಾಸಿಕವೊ ಮೇಣ್ ।
ಕಮಲ ಕಾಂಚನಕಲಶ ಪುಳಿನವೊ ಮುಖ ಪಯೋಧರ ಜಘನವೋ ।
ಭ್ರಮೆಯಗೊಳಿಪುದಿದೆಂಬಿನಿಂ ಕಣ್ಗೆಸೆದಳಾ ಸೀಮಂತಿನಿ ॥ (264)

ಶ್ರೀಕೃಷ್ಣನ ಕೃಪಾಕಟಾಕ್ಷದಿಂದ ತ್ರಿವಕ್ರೆಯಾಗಿದ್ದ ಕುಬ್ಜೆಯು ಅಪೂರ್ವ ಸುಂದರಿಯಾಗಿ ಕಂಗೊಳಿಸಿರುವುದನ್ನು ಇದು ಬಣ್ಣಿಸುತ್ತದೆ. "ಕುಬ್ಜೆಯ ಮುಂಗುರುಳು, ಹಣೆ, ಹುಬ್ಬು, ಕಣ್ಣು, ಮೂಗುಗಳು ದುಂಬಿಯೋ, ಚಂದ್ರನೋ, ಬಿಲ್ಲೋ, ನೈದಿಲೆಯೋ, ತಿಲಪುಷ್ಪವೋ ಎಂಬಂತೆ ಭಾಸವಾದವು! ಅವಳ ಮುಖ, ಸ್ತನ, ಜಘನಗಳು ತಾವರೆ, ಬಂಗಾರದ ಕಲಶ, ಮರಳದಿನ್ನೆಗಳೋ ಎಂಬ ಭ್ರಮೆಯನ್ನು ಉಂಟುಮಾಡಿದವು!" ಯಕ್ಷಗಾನ ಕಾವ್ಯಪ್ರಪಂಚದಲ್ಲೇ ಇದೊಂದು ಅನನ್ಯಚಿತ್ರ. ಇಲ್ಲಿ ಉಪಮಾನ ಮತ್ತು ಉಪಮೇಯಗಳನ್ನು ಬೇರೆಬೇರೆಯಾಗಿ ಹೇಳಿದರೂ, ಅವುಗಳನ್ನು ಕ್ರಮಾನುಗತಿಯಲ್ಲಿ ಜೋಡಿಸಿದ ಕವಿಪ್ರತಿಭೆ ಗಮನಾರ್ಹವಾದುದು.

ದೃಷ್ಟಾಂತಗಳನ್ನು ನೀಡುವಲ್ಲಿ ದೇಸಿಯ ಸೊಬಗನ್ನು ನೋಡಬಹುದು. ಉದಾ: 'ಚಂದ್ರನ ಕಿರಣಕ್ಕೆ ಮುಸುಡು ಕಂದುವುದೆ', 'ಕಳಿಲೆಯುಗುರಿಂದ ಮುರಿದಂತೆ ಲಳಿಗೆಯಾದ ಮೇಲಂಜುವದೆ', 'ಎಳೆಯ ನಾಗನ ವಿಷವು ನೋಡಲೆಳತಾಗುವದೆ', 'ಸಿಂಗವಾನೆಗೆ ಬೆದರಿನಡೆವುದೆ ಸಾರಂಗಕಂಜಿ ಪೆರ್ಬುಲಿಯು ಬಿಡುವುದೆ' ಇತ್ಯಾದಿ. 'ಬಳಿಕ ಫಲದಾಸೆಯೊಳು ಸುಮವ

ಮೀರ್ವಂತೆ', 'ಜಗತಿಯೆಂಬಂಗನೆಯ ನಗೆಮೋಗವಿದೆಂಬಂತೆ', 'ಗಾಳಿ ಬೆಂಬಲವಾದ ಶಿಖಿಯವೋಲ್', 'ಸಂದ ಪುಣ್ಯದ ತಾರೆಗಳು ನಭದಿಂದ ಬೀಳ್ವಂತೆ', 'ವಾರಿನಿಧಿ ದೆಸೆದಪ್ಪಿಯೊಂದೇ ಬಾರಿ ಬಹುದೆಂಬಂತೆ' ಮುಂತಾದ ಉಪಮೆಗಳೂ ಮನನೀಯ.

ಕಂಗಳೊಳಂ ಕಮಲಾಂಬಕ ।
ನಂಗಸುಧಾರಸವನೀಂಟುತಂ ಜನರಾಗಳ್ ॥
ಹಿಂಗದೆ ತೀವಿದ ಹರುಷದಿ ।
ಹೊಂಗುತ ಸುಖವಾರ್ಧಿಯೊಳಗೆ ಮುಳುಗುತ ನುಡಿದರ್ ॥ (341)

ಶ್ರೀಕೃಷ್ಣನ 'ಅಂಗಸುಧಾರಸ'ವನ್ನು ಜನರು ಕಣ್ಣುಗಳಲ್ಲೇ ಕುಡಿದರಂತೆ! ಅದು ಸಾಲದೆಂಬಂತೆ ಸಂತೋಷದಲ್ಲಿ ಓಲಾಡಿ 'ಸುಖವಾರ್ಧಿ'ಯಲ್ಲಿ ಮುಳುಗಿದರಂತೆ! ಕಮಲದ ಕಣ್ಣುಳ್ಳವನ ಚೆಲುವನ್ನು ಕಣ್ಣುಗಳಲ್ಲೇ ಕುಡಿದರೆಂಬಲ್ಲಿಯೂ ಬೆಡಗಿದೆ. ಹೀಗೆ ಈ ರೂಪಕಾಲಂಕಾರವೂ ಕಮನೀಯ ಕಾವ್ಯದ ಕಾಣ್ಕೆಯಾಗಿದೆ.

'ಇನಜನೂರಿಗುಂಬಳಿಯನು ಬಿಡುವೆವೆಂದರು' (285) ಎಂಬಲ್ಲಿರುವ ವಕ್ರೋಕ್ತಿವಿಲಾಸ ದೊಡ್ಡದು. 'ಹಾರುವರು ಮಂತ್ರದಕ್ಷತೆಯ ಬಿತ್ತಿದರು' (417), 'ಸುಮ್ಮಾನದ ಸುಖದ ಸುಗ್ಗಿಯನು' (421), 'ನೆತ್ತಿಯೊಳ್ಮುಡಿದೆನು ಹಸ್ತದಂಜಲಿಯ' (186) ಮುಂತಾದ ವಾಕ್ಯಗಳು ಕವಿಪ್ರತಿಭೆಗೆ ಸಾಕ್ಷಿಯಾಗಿವೆ. 'ಪದಹತಿಗೆ ಧರೆಯ ಬಲಿಸದನವನು ಪೊಗಿಸುತ್ತ (76) ಎಂಬುದು ಕೇಶಿದಾನವನ ಭಯಂಕರ ಹೆಜ್ಜೆಗತಿಯನ್ನು ಉತ್ಪ್ರೇಕ್ಷಿಸುವ ರೀತಿ. ಅವನು ಹೆಜ್ಜೆಯಿಟ್ಟಾಗ ಭೂಮಿಯೇ ಪಾತಾಳಕ್ಕೆ ಕುಸಿಯಿತು ಎಂಬುದು ಕವಿಯ ವಿವಕ್ಷೆ.

ಭಾಷಾಪ್ರಯೋಗ:

ಏವೆ (ಏನು ಮಾಡುವೆ), ಹೊಳಲೊಪ್ಪ (ಪುರದ ಚೆಲುವು), ಗಳಹು (ಒದರು), ನಿಗುಚು (ಮೇಲೆತ್ತು), ಬಿನುಗು (ಕ್ಷುದ್ರ) ಮುಂತಾದ ನಡುಗನ್ನಡ ಪದಗಳು ಯಕ್ಷಗಾನಶೈಲಿಗೆ ಚೆನ್ನಾಗಿ ಒಪ್ಪುತ್ತವೆ. ಕೆಲವೊಂದು ಪ್ರಯೋಗಗಳು ವಿಶಿಷ್ಟವಾಗಿರುವುದು ಗಮನಾರ್ಹ. ಉದಾ:

'ಸೈರಂಧ್ರಿಗೊಲಿದಿತ್ತ ಭಾಷೆಯ ತಿದ್ದಿ' (438) ಎಂಬುದು ವಿಶಿಷ್ಟವಾದ ಪ್ರಯೋಗ. ಇಲ್ಲಿ 'ತಿದ್ದು'ವುದೆಂದರೆ 'ತೀರ್ಚು' ಅಥವಾ 'ಮುಗಿಸು' ಎಂಬರ್ಥ. ('ತಿದ್ದಿತೇ ಭವದೀಯ ಕರ್ಣದ ಹೊದ್ದಿಗೆ'- ತೊರವೆ ರಾಮಾಯಣ: 2-6-25) ಕೊಟ್ಟ ಭಾಷೆಯನ್ನು ಈಡೇರಿಸಿದನೆಂಬುದು ಭಾವಾರ್ಥ. ಕುಬ್ಜೆಯ ವಕ್ರತೆಯನ್ನು ತಿದ್ದಿದ ಭಗವಂತ ಇಲ್ಲಿ ಭಾಷೆಯನ್ನೂ ತಿದ್ದಿಬಿಟ್ಟ!

ಬಹೆ ನಿನ್ನ ಮನೆಗೆ ಮುದದಿ । ಪರಿವಾರ ।
ಸಹಿತಲಿ ನಿರಾಲಸ್ಯದಿ ॥
ವಿಹಿತವೈ ನೀ ಪೇಳ್ದುದು । ಶರಣುಗಳ ।
ಗೃಹದೊಳಾರೋಗಿಸುವುದು ॥ (201)

ಇದು ಅಕ್ರೂರನಿಗೆ ಶ್ರೀಕೃಷ್ಣನ ಪ್ರತ್ಯುತ್ತರ. ಇಲ್ಲಿಯ 'ಶರಣುಗಳ' ಎಂಬ ಪದಪ್ರಯೋಗ ವಿಶಿಷ್ಟವಾದುದು. ವಂದನಾರ್ಥದ 'ಶರಣು' ಇಲ್ಲಿ ಭಕ್ತಿನಿವೇದನೆಯ ಜೊತೆಗೆ 'ನೈವೇದ್ಯ/ಆತಿಥ್ಯ' ಎಂಬ ಅರ್ಥಧ್ವನಿಯನ್ನೂ ಪಡಿಮೂಡಿಸುತ್ತದೆ!

ಛಂದಸ್ಸು:

ಯಕ್ಷಗಾನಛಂದಸ್ಸಿನ ಎಲ್ಲ ಮಾದರಿಗಳನ್ನೂ ಈ ಕವಿ ಬಳಸಿಕೊಂಡಿದ್ದಾರೆ ಎನ್ನಬಹುದು. ಸೌರಾಷ್ಟ್ರ-ತ್ರಿವುಡೆ, ಭೈರವಿ-ತ್ರಿವುಡೆ, ಕಾಂಭೋದಿ-ಝಂಪೆ, ಭೈರವಿ-ರಝಂಪೆ, ಶಂಕರಾಭರಣ-ಅಷ್ಟ, ಕೇದಾರಗೌಳ-ಅಷ್ಟ, ಆರ್ಯಾಸವಾಯಿ-ಏಕ, ಮುಖಾರಿ-ಏಕ, ಭೈರವಿ-ಏಕ, ಶಂಕರಾಭರಣ-ಮಟ್ಟೆ ಮುಂತಾದ ಪ್ರಸಿದ್ಧ ಛಂದೋಬಂಧಗಳ ಜೊತೆಗೆ ಸಾಂಗತ್ಯ, ದ್ವಿಪದಿ, ಕಂದಪದ್ಯಗಳನ್ನೂ ಬಳಸಿದ್ದಾರೆ. ಭಾಮಿನಿ, ವಾರ್ಧಕಗಳ ಜೊತೆಗೆ ಶರ, ಕುಸುಮ, ಭೋಗ ಷಟ್ಪದಿಗಳನ್ನೂ ಬಳಸಿರುವುದು ವಿಶೇಷವಾಗಿದೆ. ಶಾರ್ದೂಲವಿಕ್ರೀಡಿತ, ಚಂಪಕಮಾಲೆ ಮತ್ತು ಮತ್ತೇಭವಿಕ್ರೀಡಿತ ವೃತ್ತಗಳು ಬಳಕೆಯಾಗಿವೆ. ಇವುಗಳಲ್ಲಿ ಮತ್ತೇಭವಿಕ್ರೀಡಿತವನ್ನು 'ಗಜವಿಕ್ರೀಡಿತ' ಎಂದು ಹೆಸರಿಸಲಾಗಿದೆ.

ಅಪೂರ್ವವಾಗಿ 'ತಾರಾವಳಿವೃತ್ತ-ದಂಡಕ' ಎಂಬ (385) ಛಂದೋಬಂಧವನ್ನು ಈ ಪ್ರಸಂಗದಲ್ಲಿ ನೋಡಬಹುದು. ಇಪ್ಪತ್ತೊಂಬತ್ತು ಸಾಲುಗಳ ಈ ತಾರಾವಳಿ ಛಂದಸ್ಸು ವಿಶೇಷವಾದುದು. ಪ್ರತಿಪಾದದಲ್ಲಿ

ದ್ವಿತೀಯಾಕ್ಷರ ಪ್ರಾಸವಿರುವ ಎರಡು ವಿಷ್ಣುಗಣಗಳ ಬಳಕೆ ಮತ್ತು ಅದನ್ನು ದಂಡಕವೆಂದು ಕರೆದಿರುವುದು ಗಮನಾರ್ಹ. (ಕನ್ನಡಕಾವ್ಯಗಳಲ್ಲಿ ದೊರೆತ ತಾರಾವಳಿಗಳಲ್ಲಿ 27 ಮತ್ತು ಅದಕ್ಕಿಂತ ಕಡಿಮೆ ಪಾದಗಳಿದ್ದು, ಪ್ರತಿಪಾದದಲ್ಲಿ ನಾಲ್ಕು ವಿಷ್ಣುಗಣಗಳಿರುವ ಉದಾಹರಣೆಗಳು ದೊರೆತಿವೆ. ನೋಡಿ: ಡಾ. ಎಂ. ಚಿದಾನಂದ ಮೂರ್ತಿ– ಛಂದೋತರಂಗ, ಪುಟ 270)

'ಕಕ್ಕುಭ' ಎಂಬ (192) ಛಂದಸ್ಸಿನ ಸೂಚನೆಯಿದೆಯಾದರೂ ಅದು 'ಕಕುಪ್/ಕಕುಭ್' ಎಂಬ ವೈದಿಕಛಂದಸ್ಸನ್ನು ಹೋಲುವುದಿಲ್ಲ. ಶ್ರೀಕೃಷ್ಣನನ್ನು ಸ್ತುತಿಸುವ ಸಂದರ್ಭದಲ್ಲಿ ಕಂಡುಬರುವ 'ದಶಾವತಾರ' ಕೀರ್ತನೆಯೊಂದು (342) ಯಕ್ಷಗಾನ ಮತ್ತು ದಾಸಸಾಹಿತ್ಯಗಳ ಅವಿನಾಭಾವ ಸಂಬಂಧಕ್ಕೆ ಸಾಕ್ಷಿಯಂತಿದೆ.

ಮೂಲಕಾಸುರ ಕಾಳಗ:

ಈ ಪ್ರಸಂಗದ ಕವಿ ರತ್ನಪುರದ ರಾಮ. 'ತಾಮ್ರಧ್ವಜ ಕಾಳಗ' ಮತ್ತು 'ಮೂಲಕಾಸುರ ಕಾಳಗ' ಎರಡೂ ಇವನ ಕೃತಿಗಳು. ಉತ್ತರಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ಶಿವಪುರದವನೆಂಬ ಅಭಿಪ್ರಾಯವಿದೆ. ಅವನ 'ಮೂಲಕಾಸುರ ಕಾಳಗ' ಕೃತಿಯಲ್ಲಿ ದೊರಕುವ ಕವಿಮುದ್ರಿಕೆ ಹೀಗಿದೆ:

ಧರೆಯೊಳು ಶತ್ರುತ್ಕರೀಪುರಮಧ್ಯವಾಸಿ ಭೂ ।
ಸುರಕುಲೋತ್ಪನ್ನ ಕಾಶ್ಯಪಗೋತ್ರಭವ ಮನೋ ।
ಹರ ತಿರುಮಲಾರ್ಯನ ಸುಪುತ್ರ ಶಂಕರನ ಕುಲಸತಿ ಸರಸ್ವತಿಸೂನು ನಾ ॥
ಪರಮಗುರುವರ್ಯ ಸುಬ್ರಹ್ಮಣ್ಯನಂಘ್ರಿಪಂ ।
ಕರುಹದೊಲವಿಂದ ವಿರಚಿಸಿದೆನೀ ಕಾವ್ಯಮಂ ।
ತರಳ ರಾಮನ ಬಾಲಭಾಷಿತವನುದ್ಧರಿಸಿ ಸುಜನರೊಲಿದಾಲಿಸುವುದು ॥ (335)

ಇದರ ಅರ್ಥ: "ರತ್ನಪುರದಲ್ಲಿ ವಾಸವಾಗಿರುವ ಬ್ರಾಹ್ಮಣಕುಲದ ಕಾಶ್ಯಪಗೋತ್ರದ ತಿರುಮಲನ ಸುಪುತ್ರನಾದ ಶಂಕರನ ಮಡದಿಯಾದ ಸರಸ್ವತಿಯ ಮಗನಾದ ರಾಮನು ಸುಬ್ರಹ್ಮಣ್ಯಗುರುಗಳ ಆಶೀರ್ವಾದದಿಂದ ಈ ಕಾವ್ಯವನ್ನು ರಚಿಸಿದ್ದೇನೆ. ಈ ಬಾಲಭಾಷಿತವನ್ನು ಸಜ್ಜನರು ಪ್ರೀತಿಯಿಂದ ಆಲಿಸುವುದು" ಎಂದು. ಈ ಪ್ರಸಂಗದ ನಾಂದಿಯಲ್ಲಿ 'ರತ್ನಪುರದ ವೆಂಕಟೇಶ'

ಮತ್ತು 'ಬೆಪ್ಪಳಿನಿಲಯದ ಗೋಪೀನಾಥ'ನ ಸ್ಮರಣೆಯಿದೆ. ಡಾ. ಶಿವರಾಮ ಕಾರಂತರು ಇವನ ಕಾಲವನ್ನು ಪ್ರಸಂಗದ ತಾಡವಾಲೆಯ (ಕ್ರಿ.ಶ. 1691) ಆಧಾರದಿಂದ ಹದಿನೇಳನೆಯ ಶತಮಾನದ ಆದಿಭಾಗವೆಂದು ತರ್ಕಿಸಿದ್ದಾರೆ.

ಮೂಲಕಾಸುರ ಕಾಳಗದ ಕಥಾವಸ್ತುವಿಗೆ ಮೂಲ ಯಾವುದೆಂದು ತಿಳಿಯದು. ಆದರೆ ಅದರಲ್ಲಿ ಬರುವ ಕುಶನು ದರ್ಭೆಯಲ್ಲಿ ಜನಿಸಿದನೆಂಬ ಜನ್ಮವೃತ್ತಾಂತವು ಜನಪದ ರಾಮಾಯಣಕ್ಕೆ ಋಣಿಯಾಗಿದೆ ಎನ್ನಬಹುದು. ಕುಶನು ಅಯೋನಿಜನಾದ ಕಾರಣದಿಂದಲೇ ಮೂಲಕಾಸುರನನ್ನು ವಧಿಸಲು ಸಮರ್ಥನಾದನೆಂಬುದು ಇಲ್ಲಿಯ ಕಥೆಯ ವಿಶೇಷತೆ.

ರಾಮಾಯಣದ ಕಥೆಯನ್ನು ಸಂಕ್ಷೇಪವಾಗಿ ಹೇಳಿ, ರಾವಣವಧಾನಂತರದಲ್ಲಿ ಸೀತೆಯ ಅಗ್ನಿಪ್ರವೇಶವನ್ನು ನಿರೂಪಿಸಿ ಶ್ರೀರಾಮನು ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗುವುದು ಪ್ರಸಂಗದ ಪೂರ್ವಭಾಗವಾದರೆ, ರಾವಣಪುತ್ರನಾದ ಮೂಲಕಾಸುರನು ವಿಭೀಷಣನನ್ನು ಲಂಕೆಯಿಂದ ಓಡಿಸುವುದು, ಅಯೋಧ್ಯೆಯ ಮೇಲೆ ದಾಳಿಮಾಡುವುದು, ಯುದ್ಧದಲ್ಲಿ ಲಕ್ಷ್ಮಣಾದಿಗಳನ್ನು ಸೋಲಿಸುವುದು, ಕೊನೆಗೆ ಕುಶನಿಂದ ಸಾಯುವುದು ಉತ್ತರಭಾಗವಾಗಿ ರಂಗದಲ್ಲಿ ರಂಜಿಸುತ್ತದೆ. (ರಾವಣನಿಗೆ ಮೂಲಾನಕ್ಷತ್ರದಲ್ಲಿ ಅರಿಷ್ಟಸೂಚಕನಾಗಿ ಜನಿಸಿದ ಮೂಲಕನೆಂಬವನನ್ನು ಕಾಡಿನಲ್ಲಿ ಬಿಟ್ಟ ಕಥಾಹಂದರ ರಂಗದಲ್ಲಿ ಅಭಿನೀತಗೊಳ್ಳುವುದಿಲ್ಲ.) ಪರಿಚಿತವಲ್ಲದ ಕಥೆ, ಸಂವಾದದ ಸೊಬಗು, ಯುದ್ಧದೃಶ್ಯಗಳು ಈ ಪ್ರಸಂಗದ ವಿಶೇಷತೆ.

ಕಾವ್ಯದ ಮನೋಹರತೆಯೂ ಗಮನಾರ್ಹವಾಗಿದೆ. ಹಲವಾರು ವಾರ್ಧಕ ಷಟ್ಪದಿಗಳು ಅನುಪ್ರಾಸವೈಭವದಿಂದ ಮನಸೆಳೆಯುತ್ತವೆ. ಒಂದೆರಡು ಉದಾ:

ಸರಸಿಜಾದಳನೇತ್ರೆ ಲಲಿತಮಂಗಳಗಾತ್ರೆ ।
ಮೆರೆವ ಮುಕುರಕಪೋಲೆ ಮಧುಪಕುಂತಳಜಾಲೆ ।
ಮಿರುಪ ಮಂಜುಳಭಾಸೆ ಮುಕುಳಚಂಪಕನಾಸೆ ಶಶಿವದನೆ ಕುಂದರದನೆ॥
ಸರಸಗುಣಸಂಪನ್ನೆ ಕಾಮಿನೀಕುಲರನ್ನೆ ।
ಉರಗಸನ್ನಿಭವೇಣಿ ಮಧುರಕೋಕಿಲವಾಣಿ ।
ನಿರುಪಮ ಮಹೀಜಾತೆ ಮುದದಿ ತ್ರಿಜಗನ್ಮಾತೆ ಮಣಿಪರಿಸ್ತೃತೆಯಾದಳು ॥ (33)

ಕುಸುಮ ಫಲಭಾರದಿಂದಳಿಯ ಝೇಂಕಾರದಿಂ ।
ಲಸದುತ್ತ್ರವಾಳದಿಂ ಶುಕಪಿಕ ಮರಾಳದಿಂ ।
ಶ್ವಸನ ದಾಳಿಂಬದಿಂ ವಟ ಶಮಿ ಕದಂಬದಿಂ ಪೂಗಪುನ್ನಾಗದಿಂದ ॥
ಕಿಸಲಯ ಮರೀಚಿಯಿಂದಪರಿಮಿತ ವೀಚಿಯಿಂ ।
ದೆಸೆವ ಕಾಸಾರದಿಂದಮಲಪಯಪೂರದಿಂ ।
ಬಿಸಜಸುಮಗಂಪಿನಿಂ ಶ್ರಮಗಳವತಂಪಿನಿಂದೆಸೆದಿರ್ದವಾ ವನಗಳು ॥ (129)

ಪೆಗಲೊಳೇರಿಸಿದ ನವ ತೂಣದಿಂ ಬಾಣದಿಂ ।
ಬಗೆಬಗೆಯ ವಾದ್ಯಗಳ ಘೋಷದಿಂ ತೋಷದಿಂ ।
ದೃಗುಯುಗದೊಳೊಗೆವ ಕೂರ್ಗಿಡಿಗಳಿಂದಡಿಗಳಿಂ ಪೊಡವಿ ಕಂಪಿಸುತಿರಲ್ಕೆ ॥
ಸಗರಾನ್ವಯನ ಕೃಪೆಯ ಬಲದಿಂದ ಛಲದಿಂದ ।
ಮೃಗರಾಜರವ ಪರಾಕ್ರಮದಿಂದ ಕ್ರಮದಿಂದ ।
ಸುಗದಾಸಿ ಪರಶು ತೋಮರದಿಂದ ಭರದಿಂದ ಪೊರಮಟ್ಟುದಾ ವಾಹಿನಿ ॥ (144)

ಈ ಷಟ್ಪದಿಗಳಲ್ಲಿ ಲಾಟಾನುಪ್ರಾಸದ ಸೊಬಗಿದೆ. ಮೊದಲಿನ ಎರಡು ಷಟ್ಪದಿಗಳ ಪ್ರಾಸರೂಪಕ್ಕೂ, ಅನಂತರದ ಷಟ್ಪದಿಯ ಪ್ರಾಸರೂಪಕ್ಕೂ ಅಂತರವಿರುವುದನ್ನು ಗಮನಿಸಬಹುದು. ಗಾಯನದಲ್ಲಿ ಈ ಪ್ರಾಸಶಬ್ದಗಳು ನಾದಮನೋಹರತೆಗೆ ಕಾರಣವಾಗುವುದನ್ನು ರಸಜ್ಞರು ಬಲ್ಲರು.

ಶ್ರೀರಾಮನ ಆಡಳಿತದ ಸುಖಸಂತೃಪ್ತಿಯನ್ನು ವರ್ಣಿಸುವ ಎರಡು ವಾರ್ಧಕಷಟ್ಪದಿಗಳು ಗಮನಿಸಬೇಕಾದವುಗಳು. ಅವುಗಳಲ್ಲಿ ಒಂದು ಯಾವುದೇ ರೀತಿಯ ಕೆಡುಕುಗಳಿಲ್ಲವೆಂಬುದನ್ನೂ, ಇನ್ನೊಂದು ಒಳಿತಿನ ಸರಣಿಯೇ ಇದೆಯೆಂಬುದನ್ನೂ ವರ್ಣಿಸುವ ಕವಿಕೌಶಲಗಳು.

ಜಂತುಗಳ ಮೇಲೆ ನಿರ್ದಯವಿಲ್ಲ ಭಯವಿಲ್ಲ ।
ಚಿಂತೆ ನಿಷ್ಠೂರಘರ್ಷಣವಿಲ್ಲ ಋಣವಿಲ್ಲ ।
ಸ್ವಂತದೊಳಜಸ್ರ ಚಂಚಲವಿಲ್ಲ ಛಲವಿಲ್ಲ ವರ್ಣಸಂಕರಗಳಿಲ್ಲ ॥
ಸಂತತಂ ದುಃಖದುಷ್ಕೃತಿಯಿಲ್ಲ ಖತಿಯಿಲ್ಲ ।
ಕ್ರಂತನವ್ಯಾಧಿಸಂಕಟವಿಲ್ಲ ಸಟೆಯಿಲ್ಲ ।
ಕಂತುಶರದುರುಬೆಗಾಸ್ಪದವಿಲ್ಲ ಮದವಿಲ್ಲ ಕೃತಬಂಧನಂಗಳಿಲ್ಲ ॥ (78)

ಎಲ್ಲಿ ನೋಡಿದರು ದಾಕ್ಷಿಣ್ಯಮಯ ಪುಣ್ಯಮಯ ।
ಎಲ್ಲಿಯುಂ ನಡೆವ ಸತ್ಕರ್ಮಮಯ ಧರ್ಮಮಯ ।
ಎಲ್ಲಿಯುಂ ಹರಿಕಥಾನಾದಮಯ ವೇದಮಯ ವಿಪ್ರಸಂತರ್ಪಣೆಗಳು ॥
ಎಲ್ಲಿಯುಂ ಸರ್ವದಾರೋಗ್ಯಮಯ ಭಾಗ್ಯಮಯ ।
ವೆಲ್ಲಿಯುಂ ಶಮೆ ದಮೆ ವಿಭೂತಿಮಯ ನೀತಿಮಯ ।
ಎಲ್ಲಿಯುಂ ಶೋಭಿಪಾರಾಮಮಯ ಹೇಮಮಯವಾದುದಾ ರಾಷ್ಟ್ರದೊಳಗೆ ॥ (79)

ಈ ನಿರೂಪಣೆಯಲ್ಲೂ ವ್ಯಂಜನಸಮತೆಯ ಅಲಂಕಾರವಿದೆ. ಜೊತೆಗೆ ಅರ್ಥಭೂಯಿಷ್ಠವಾದ ಸಾಹಿತ್ಯಶ್ರೀಮಂತಿಕೆಯಿದೆ.

ಛಂದಸ್ಸು :

ಈ ಕವಿಯು ಬಳಸಿದ ವೈವಿಧ್ಯಪೂರ್ಣವಾದ ಯಕ್ಷಗಾನ ಛಂದೋಬಂಧಗಳು ಪ್ರಸಂಗದ ರಸಾಭಿವ್ಯಂಜನೆಗೆ ಪೂರಕವಾಗಿಯೇ ಇದೆ. ಕೆಲವು ಸೃಜನಶೀಲವಾದ ವಿನ್ಯಾಸಗಳು ರಂಗದಲ್ಲಿ ಚೇತೋಹಾರಿಯಾದ ಅನುಭವಕ್ಕೆ ಕಾರಣವಾಗುವುದುರಲ್ಲಿ ಸಂದೇಹವಿಲ್ಲ. ಉದಾ:

ಮಾನಿನಿ ಕೇಳೇನಿದು ಪೇಳ್ ತಿಳಿಯದು ॥ ಪ ॥

ಸತಿಯ ಪುರುಷ ಕೂಡದೆ । ಸುತರು ಬೇಕೆನ್ನದೆ ।
ಕ್ಷಿತಿಗೆ ಜನಿಸಲಪ್ಪುದೇ । ಮ । ನ್ಮತಿಗೆ ಸಂಶಯವಿದೆ ॥

ಖಳನ ಸಂಗರದಲ್ಲಿ । ಒಲವನಂಬರದಲ್ಲಿ ।
ಒಲಿದುಸುರ್ದ ನುಡಿಯಲ್ಲಿ । ನಾ । ತಿಳಿದೆನಾ ದಿನದಲ್ಲಿ ॥ (318–319)

ಈ ಪದ್ಯದ ಉತ್ತರಾರ್ಧದಲ್ಲಿರುವ ಎರಡು ಮಾತ್ರೆಗಳ 'ವರಣ' ಸಂಯೋಜನೆ ಅನ್ಯತ್ರ ಕಂಡುಬಾರದ ವಿಶೇಷಾಂಶ.

ಸಾಮಾನ್ಯವಾಗಿ ಕಂಡುಬರುವ 'ನೀಲಾಂಬರಿ–ರೂಪಕ'ದ ಛಂದೋಬಂಧದಲ್ಲಿ ಆರುಮಾತ್ರೆಯ ಗಣವಿನ್ಯಾಸವಿದ್ದು ವಿಳಂಬಗತಿಯ ಗಾಯನಕ್ಕೆ ಮುದನೀಡುತ್ತದೆ. ವಿಷಮಪಾದಗಳಲ್ಲಿ '6+6+6+6' ಮತ್ತು ಸಮಪಾದಗಳಲ್ಲಿ '6+6+6+3' ಎಂಬ ವಿನ್ಯಾಸವಿರುತ್ತದೆ. ಇದು ಅಚ್ಚಗನ್ನಡದ ಅಂಶಲಯಛಂದಸ್ಸಿನ 'ಮದನವತಿ'ಯ ಮಾತ್ರಾತ್ಮಕ ವಿನ್ಯಾಸ ಎಂಬುದನ್ನು

ಗಮನಿಸಬೇಕು. ಆದರೆ ಇಲ್ಲಿ ಅದು ಕೆಲವೆಡೆ '6+4+4' ಎಂಬ ಧ್ರುವತಾಳದ ಸ್ವರೂಪವನ್ನು ಪಡೆಯುವುದು ಗತಿಭಂಗಕ್ಕೆ ಕಾರಣವಾಗುತ್ತದೆ. ಉದಾ:

ಪಾವನ ಮುನಿ/ ವಂಶೋದ್ಭವ / ರಾವಣನುದ/ ರದಿ ಜನಿಸಿದೆ /
ನೀ ವನದಲಿ / ಬದುಕಿದೆ ವನ / ದೇವತೆಯರ / ದಯದಿ ॥
ದೇವಾರಾ / ತಿಯು ವಿಪಿನಕೆ / ಪಾವಕನಾ / ದೆನೆ ಶಿವಶಿವ /
ಭೂವಳಯದಿ / ಶಾಲೂರನ / ತೆರದಲಿ / ಜೀವಿಸಿ ಫಲ / ವೇನು ॥ (100)

ಕುಲಕಂಟಕ / ನೆನಿಸಿದೆ ಜಗ / ದೊಳಗಿದನರಿ / ಯದೆ ವ್ಯರ್ಥದಿ /
ಸಲೆ ನಿಂದೆಗೆ / ಗುರಿಯಾ / ದೆನೆ ರಣ / ದೊಳಗಳಿದರೆ / ಬಂಧುಗಳು /
ನೆಲನಾಸೆಗೆ / ತನ್ನಣ್ಣನ / ಕೊಲಿಸಿದ ಕಿರಿ / ಯಪ್ಪನು / ಪಾಪದ /
ಕೆಲಸವಿದೆಂ / ದುಳಿಯದೆ / ವೈರಿಗ / ಳೊಳಗಾಗದೆ / ತಾನು ॥ (101)

ಭಾಷೆ :
ಅಮಮ ಭೋರೆಂದುರಿ ಧಡಾಳಿಸಲ್ ತೆಗೆದೆಚ್ಚ ।
ಸುಮತಿ ಕೈಕಾತ್ಮಜನ ಪೇರುರಕೆ ತಾಗಿದುದು ।
ನಿಮಿಷಾರ್ಧದೊಳ್ ಬಟ್ಟೆದೆಗೆಯಲ್ಕೆ ಬೆನ್ನೊಳಗೆ ಧರಣಿಗಂ ಪಸೆಗೈದನು ॥(230)

ಇಲ್ಲಿ 'ಬಟ್ಟೆದೆಗೆಯುವುದು' ಎಂದರೆ ಪಲಾಯನ ಮಾಡುವುದು ಎಂದರ್ಥ. 'ಬೆನ್ನೊಳಗೆ' ಎಂದರೆ ತತ್ಕ್ಷಣದಲ್ಲಿ ಎಂದರ್ಥ. ಇದು ಆಡುನುಡಿಯ ಪ್ರಭಾವದಿಂದ ಉಂಟಾದ ಪ್ರಯೋಗ. ರೂಢಿಯಲ್ಲಿ ಹೇಳುವ 'ಅದರ ಬೆನ್ನಿಗೆ ಬಂದೆ', 'ಅದಾದ ಬೆನ್ನಿಗೆ ತಂದರು' ಮುಂತಾದೆಡೆ 'ವಿಳಂಬಿಸದೆ' ಎಂಬ ಅರ್ಥಚ್ಛಾಯೆ ಕಾಣಿಸುತ್ತದೆ. 'ಧರಣಿಗಂ ಪಸೆಗೈದನು' ಎಂದರೆ 'ಭೂಮಿಗೆ ತಂಪನ್ನು ಉಂಟುಮಾಡಿದನು' ಎಂದರ್ಥ. ಅಪರಿಚಿತಾರ್ಥಗಳನ್ನೇ ಬಳಸಿ ವಾಕ್ಯವನ್ನು ರಚಿಸಿರುವುದು ಇಲ್ಲಿಯ ಕ್ಲಿಷ್ಟತೆ. ಒಟ್ಟಿನಲ್ಲಿ "ಭರತನ ಹೃದಯಕ್ಕೆ ಅಗ್ನಿಶರವು ತಾಗಿದ ಕೂಡಲೇ ಅವನು ಓಡಿಹೋದನು ಮತ್ತು ಮರುಕ್ಷಣದಲ್ಲೇ ಪ್ರತ್ಯಸ್ತ್ರದಿಂದ ಭೂಮಿಯನ್ನು ತಂಪುಗೊಳಿಸಿದನು" ಎಂಬ ಅರ್ಥ ಹೊಳೆಯುತ್ತದೆ.

ಸಂವಾದವಿಶೇಷತೆಗಳು ಈ ಪ್ರಸಂಗದಲ್ಲಿ ಗಮನಸೆಳೆಯುವಂತಿವೆ. 'ಸೀತಾ–ರಾಮ ಸಂವಾದ', 'ಶಿವ–ರಾಮ ಸಂವಾದ', 'ಮೂಲಕ–ನಾರದ ಸಂವಾದ'ಗಳನ್ನು ಇದಕ್ಕೆ ಉದಾಹರಿಸಬಹುದು. ಪರಶಿವನು ಶ್ರೀರಾಮನಲ್ಲಿ ಕೇಳುವ ಪ್ರಶ್ನೆಗಳು ತಾತ್ತ್ವಿಕಚಿಂತನೆಗೆ ಇಂಬುನೀಡುತ್ತವೆ.

ಮೇದಿನೀಶತಿಲಕ ನಮ್ಮೊಳ । ಭೇದಗೊಂಡ ತನುವಿಗೀ ಸ ।
ಮಾಧಿಯೆಂಬುದೊಂದು ಬರಿವಿ । ನೋದ ಬಳಲಿಕೆ ॥
ಸಾಧುಗುಣಸುಶೀಲ ನಿರಪ । ವಾದಿ ನಿನ್ನ ಮನದಿ ಬಯಕೆ ।
ಯಾದುದೆಂತೆನುತ್ತಲಭವ । ಮೋದದಿಂದ ಕರವ ಪಿಡಿದ ॥ (304)

ವಾರಿಯೊಳಗೆ ಕೆಡೆದು । ತೋಯನು ।
ದಾರ ವಾಯು ಬಡಿದು ॥ ಒಣಗಿಸ ।
ಲಾರದಗ್ನಿವಿಡಿದು ॥ ದಹಿಸನು ।
ಬೇರೆ ಶರದಿ ಕಡಿದು ॥ ಕೊಲ್ಲುವ ।
ರಾರು ನೋಡು ನಿರವಯ ನಿಶ್ರೇಯನ ।
ತೋರಿ ತೋರಿದಾದ್ಯಂತರಹಿತನೆಂತಹ ॥ (309)

ಇಲ್ಲಿರುವ 'ಶಿವ-ರಾಮ ಸಂವಾದ'ದಲ್ಲಿ ಹರಿ-ಹರರು ಸ್ವಯಂ ಅಭಿನ್ನರಾಗಿದ್ದೂ, "ಸಮಾಧಿಯೆಂಬುದೊಂದು ಬರಿವಿನೋದ ಬಳಲಿಕೆ" ಎಂಬ ವಿಚಾರದೀಪ್ತಿಯಿದೆ. ಅಲ್ಲಿಯೇ ಗೀತೋಪನಿಷತ್ತಿನ "ನೈನಂ ಛಿಂದಂತಿ ಶಸ್ತ್ರಾಣಿ" 2-23) ಮುಂತಾದ ಚಿಂತನೆಗಳು ಮಡುಗಟ್ಟಿವೆ. ತಾಳಮದ್ದಳೆಗಳಲ್ಲಿ ಈ ಭಾಗ ಹೆಚ್ಚು ರಂಜಿಸಬಹುದಾಗಿದೆ.

ಗ್ರಂಥಸಂಪಾದನೆಯಲ್ಲಿ ಏಕೈಕ ಹಸ್ತಪ್ರತಿಯನ್ನು ಅವಲಂಬಿಸಿರುವುದರಿಂದ, ಪಾಠಾಂತರಗಳ ಪ್ರಮೇಯವಿಲ್ಲ. ಗಣನ್ಯೂನತೆ/ಪಾದನ್ಯೂನತೆಗಳು ಕಂಡುಬಂದ ಪದ್ಯಗಳಲ್ಲಿ ಊಹಾಪಠ್ಯವನ್ನು ಚೌಕಕಂಸದಲ್ಲಿ ನೀಡಲಾಗಿದೆ. ಉದಾ : 2-175, 3-228, 3-346, 3-413, 4-6, 4-65, 4-123, 4-162, 4-252, 4-308, 4-310 ಇತ್ಯಾದಿ.

* * * * *

ಈ ನಾಲ್ಕು ಪ್ರಸಂಗಗಳ ಸಂಪುಟವು ಯಕ್ಷಗಾನ ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡುವವರಿಗೆ ತುಂಬಾ ಸಹಕಾರಿಯಾಗಿದೆ. ಇದನ್ನು ಪ್ರಕಟಿಸುತ್ತಿರುವ 'ಫಣಿಗಿರಿ ಪ್ರತಿಷ್ಠಾನ'ದ ಶ್ರೀ ಉಮೇಶ ಶಿರೂರು ಮತ್ತು ಅವರ ಮಿತ್ರರ ಕಾರ್ಯ ಸ್ತುತ್ಯರ್ಹವಾದುದು. ಅವರಿಗೆ ಸರ್ವಶುಭವನ್ನು ಹಾರಯಿಸುತ್ತೇನೆ.

ದಿನಾಂಕ 15.10.2023 **ಡಾ. ಕಬ್ಬಿನಾಲೆ ವಸಂತ ಭಾರದ್ವಾಜ**
ನವರಾತ್ರಿ ಚರವಾಣಿ : 99450 55534

ಪ್ರಕಾಶಕರ ಮಾತು

ಯಕ್ಷಗಾನಕವಿ ಶಿರೂರು ಫಣಿಯಪ್ಪಯ್ಯವರ ನೆನಪಿನಲ್ಲಿ ನಾವು ಕುಟುಂಬಸ್ಥರು ಮತ್ತು ಯಕ್ಷಾಭಿಮಾನಿಗಳ ಸಹಕಾರದಿಂದ ಪ್ರಾರಂಭಿಸಿದ 'ಫಣಿಗಿರಿ ಪ್ರತಿಷ್ಠಾನ ಶಿರೂರು' ವತಿಯಿಂದ ಯಕ್ಷಗಾನ ಪ್ರಸಂಗ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕಳೆದ ಮೂರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು ನಾಲ್ಕನೆಯ ಕೃತಿಯನ್ನು ಪ್ರಕಟಸುತ್ತಿರುವುದಕ್ಕೆ ಹೆಮ್ಮೆ ಮತ್ತು ಸಂತೋಷವಾಗುತ್ತಿದೆ. ಶಿರೂರು ಫಣಿಯಪ್ಪಯ್ಯ ವಿರಚಿತ ಆರು ಯಕ್ಷಗಾನ ಪ್ರಸಂಗಗಳು ಮತ್ತು ಯಕ್ಷಲೋಕದ ಅಪರೂಪದ ಕೃತಿಯೆಂದು ಗುರುತಿಸಲ್ಪಟ್ಟ ಮೂಲಿಕೆ ವೆಂಕಣ್ಣಕವಿಯ ಮಾನಸಚರಿತ್ರೆ ಪ್ರಸಂಗ ಕೃತಿಗಳನ್ನು ಹಿಂದಿನ ವರ್ಷಗಳಲ್ಲಿ ಹಿರಿಯ ಯಕ್ಷಗಾನ ವಿದ್ವಾಂಸರೂ, ಪ್ರತಿಷ್ಠಿತ 'ಪಾರ್ತಿಸುಬ್ಬ ಪ್ರಶಸ್ತಿ' ಪುರಸ್ಕೃತರೂ ಆದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜರ ಸಂಪಾದಕತ್ವದಲ್ಲಿ ಫಣಿಗಿರಿ ಪ್ರತಿಷ್ಠಾನ ಪ್ರಕಟಿಸಿರುವುದು ಯಕ್ಷಗಾನ ಸಾಹಿತ್ಯಾಭಿಮಾನಿಗಳಿಗೆ ತಿಳಿದ ವಿಷಯವಾಗಿದೆ. ಅದೇ ರೀತಿ ಈ ವರ್ಷ ಕೂಡ ಫಣಿಯಪ್ಪಯ್ಯ ವಿರಚಿತ ಮತ್ತು ಸಂಗ್ರಹಿತ ಪ್ರಸಂಗ ಕೃತಿಗಳನ್ನು ಈ ಸಂಪುಟದಲ್ಲಿ ಡಾ. ಕಬ್ಬಿನಾಲೆಯವರ ಸಂಪಾದಕತ್ವದಲ್ಲಿ ಪ್ರಕಟಿಸುತ್ತಿದ್ದೇವೆ.

ಶಿರೂರು ಫಣಿಯಪ್ಪಯ್ಯ ವಿರಚಿತ 'ಶ್ರೀಕೃಷ್ಣಗಾರುಡಿ' ಮತ್ತು 'ಮಹೇಂದ್ರವಿಜಯ' ಪ್ರಸಂಗಗಳೊಂದಿಗೆ ಅವರು ತಾಳೆಗರಿ ಗ್ರಂಥಗಳಿಂದ ಹಸ್ತಪ್ರತಿ ಮಾಡಿಟ್ಟ ಹಟ್ಟಿಯಂಗಡಿ ರಾಮಭಟ್ಟ ವಿರಚಿತ 'ಬಿಲ್ಲಹಬ್ಬ–ಕಂಸವಧೆ', ಮತ್ತು ರತ್ನಪುರದ ರಾಮಕವಿ ವಿರಚಿತ 'ಮೂಲಕಾಸುರ ಕಾಳಗ' ಎಂಬ ಒಟ್ಟು ನಾಲ್ಕು ಯಕ್ಷಗಾನ ಪ್ರಸಂಗಗಳನ್ನು ಈ ಸಂಪುಟದಲ್ಲಿ ಪ್ರಕಟಿಸುತ್ತಿದ್ದೇವೆ. ಹಟ್ಟಿಯಂಗಡಿ ರಾಮಭಟ್ಟರ 'ಬಿಲ್ಲಹಬ್ಬ–ಕಂಸವಧೆ', ರತ್ನಪುರದ ರಾಮಕವಿಯ 'ಮೂಲಕಾಸುರ ಕಾಳಗ' ಎರಡೂ ಬಹಳ ಅಪರೂಪದ ಪೌರಾಣಿಕ ಪ್ರಸಂಗ ಕೃತಿಗಳಾಗಿದ್ದು ಈವರೆಗೆ ಎಲ್ಲಿಯೂ ಪ್ರಕಟವಾಗಿರುವುದಿಲ್ಲ. ಮೊದಲ ಬಾರಿಗೆ ಈ ಅಪೂರ್ವ ಕೃತಿಗಳನ್ನು ಯಕ್ಷಗಾನ ಸಾಹಿತ್ಯ ಅಭಿಮಾನಿಗಳಿಗೆ ಸಮರ್ಪಿಸುವ ಮೂಲಕ ನಮ್ಮ ತಂದೆ ಶಿರೂರು ಫಣಿಯಪ್ಪಯ್ಯನವರ ಸಾರಸ್ವತ ಶ್ರಮವನ್ನು ಸಾರ್ಥಕಗೊಳಿಸಿದ ಕ್ಷಣ ನಮ್ಮದಾಗಿದೆ. 'ಮಹೇಂದ್ರ ವಿಜಯ' ಯಕ್ಷಗಾನಕೃತಿ ಮೊದಲ ಬಾರಿಗೆ ಪ್ರಕಟವಾಗುತ್ತಿದ್ದು ಬಹಳ

ಹಿಂದೆಯೇ ಖ್ಯಾತ ಭಾಗವತ ದಿವಂಗತ ನಾರ್ಣಪ್ಪ ಉಪ್ಪೂರರ ನಿರ್ದೇಶನದಲ್ಲಿ ಯಶಸ್ವಿಯಾಗಿ ಮೇಳಗಳಲ್ಲಿ ಹಲವು ಪ್ರದರ್ಶನ ಕಂಡ ಪ್ರಸಂಗ. 'ಶ್ರೀಕೃಷ್ಣಗಾರುಡಿ' 1963ರಲ್ಲಿ ಉಡುಪಿಯ ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯದಿಂದ ಪ್ರಕಟಣೆಗೊಂಡಿದ್ದರೂ ಈಗ ಪ್ರತಿಗಳು ಅಲಭ್ಯ ಮತ್ತು ಫಣಿಯಪ್ಪಯ್ಯನವರ ಸಂಪುಟದಲ್ಲಿ ಈ ಪ್ರಸಂಗಕೃತಿ ಕೂಡ ಯಕ್ಷಗಾನ ಆಸಕ್ತರಿಗೆ ಲಭಿಸಲಿ ಎಂಬ ಕಾರಣಗಳಿಂದ ಸೇರಿಸಿದ್ದೇವೆ.

ಮುಂದಿನ ದಿನಗಳಲ್ಲಿ ಯಕ್ಷಗಾನಕವಿಗಳ ಅಪ್ರಕಟಿತ ಪೌರಾಣಿಕ ಛಂದೋಬದ್ಧ ಯಕ್ಷಗಾನ ಪ್ರಸಂಗಗಳನ್ನು ಅವುಗಳ ಹಸ್ತಪ್ರತಿಗಳು ಲಭ್ಯವಾದಂತೆ ಪ್ರಕಟಿಸುವ ಉದ್ದೇಶವನ್ನು ನಮ್ಮ ಪ್ರತಿಷ್ಠಾನ ಹೊಂದಿದೆ. ಈ ಬಗ್ಗೆ ಹಸ್ತಪ್ರತಿಗಳ ಮಾಹಿತಿಗಳನ್ನು ಯಕ್ಷಗಾನ ಪ್ರಸಂಗ ಸಾಹಿತ್ಯಾಭಿಮಾನಿಗಳು ನಮಗೆ ನೀಡುವಂತೆ ಕೋರಿಕೊಳ್ಳುತ್ತಿದ್ದೇವೆ.

ಕಳೆದ ಮೂರು ವರ್ಷಗಳಿಂದ ನಮ್ಮ ಪ್ರಕಟಣೆಯ ಎಲ್ಲ ಪ್ರಸಂಗ ಕೃತಿಗಳನ್ನು ಬಹಳ ಮುತುವರ್ಜಿಯಿಂದ ಪರಿಶೀಲಿಸಿ ಸಂಪಾದಕತ್ವವನ್ನು ಮಾಡಿ ನಮ್ಮ ಕಾರ್ಯಕ್ಕೆ ಪ್ರೋತ್ಸಾಹ ನೀಡುತ್ತಿರುವ ನಾಡಿನ ಹಿರಿಯ ಸಾಹಿತಿ ಹಾಗೂ ಯಕ್ಷಗಾನ ವಿದ್ವಾಂಸ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಅವರಿಗೆ, ಸುಂದರವಾಗಿ ಮುದ್ರಿಸಿಕೊಟ್ಟ ಓಂಶಿವಪ್ರಕಾಶ ಅವರಿಗೆ, ಹಸ್ತಪ್ರತಿ ಗಣಕೀಕರಣಗೊಳಿಸಲು ಸಹಕರಿಸಿದ ಶ್ರೀ ಎಸ್. ಆರ್. ರಘುಭಟ್ ಅವರಿಗೆ ತುಂಬು ಹೃದಯದ ಕೃತಜ್ಞತೆಯನ್ನು ಅರ್ಪಿಸುತ್ತಿದ್ದೇವೆ. ನಮಗೆ ಸಲಹೆ ಸಹಕಾರ ನೀಡಿ ನಮ್ಮ ಪ್ರತಿಷ್ಠಾನದ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುತ್ತಿರುವ ಎಲ್ಲ ಯಕ್ಷಗಾನ ಅಭಿಮಾನಿಗಳಿಗೆ ಮತ್ತು ಪ್ರತಿಷ್ಠಾನದ ಎಲ್ಲ ಸದಸ್ಯರಿಗೆ ಹೃತ್ಪೂರ್ವಕ ವಂದನೆಗಳು.

ದಿನಾಂಕ 15.10.2023
ನವರಾತ್ರಿ

ಉಮೇಶ ಶಿರೂರು
ಚರವಾಣಿ : 94483 53910

ಪರಿವಿಡಿ

ರತ್ನಪುರದ ರಾಮ ವಿರಚಿತ

ಯಕ್ಷಗಾನ

ಮೂಲಕಾಸುರ ಕಾಳಗ

(ಹಸ್ತಪ್ರತಿ ದಿನಾಂಕ 09-08-1985)

ಕಥಾಸಾರ

ಶ್ರೀರಾಮಚಂದ್ರನು ರಾವಣಾದಿ ರಾಕ್ಷಸರನ್ನು ಸಂಹರಿಸಿದ ಬಳಿಕ ವಿಭೀಷಣನಿಗೆ ಪಟ್ಟವಾಗುತ್ತದೆ. ಅನಂತರ ಸೀತಾಮಾತೆಯನ್ನು ಕರೆತರಲು ಸುಗ್ರೀವನಿಗೆ ಸೂಚಿಸುತ್ತಾನೆ. ಅವನು ಬಂದು ತಿಳಿಸಿದ ಕೂಡಲೇ ಸೀತಾಮಾತೆಯು ಸಂತೋಷದಿಂದ ದಂಡಿಗೆಯನ್ನೇರಿ ಹೊರಟುಬರುತ್ತಾಳೆ. ಶ್ರೀರಾಮನು ಇದನ್ನು ಅವಿನಯವೆಂದು ಭಾವಿಸಿ ವಿಭೀಷಣನೇ ಮೊದಲಾದವರಲ್ಲಿ ಅಸಂತೋಷವನ್ನು ವ್ಯಕ್ತಪಡಿಸಿದಾಗ, ಸೀತೆಯು ಅಂದಣದಿಂದ ಕೂಡಲೇ ಕೆಳಗೆ ಇಳಿದು ನಡೆದುಕೊಂಡೇ ಬಂದು ಪತಿಗೆ ನಮಸ್ಕರಿಸುತ್ತಾಳೆ. ಆಗ ಶ್ರೀರಾಮನು ಅವಳನ್ನು ನೋಡದೆ ಮುಖತಿರುಗಿಸಿದಾಗ, ಸುಗ್ರೀವಾದಿ ವಾನರರೂ, ಬ್ರಹ್ಮಾದಿ ದೇವತೆಗಳೂ ಅವಳನ್ನು ಸ್ವೀಕರಿಸುವಂತೆ ಬಗೆಬಗೆಯಾಗಿ ವಿನಂತಿಸಿಕೊಳ್ಳುತ್ತಾರೆ. ಆಗ ಸೀತೆಯು ತನ್ನ ಪರಿಶುದ್ಧತೆಯನ್ನು ಸ್ಥಾಪಿಸುವುದಕ್ಕಾಗಿ ಅಗ್ನಿಪ್ರವೇಶವನ್ನು ಮಾಡುತ್ತಾಳೆ. ಆ ಪರೀಕ್ಷೆಯಲ್ಲಿ ಗೆದ್ದಮೇಲೆ ಅವಳನ್ನು ಪರಿಗ್ರಹಿಸಿದ ಶ್ರೀರಾಮನು ಪುಷ್ಪಕವಿಮಾನವನ್ನೇರಿ ಅಯೋಧ್ಯೆಗೆ ಆಗಮಿಸುತ್ತಾನೆ. ಅನಂತರ ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡಿ ಎಲ್ಲರೂ ಆನಂದಭರಿತರಾಗುತ್ತಾರೆ.

ಘೋರಕಾನನದ ಮಧ್ಯದಲ್ಲಿ ರಾವಣಾಸುರನ ಮಗನಾದ ಮೂಲಕಾಸುರನೆಂಬವನು ಬೆಳೆಯುತ್ತಾ ಇರುತ್ತಾನೆ. ಅವನಲ್ಲಿಗೆ ಬಂದ ನಾರದರು ಅವನ ಜನ್ಮಸಂಗತಿಯನ್ನು ತಿಳಿಸಿ, ರಾವಣಾದಿ ರಾಕ್ಷಸರನ್ನು ಶ್ರೀರಾಮನು ಸಂಹರಿಸಿದ ಸಂಗತಿಯನ್ನು ಹೇಳಿ ನಿರ್ಗಮಿಸುತ್ತಾರೆ. ಇದರಿಂದ ನೊಂದುಕೊಂಡ ಮೂಲಕಾಸುರನ ಬಳಿಗೆ ವನದೇವತೆಯರು ಬಂದು ಸಂತೈಸುತ್ತಾರೆ. ಪರಶಿವೆಯನ್ನು ತಪಸ್ಸಿನಿಂದ ಒಲಿಸಿಕೊಳ್ಳೆಂದು ಸಲಹೆ ನೀಡುತ್ತಾರೆ. ಅದರಂತೆ ಅವನು ಸಾವಿರ ವರ್ಷಗಳ ಕಾಲ ನಿರಶನವ್ರತದ ಘೋರ ತಪಸ್ಸನ್ನು ಮಾಡುತ್ತಾನೆ. ಪರಶಿವೆಯು ಪ್ರತ್ಯಕ್ಷವಾಗಿ ಬೇಕಾದ ವರಗಳೆರಡನ್ನು ಬೇಡಿಕೊ ಎಂದು ತಿಳಿಸುತ್ತಾಳೆ. ಅದರಂತೆ ಮೂಲಕನು 'ಪುತ್ರವಾಂಛೆಯಿಂದ ಜನಿಸದೇ ಇರುವ ಅಯೋನಿಜರಿಂದ ಮಾತ್ರ ತನಗೆ ಮರಣವಾಗಲೆಂದೂ, ಯುದ್ಧರಂಗದಲ್ಲಿ ಅಸಂಖ್ಯ ಆಯುಧ ಮತ್ತು ರಾಕ್ಷಸವೀರರ ಸೃಷ್ಟಿಯಾಗಿ ತನಗೆ

ಸಹಕರಿಸುವಂತಾಗಬೇಕೆಂದೂ' ವರಗಳನ್ನು ಬೇಡುತ್ತಾನೆ. ಪರಶಿವೆಯು 'ತಥಾಸ್ತು' ಎಂದು ಅನುಗ್ರಹಿಸುತ್ತಾಳೆ. ಬಲದಿಂದ ಉನ್ಮತ್ತನಾದ ಮೂಲಕಾಸುರನು ಅಸಂಖ್ಯ ಸೇನೆಯನ್ನು ಸೃಷ್ಟಿಸಿಕೊಂಡು ನೇರವಾಗಿ ಲಂಕಾನಗರದ ಮೇಲೆ ದಾಳಿ ಮಾಡುತ್ತಾನೆ. ಉಪವನದಲ್ಲಿ ಸೈನಿಕರು ಹಣ್ಣುಗಳನ್ನು ಕಿತ್ತು ತಿನ್ನುವುದನ್ನು ಕಂಡ ಚಾರರು ವಿಭೀಷಣನಿಗೆ ವೈರಿಗಳ ದಾಳಿಯ ವಾರ್ತೆಯನ್ನು ತಿಳಿಸುತ್ತಾರೆ. ಮೂಲಕ ಮತ್ತು ವಿಭೀಷಣರ ನಡುವೆ ಭಯಂಕರ ಕಾಳಗವಾಗುತ್ತದೆ. ಪರಿಣಾಮವಾಗಿ ಮೂಲಕನೊಂದಿಗೆ ರಣದಲ್ಲಿ ಸೋತ ವಿಭೀಷಣನು ನಾಸಿಕದುರ್ಗಕ್ಕೆ ಪಲಾಯನಮಾಡಿ, ಶ್ರೀರಾಮಧ್ಯಾನದಲ್ಲಿ ತನ್ಮಯನಾಗುತ್ತಾನೆ.

ಇತ್ತ ಅಯೋಧ್ಯೆಗೆ ನಾರದರು ಬಂದು ಮೂಲಕಾಸುರನ ವಿಚಾರವನ್ನು ಶ್ರೀರಾಮನಿಗೆ ತಿಳಿಸುತ್ತಾರೆ. ವಿಭೀಷಣನು ಮೂಲಕನಲ್ಲಿ ಸೋತು ಓಡಿಹೋದ ಸಂಗತಿಯನ್ನೂ ಹೇಳುತ್ತಾರೆ. ಇದನ್ನು ಕೇಳಿದ ಶ್ರೀರಾಮನು ವಿಭೀಷಣನನ್ನು ಕರೆತರುವಂತೆ ಹನುಮಂತನಿಗೆ ಸೂಚಿಸುತ್ತಾನೆ. ಅದರಂತೆ ಹನುಮಂತನು ನಾಸಿಕದುರ್ಗವನ್ನು ಸೇರಿ ವಿಭೀಷಣನನ್ನು ಕಂಡು ಅಯೋಧ್ಯೆಗೆ ಕರೆತರುತ್ತಾನೆ. ಶ್ರೀರಾಮಚಂದ್ರನು ವಿಭೀಷಣನಿಗೆ ಅಭಯವನ್ನು ನೀಡುತ್ತಾನೆ. ಅಷ್ಟರಲ್ಲಿ ಮೂಲಕಾಸುರನು ಅಯೋಧ್ಯೆಯ ಹೊರಬಾಹೆಗೆ ಬಂದ ವಾರ್ತೆಯನ್ನು ಕೇಳಿ ಶ್ರೀರಾಮನ ಸೈನ್ಯ ಯುದ್ಧಕ್ಕೆ ಸಿದ್ಧವಾಗುತ್ತದೆ. ಯುದ್ಧದಲ್ಲಿ ಭರತ-ಶತ್ರುಘ್ನ-ಲಕ್ಷ್ಮಣಾದಿಗಳು ಕಾದಾಡಿ ಕೈಸೋತು ಮೂರ್ಛಾಗತರಾಗುತ್ತಾರೆ. ಇದನ್ನು ತಿಳಿದ ಶ್ರೀರಾಮನು ಚಿಂತಿಸಲು ಅವನ ಸುಪುತ್ರನಾದ ಕುಶನು ಧೈರ್ಯದ ಮಾತನ್ನು ಹೇಳುತ್ತಾನೆ. ತಂದೆ-ಮಗ ಇಬ್ಬರೂ ರಣರಂಗಕ್ಕೆ ಧಾವಿಸುತ್ತಾರೆ. ಮೂಲಕನನ್ನು ಎದುರಿಸಿದ ಮಾರುತಿಯು ಮೂರ್ಛೆಗೊಳ್ಳುತ್ತಾನೆ. ಶ್ರೀರಾಮನೊಂದಿಗೂ ಮೂಲಕಾಸುರನು ಸಮಬಲದ ಹೋರಾಟ ಮಾಡುತ್ತಿರುವಾಗ 'ಅಯೋನಿಜನಾದ ಕುಶನಿಂದ ಮೂಲಕಾಸುರನಿಗೆ ಮರಣ' ಎಂದು ಆಕಾಶವಾಣಿ ಮೊಳಗುತ್ತದೆ. ಅದರಂತೆ ಕುಶನು ಯುದ್ಧಕಣಕ್ಕೆ ಧುಮುಕಿ ಮೂಲಕಾಸುರನನ್ನು ಸಂಹರಿಸುತ್ತಾನೆ.

ರಣರಂಗದಲ್ಲಿ ಮೂರ್ಛಾಗತರಾಗಿ ಬಿದ್ದ ತಮ್ಮಂದಿರನ್ನು ಕಂಡು ಶ್ರೀರಾಮನು ಮಮ್ಮಲ ಮರುಗುತ್ತಾನೆ. ಆಗ ಬ್ರಹ್ಮಾದಿಗಳು ಬಂದು ಸುಷೇಣನಿಂದ ಚಿಕಿತ್ಸೆ ನೀಡುವಂತೆ ಸಲಹೆ ನೀಡುತ್ತಾರೆ. ಅದರಂತೆ

ಲಕ್ಷ್ಮಣಾದಿಗಳು ಮೂರ್ಛೆಯಿಂದ ಮೇಲೇಳುತ್ತಾರೆ. ವಿಭೀಷಣನನ್ನು ಲಂಕೆಗೂ, ಭರತಾದಿಗಳನ್ನು ಅಯೋಧ್ಯೆಗೂ ಕಳುಹಿಸಿಕೊಟ್ಟು ಶ್ರೀರಾಮನು ಸೀತಾಲಕ್ಷ್ಮಣರ ಸಹಿತ ಶೃಂಗಪರ್ವತದಲ್ಲಿ ಪರಶಿವನನ್ನು ಪೂಜಿಸುತ್ತಾನೆ. ಪ್ರಸನ್ನನಾದ ಶಿವನಲ್ಲಿ ಶ್ರೀರಾಮಚಂದ್ರನು ತಾನು ಪೂಜೆಮಾಡಿದ ಗಿರಿಸ್ಥಳವು ಪರಮಪುಣ್ಯಪ್ರದವಾದ ತೀರ್ಥಕ್ಷೇತ್ರವಾಗಲೆಂದು ಬೇಡುತ್ತಾನೆ. ಶಿವ-ಶಿವೆಯರು ಅದನ್ನು ಅನುಗ್ರಹಿಸಿ ಮರಳಿದ ಮೇಲೆ ಶ್ರೀರಾಮನು ಏಕಾಂತದಲ್ಲಿ ಸೀತೆಯಲ್ಲಿ ಕುಶನ ಜನ್ಮವೃತ್ತಾಂತವನ್ನು ವಿಚಾರಿಸುತ್ತಾನೆ. ವಾಲ್ಮೀಕಿ ಮುನಿಯ ಆಶ್ರಮದಲ್ಲಿ ನಡೆದ ಘಟನೆಯನ್ನು ನಿರೂಪಿಸಿ ಕುಶನು ದರ್ಭೆಯಿಂದ ಜನಿಸಿದನೆಂಬುದನ್ನು ಆಕೆ ಹೇಳಿದರೂ ಶ್ರೀರಾಮನು ಅದನ್ನು ಒಪ್ಪುವುದಿಲ್ಲ. ಆಗ ನಾರದರೇ ಬಂದು ಸೀತೆಯು ಹೇಳಿದ ವಿಚಾರವನ್ನು ಸತ್ಯವೆಂದು ನುಡಿಯುತ್ತಾರೆ. ಅನಂತರ ಶ್ರೀರಾಮ, ಸೀತಾದೇವಿ ಮತ್ತು ಲಕ್ಷ್ಮಣ ಅಯೋಧ್ಯೆಗೆ ಹಿಂದಿರುಗುತ್ತಾರೆ. ಮಂಗಲ.

* * * * *

ಪಾತ್ರಗಳು

1. ಶ್ರೀರಾಮ
2. ಸೀತೆ
3. ಲಕ್ಷ್ಮಣ
4. ಹನುಮಂತ
5. ಕೌಸಲ್ಯೆ
6. ವಿಭೀಷಣ
7. ಮೂಲಕಾಸುರ
8. ವನದೇವತೆಯರು
9. ನಾರದ
10. ಶಿವ
11. ಪಾರ್ವತಿ
12. ಭರತ
13. ಶತ್ರುಘ್ನ
14. ಕುಶ
15. ಬ್ರಹ್ಮ
16. ಸುಷೇಣ
17. ಚಾರಕರು
18. ವನಪಾಲಕರು
19. ಸಖಿಯರು

* * * * *

॥ ಶ್ರೀ ಗಣಾಧಿಪತಯೇ ನಮಃ ॥

॥ ಶಾರ್ದೂಲವಿಕ್ರೀಡಿತ ॥

ಶ್ರೀಸೀತಾಪತಿಮಾಂಜನೇಯ ನಮಿತಮ್ ಭಾಸ್ವನ್ಮಹಾವಂಶಜಮ್
ಸನ್ಮಾರ್ಗಾಭಿರತಮ್ ಸಮಸ್ತ ದಿವಿಜೈಃ ಸಂಪೂಜಿತಂ [ಶೋಭಿತಮ್]
ಸುಗ್ರೀವಾಂಗದ ಭೂರಿ ಭಕ್ತನಿಚಯೈರಾನಂದ ಸಮ್ಮೋಹನಮ್
ವಂದೇಹಂ ರಘು ಸಾರ್ವಭೌಮಮಮಲಂ ಶ್ರೀ ಕೋಸಲಾಧೀಶ್ವರಂ ॥ 1 ॥

॥ ಸೌರಾಷ್ಟ್ರ – ತ್ರಿವುಡೆ ॥

ಶರಣು ಶರಣು ನಗೇಂದ್ರಜಾಸುತ ।
ಶರಣು ಸದ್ಗುಣಭೂಷಿತ ॥
ಶರಣು ಲಂಬೋದರ ವಿರಾಜಿತ ।
ಶರಣು ಶಶಿಧರ ಪೂಜಿತ ॥
ಶರಣು ಶರಣು ॥ 2 ॥

ಹಸ್ತಿವದನ ಸುಮೋದಕಾಂಕುಶ ।
ಹಸ್ತ ಮೂಷಿಕವಾಹನ ॥
ಸ್ವಸ್ತಿ ಸಿದ್ಧಿಪ್ರದ ಗಣೇಶ ನ ।
ಮೋಸ್ತು ತೇ ಜನರಂಜನ ॥
ಶರಣು ಶರಣು ॥ 3 ॥

ಕಮಲಭವ ಪೂಜಿತ ಸುರೇಂದ್ರಾ ।
ದ್ಯಾಮರನುತ ಚರಣದ್ವಯ ॥
ಸುಮತಿಗೊಡು ಕಲ್ಮಷನಿಶೀಥಿನಿ ।
ಶಮಿತ ಸತತಂ ಪಾಲಯ ॥
ಶರಣು ಶರಣು ॥ 4 ॥

ಭಾನುಕೋಟಿಪ್ರಭಾರುಚಿರ ಸು ।
ಜ್ಞಾನರೂಪ ನಿರಂಜನ ॥
ಆನತಪ್ರಿಯ ವಿಘ್ನವಿಪಿನ ಕೃ ।
ಶಾನು ತ್ರಿಜಗತ್ಪಾವನ ॥
ಶರಣು ಶರಣು ॥ 5 ॥

॥ **ವಾರ್ಧಕ** ॥

ಸರಸಿಜದಳಾಕ್ಷನಂ ಸುಮನಸಾಧ್ಯಕ್ಷನಂ ।
ಶರಣಹೃದ್ದೇಹನಂ ರಿಪುವನವಿದಾಹನಂ ।
ಕರುಣಾಸಮುದ್ರನಂ ಭಕ್ತನಿರುಪದ್ರನಂ ಜನ್ಮವಿರಹಿತಭದ್ರನಂ ॥
ವರಮಣಿಕಿರೀಟನಂ ಸುಲಲಿತಲಲಾಟನಂ ।
ಉರಗೇಂದ್ರತಲ್ಪನಂ [ವಿಶ್ವಾದಿಕಲ್ಪನಂ]
ಗುರುವೆಂಕಟೇಶನಂ ರತ್ನನಗರೀಶನಂ ಮನದೊಳಾಂ ಮಾನಿಸುವೆನು ॥ 6 ॥

॥ **ಭಾಮಿನಿ** ॥

ವ್ಯೋಮಕೇಶನ ಪದಕೆ ವಂದಿಸಿ ।
ಹೈಮವತಿಯನು ನೆನೆದು ವಿಭುದ ।
ಸ್ತೋಮವನು ಕೊಂಡಾಡಿ ದ್ರುಹಿಣಂಗೆರಗಿ ಶಾರದೆಯ ॥
ಕೋಮಲಾಂಘ್ರಿಗೆ ಮಣಿದು ವ್ಯಾಸಮು ।
ಹಾಮುನಿಯ ನುತಿಗೈದು ಸದ್ಗುಣ ।
ಧಾಮ ಚಿಪ್ಪಳಿನಿಲಯ ಗೋಪೀನಾಥಗೆರಗುವೆನು ॥ 7 ॥

॥ **ದ್ವಿಪದಿ** ॥

ಶುಕ ಪರಾಶರ ನಾರದಾದ್ಯರನು ಭಜಿಸಿ ।
ಸಕಲ ಸತ್ಕವಿಗಳ ಪದಾಂಬುಜಕೆ ನಮಿಸಿ ॥ 8 ॥

ಮಾರುತಾತ್ಮಜನಂಘ್ರಿಯುಗಳಕೊಂದಿಸುವೆ ।
ಶ್ರೀರಾಮಚರಿತವನು ಮುದದೊಳಾನೊರವೆ ॥ 9 ॥

ದಶಮುಖನ ಸುತ ಮೂಲಕಾಖ್ಯ ದಾನವನು ।
ಕುಶನೊಡನೆ ಕಾದಾಡುತಳಿದ ಕಥನವನು ॥ 10 ॥

ಯಕ್ಷಗಾನದಲಿ ಪೇಳುವೆನು ತಿಳಿದಂತೆ ।
ರಕ್ಷಿಸಲಿ ವೆಂಕಟೇಶ್ವರ ಮುನ್ನಿನಂತೆ ॥ 11 ॥

ಪ್ರಾಸವಿಷಮಾಕ್ಷರಗಳೊಂದ ನಾನರಿಯೆ ।
ಲೇಸ ಪಾಲಿಪುದು ರತ್ನಾಪುರದ ದೊರೆಯೆ ॥ 12 ॥

॥ **ವಾರ್ಧಕ** ॥

ಪರಮ ಸಾತ್ವಿಕ ಶೌನಕಾದಿ ಋಷಿಗಳಿಗೆ ಮುನಿ ।
ವರಸೂತ ನೈಮಿಷಾರಣ್ಯದೊಳಜಸ್ರ ವಿ ।
ಸ್ತರಿಸುತೀರ್ದಂ ಚಕ್ರಧರನ ಮಹಿಮೆಯ ಜಗತ್ಪಾವನಂ ಗೈವವೋಲು ॥
ಕರಯುಗವ ಮುಗಿದೆಂದರೆಲೆ ತಪೋಧನ ವಿಷ್ಣು ।
ನರನಾಟಕವ ಧರಿಸಿ ದಶರಥಂಗುದ್ಭವಿಸಿ ।
ಧರೆಯ ಭಾರವ ಕಳೆದು ಸುಜನರಂ ಪೊರೆದನೆಂತುಸುರೆನಲ್ಕಿಂತೆಂದನು ॥ 13 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಒಂದು ದಿನ ಕೈಲಾಸ ಗಿರಿಯಲಿ ।
ಇಂದುಧರನ ಅರ್ಧಾಗಿ ಸಂಮುದ ।
ದಿಂದ ನಿಜವಲ್ಲಭಗೆ ಕೈಮುಗಿ ।
ದೆಂದಳಾಗ ॥ 14 ॥

ಶ್ರೀವಧುಪ್ರಿಯನಮಲತರ ನಾ ।
ಮಾವಳಿಗಳೊಳಗಧಿಕವಾವುದು ।
ದೇವ ಕರುಣದೊಳೊರೆವುದೆನೆ ರಾ ।
ಜೀವಮುಖಿಗೆ ॥ 15 ॥

ಲೋಕಪಾವನ ಬೆಸಗೊಳಲು ತಾ ।
ನೇಕ ಚಿತ್ತದಿ ಪ್ರಿಯದೊಳಾ ಜಗ ।
ದೇಕನಾಥನ ಕಥೆಯ ಪೇಳ್ದ ಪಿ ।
ನಾಕಧರನು ॥ 16 ॥

॥ **ವಾರ್ಧಕ** ॥

ಹೈಮವತಿ ಮುದದಿ ಕೇಳಾದಡಭಿವರ್ಣಿಸುವೆ ।
ನಾ ಮಹಾವಿಷ್ಣು ರವಿಕುಲದಿ ದಶರಥಸಾರ್ವ ।
ಭೌಮಕಂಗುದುಭವಿಸಿ ಪುತ್ರಕಾಮೇಷ್ಟಿಯೊಳ್ ಸಾಕೇತಪುರವರದೊಳು ॥
ರಾಮಭಿಧಾನದೊಳು ಬೆಳೆದು ಸಹಜಾತರಿಂ ।
ಪ್ರೇಮದಿಂದೊಡಗೂಡಿ ತಾಟಕಿಯ ವಧಿಸಿ ವಿ ।
ಶ್ವಾಮಿತ್ರ ಮುನಿವರನ ಯಜ್ಞಮಂ ಕಾಯ್ದು ಗೌತಮನ ಸತಿಯಂ ಪಾಲಿಸಿ ॥ 17 ॥

ಚಂಡಭುಜಬಲದಿಂದ ಮಿಥಿಲೆಯೊಳ್ ನಮ್ಮ ಕೋ ।
ದಂಡಮಂ ಮುರಿದು ಸೀತೆಯವೊಲಿಸಿ ಭಾರ್ಗವಂ ।
ಕಂಡು ತಡೆಯಲ್ ಗೆಲಿದು ನಗರಪ್ರವೇಶಮಂ ಮಾಡಿ ಪಿತನಾಜ್ಞೆಯಿಂದ ॥
ಪುಂಡರೀಕಾಕ್ಷ ಸತಿಸಹಿತ ಸೌಮಿತ್ರಿಯೊಡ ।
ಗೊಂಡು ವನವಾಸಮಂ ತಾಳ್ದಿರಲ್ ಪಂಚವಟಿ ।
ದಂಡಕಾರಣ್ಯದೊಳ್ ಬಂದಲೆಯೆ ಶೂರ್ಪನಖಿ ಕತ್ತರಿಸಿ ನಾಸಿಕವನು ॥ 18 ॥

ಖರದೂಷಣಾದ್ಯರಂ ಮಥಿಸಿ ಸಂಗ್ರಾಮದೊಳ್ ।
ಪೊರಟುಬರೆ ಮೃಗವ್ಯಾಪ್ತಿಯಿಂದ ಲಕ್ಷ್ಮಣನಿಲ್ಲ।
ದಿರಲು ಯತಿರೂಪದಿಂ ಬಂದಾಗ ದಶಗಳಂ ಕೊಂಡೊಯ್ಯೆ ಜಾನಕಿಯನು ॥
ಮರುಗಿ ಮನದೊಳ್ ವಿಹಗರಾಜನಿಂದರಿತು ನಡೆ ।
ತರಲು ಪಂಪಾಸರೋವರಕೆ ಮರುತಾತ್ಮಜಂ ।
ಬರಲು ಕಾಣಿಸಿಕೊಂಡು ಸುಗ್ರೀವನಂ ಕಂಡು ತಾಳತರುವಂ ಮುರಿದನು ॥ 19 ॥

ಗೋತ್ರಾರಿಸುತನ ಮರ್ದಿಸಿ ಮುದ್ರಿಕೆಯನಿತ್ತು ।
ಧಾತ್ರಿಜೆಯನರಸಲ್ಕೆ ಕಳುಹಿದಂ ಮಾರುತನ ।
ಪುತ್ರನಂ ಬಳಿಕವಂ ಬಂದು ಭೂಸುತೆಯ ಕಂಡಿತ್ತಂಗುಳೀಯಕವನು ॥
ಶತ್ರುನಗರಕೆ ತನ್ನ ವಾಲಕಿಕ್ಕಿದ ವಾಯು ।
ಮಿತ್ರನಂ ಪೊಗಿಸಿ ನಡೆತಂದಾಳ್ದನಂಘ್ರಿಶತ ।
ಪತ್ರಕಭಿನಭಿಸಲುಪಚರಿಸಿದಂ ರಘುರಾಮ ನೆರಹಿದಂ ಕಪಿಬಲವನು ॥ 20 ॥

ಕಟ್ಟಿದಂ ಲವಣಾಂಬುಧಿಯ ವೈರಿದುರ್ಗಮಂ ।
ಮೆಟ್ಟಿದಂ ಕುಂಭಕರ್ಣಾದಿ ದಾನವರ ತಂ ।
ದೊಟ್ಟಿದಂ ಸಂಗ್ರಾಮದೊಳ್ ಭುಜಪರಾಕ್ರಮವ ಮೆರೆಸಿದಂ ರಘುನಾಥನು ॥
ಹೆಟ್ಟಿದಂ ತಾಳಿಕೊಳ್ಳೆನುತ ರಾವಣನೆದೆಯ ।
ಕುಟ್ಟಿದಂ ಕೆಡಹಿ ಇಂದ್ರಾದ್ಯಮರರಂಜಿಕೆಯ ।
ನಟ್ಟಿದಂ ದೇವರ್ಕಳಾಗ ಜಯಜಯಮೆಂದು ಸುಮವೃಷ್ಟಿಯಂ ಕರೆಯಲು ॥21॥

॥ **ಕೇದಾರಗೌಳ – ಅಷ್ಟ** ॥

ದೇವಾದಿದೇವ ರಾಘವನ ಬಾಣದಿ ದುಷ್ಟ ।
ರಾವಣನಳಿದಮೇಲೆ ॥

ದೇವತೆಗಳಿಗತಿಸುಖವಾಯಿತಾಗ ಸು ।
ಗ್ರೀವಜಾಂಬವ ಮುಖ್ಯರ ॥ 22 ॥

ಕರೆದೆಂದ ರಾಮ ಪೂರ್ವದಿ ಭಾಷೆಯುಂಟೆನ್ನ ।
ಶರಣ ವಿಭೀಷಣಗೆ ॥
ಹರುಷದಿಂದವಗೆ ಮೂರ್ಧಾಭಿಷೇಚನವನು ।
ವಿರಚಿಸಿ ಬಪ್ಪುದೆಂದು ॥ 23 ॥

ಪರಮದಯಾಳು ನೇಮಿಸಲಿಂತು ಜಾಂಬವ ।
ತರಣಿಜಾದ್ಯರಿಗೆ ಕೇಳಿ ॥
ಶರಣಜನಾಳಿಶಿರೋಮಣಿ ಶ್ರೀರಘು ।
ವರಗೆ ಕೈಮುಗಿದೆಂದನು ॥ 24 ॥

॥ **ಮಧ್ಯಮಾವತಿ – ಆದಿ** ॥

ಲಾಲಿಸೆನ್ನ ಬಿನ್ನಪವ ದಾಶರಥೇ ।
ಪಾಲಿಸೈ ಪುರದೊಳು ಸಾಕೆಂಬ ಮಮತೆ ॥ ಪ ॥

ಅಗ್ರಜನ್ಮನ ತವಮುಖದಿಂದ ವಧಿಸಿ ಸ ।
ಮಗ್ರಭೋಗವನು ನಾ ಕಾಮಿಸಿದವನೆ ॥
ವಿಗ್ರಹಸ್ಥಿತಿಯನು ನೆಚ್ಚಿಯೀ ಭೋಗಪ ।
ರಿಗ್ರಹದೊಳು ಮನವಿಲ್ಲ ದಯಾನಿಧೆ ॥ 25 ॥

ತನ್ನ ವ್ರಜದಿ ಧೇನುವಿರಲು ಗೊಡ್ಡಾಕಳ ।
ಮನ್ನಿಸುವರೆ ಮೋಹದಿಂದ ಕೈಯೊಳಗೆ ॥
ಕನ್ನಡಿಯಿರೆ ನೀರನೆಳಲನು ನೋಳ್ಪರೆ ।
ನಿನ್ನ ಪಾದದ್ವಯಾರ್ಚನೆಯೊಂದೆ ಸಾಲದೆ ॥ 26 ॥

ಎನಲು ರಘೂದ್ವಹನೆಂದ ವಿಭೀಷಣ ।
ನಿನಗೆ ನಾನಿತ್ತಪೆ ಭಾಷೆಯ ಮೊದಲು ॥
ಇನವಂಶಜಾತರೊಳ್ ಪೊದ್ದದು ಪುನರುಕ್ತಿ ।
ಅನುಮಾನಿಸಿದರೆನ್ನಾಣೆ ಪೋಗೆಂದ ॥ 27 ॥

॥ **ವಾರ್ಧಕ** ॥

ಈಪರಿಯೊಳಾತನನೊಡಂಬಡಿಸಿ ಕಳುಹೆ ಸೀ ।
ತಾಪತಿಯ ನೇಮದಿಂ ತರಣಿಜಾದಿಗಳು ಲಂ ।
ಕಾ ಪುರದ ರಾಜಮಂದಿರಕೆ ನಡೆತರಲು ಪುಟಭೇದನಂ ಶೃಂಗರಿಸಿತು ॥
ವ್ಯಾಪಿಸಿತು ಸಕಲಸಂಪತ್ಸರೋಜಾಕ್ಷಿ ಕೇ ।
ಳಾ ಪುಲಸ್ತ್ಯಾನ್ವಯಂಗಧಿಕಸಂಭ್ರಮದಿಂ ಚ ।
ಮೂಪತಿಗಳೊಡಗೂಡಿ ಪಟ್ಟಾಭಿಷೇಚನಂ ಗೈದರತ್ಯುತ್ಸಾಹದಿ ॥ 28 ॥

॥ **ಕಾಂಭೋದಿ – ಝಂಪೆ** ॥

ಬಳಿಕಾ ವಿಭೀಷಣನು ಬಂದು ತಲೆವಾಗಿರಲು ।
ನಳಿನಸಖಕುಲಜಾತನೊಡನೆ ॥
ತಿಳಿದೆನಿಂಗಿತವ ಸೀತೆಯ ಕರೆದು ತಾರೆನಲು ।
ಇಳೆಯ ಮಗಳಿದ್ದೆಡೆಗೆ ಬಂದು ॥ 29 ॥

ತಾಯೆ ಚಿತ್ತೈಸೆನ್ನ ಬಿನ್ನಪವ ಮುದದಿ ರಘು ।
ರಾಯನಪ್ಪಣೆಯಾದುದೆನಗೆ ॥
ಪ್ರೀಯನಿದ್ದೆಡೆಗೆ ಬಿಜಯಂಗೈಯ ಬೇಕೆನುತ ।
ತೋಯಜಾಂಬಕಿಯ ಪದಕೆರಗಿ ॥ 30 ॥

ಮಂದಿರಕೆ ಕರೆತಂದು ನವದುಕೂಲವನುಡಿಸಿ ।
ಸುಂದರಿಯ ವಿವಿಧೋಪಚರಿಸಿ ॥
ಪೊಂದೊಡವುಗಳ ತೊಡಿಸಿ ಫಣೆಗೆ ತಿಲಕವನಿರಿಸಿ ।
ಗಂಧಪರಿಮಳಗಳನು ಪೂಸಿ ॥ 31 ॥

ಸುರಗಿಮಲ್ಲಿಗೆಚಂಪಕಾದಿ ಕುಸುಮವ ಮುಡಿಸಿ ।
ಕರದಿ ಕರ್ಪೂರವೀಳ್ಯವಿರಿಸಿ ॥
ಹರುಷದೊಳಲಂಕರಿಸಿ ನೋಡೆ ಮದವಂಕುರಿಸಿ ।
ಮೆರೆದಳಾ ರಘುರಾಮನರಸಿ ॥ 32 ॥

॥ **ವಾರ್ಧಕ** ॥

ಸರಸಿಜಾದಳನೇತ್ರೆ ಲಲಿತಮಂಗಳಗಾತ್ರೆ ।
ಮೆರೆವ ಮುಕುರಕಪೋಲೆ ಮಧುಪಕುಂತಳಜಾಲೆ ।

ಮಿರುಪ ಮಂಜುಳಭಾಷೆ ಮುಕುಳಚಂಪಕನಾಸೆ ಶಶಿವದನೆ ಕುಂದರದನೆ ॥
ಸರಸಗುಣಸಂಪನ್ನೆ ಕಾಮಿನೀಕುಲರನ್ನೆ ।
ಉರಗಸನ್ನಿಭವೇಣಿ ಮಧುರಕೋಕಿಲವಾಣಿ ।
ನಿರುಪಮ ಮಹೀಜಾತೆ ಮುದದಿ ತ್ರಿಜಗನ್ಮಾತೆ ಮಣಿಪರಿಸ್ತೃತೆಯಾದಳು ॥ 33 ॥

॥ **ಭಾಮಿನಿ** ॥

ಧಾರಿಣೀಸುತೆಯನು ತವಕದಿಂ ।
ದೇರಿಸಿದನಂದಣವ ಶರಣನು ।
ನೀರಜೇಕ್ಷಣೆಯೊಪ್ಪದಿರ್ದಳು ಧೈರ್ಯವನು ತಿಳುಪಿ ॥
ನಾರಿಯರ ಗಡಣದಲಿ ತಂಬಟೆ ।
ಭೇರಿಯ ನಿನಾದದಲಿ ಬಹು ಕಹ ।
ಳಾರವದ ಸಂಭ್ರಮದಿ ಕರೆತಂದರು ವಿದೇಹಜೆಯ ॥ 34 ॥

॥ **ದೇಶಾಕ್ಷಿ – ಅಷ್ಟ** ॥

ಬಂದಳು ಪತಿಯೆಡೆಗೆ ಸೀತಾದೇವಿ ।
ಸಂದಣಿಸಿ ಬಹು ಸೂತ ಮಾಗಧ ।
ವಂದಿಗಳ ಜಯರವದೊಳು ॥ 35 ॥

ಲೋಕಮಾತೆ ಭೂಜಾತೆ ನಮೋಸ್ತುತೇ ।
ಪಾಕಶಾಸನಮುಖ್ಯದಿವಿಜಾ ।
ನೀಕನುತೆ ಎನುತಿರ್ದರು ॥ 36 ॥

॥ **ಭಾಮಿನಿ** ॥

ಕಂಡನೀ ಸಂಭ್ರಮವ ಮತ್ತೋ ।
ದಂಡಭಗ್ನನು ಮನದೊಳಗೆ ಖತಿ ।
ಗೊಂಡು ಶಿರವನು ತೂಗಿ ನಾಸಾಗ್ರದಲಿ ಬೆರಳಿಟ್ಟು ॥
ಗಂಡನೆಡೆಗೈತಪ್ಪ ಸತಿಗೀ ।
ದಂಡಿಗೆಯು ಬೇಕಾಯ್ತೆ ಹರಹರ ।
ದಿಂಡೆಹೆಂಗುಸುಯೆನುತ ಸೌಮಿತ್ರೇಯನನು ಕರೆದ ॥ 37 ॥

॥ ಜುಲಾರಿ – ಆದಿ ॥

ತಮ್ಮ ನೋಡಿದೆಯಾ ವಿಕಾರವ । ಇಕೊ ।
ಸುಮ್ಮನಲ್ಲಿದು ನೋಡು ನಮ್ಮವಳದುಭುತವ ॥ ಪ ॥

ಬಂದಿತು ಕುಲಕಪಕೀರ್ತಿಯು । ಇವ ।
ಳಿಂದ ನಿಶ್ಚಯ ಮಾಯಕಾತಿಯು ॥ ಮುದ ।
ದಿಂದ ದಂಡಿಗೆಯ ಮೇಲೀಕೆಯು । ಬಪ್ಪು ।
ದಿಂದುಚಿತವೆ ಗಬ್ಬಿನಿಂದೆಗಂಜುವಳಲ್ಲಾ ॥ 38 ॥

ಕೆಟ್ಟನುಡಿದು ನಿನ್ನ ಪೂರ್ವದಿ । ವನ ।
ಕಟ್ಟದಿರ್ಪಳೆ ನೀ ಸ್ವಂತದಿ ॥ ಶುದ್ಧಿ ।
ಗೆಟ್ಟುದ ತಿಳಿಯದೆ ಕೋಪದಿ । ನಿನ್ನ ।
ಧಟ್ಟಿಸಿದೆನು ಮುನ್ನ ದಿಟ್ಟಮನಸೆ ಖಿನ್ನ ॥ 39 ॥

ಆರಿಂದನುಜ್ಞೆಯ ಕೊಂಡಳು । ಪರಿ ।
ಷ್ಕಾರವಿಭೂಷಣೆಯಾದಳು । ಅಂದ ।
ಣಾರೂಢೆಯಾಗಿಲ್ಲಿ ಬಂದಳು । ಸಲೆ ।
ಮೀರಿದಳಿವಳು ಕಣ್ಣಾರೆ ಕಂಡೆನು ಸಿದ್ದ ॥ 40 ॥

॥ ಭಾಮಿನಿ ॥

ಅಂಗದನ ಕರೆದಾಡಲಾ ರಘು ।
ಪುಂಗವನು ತಿಳುಪಲು ವಿಭೀಷಣ ।
ನಂಗದಲಿ ಬೆಚ್ಚುತ ವಿದೇಹಜೆಗಂಜುತರುಪಿದನು ॥
ಮಂಗಲದ ದೆಸೆಯಿಂದ ಮಾನವಿ ।
ಭಂಗವಾದುದೆನುತ್ತ ಧರಣಿಗೆ ।
ತುಂಗಕುಚೆ ಧುಮ್ಮಿಕ್ಕಿ ನುಡಿದಳು ಬಹಳ ಕಂಪಿಸುತ ॥ 41 ॥

॥ ಶಂಕರಾಭರಣ – ತ್ರಿವುಡೆ ॥

ಎಲೆ ವಿಭೀಷಣ ನೋಡಿದ್ಯೆ ಪತಿ ।
ಯಲಿ ಕೊರತೆಯುಂಟಾದುದನು ಮನ ।
ದೊಲವು ತಪ್ಪಿತು ಮುಂದೆಗೆಟ್ಟುದು । ಕೆಲಸವಿನ್ನು ॥ 42 ॥

ವಲ್ಲಭನ ಮನದಿಂಗಿತವ ನಾ ।
ಬಲ್ಲೆ ಪೂರ್ವದಿ ನಿನ್ನೊಳುಸುರಿದೆ ।
ನಲ್ಲಿಯೇ ಬಹು ಬಿಡೆಯ ಮಾಡಿದೆ । ಯಲ್ಲ ನೀನು ॥ 43 ॥

ನಿನ್ನ ದೆಸೆಯಿಂದಾಗಲ್ಯೆ ತವ ।
ಮನ್ನಣೆಯ ಪರಿ ತೋರುಪಾಯವ ।
ಮುನ್ನ ಗತಿಗಾಣೆನು ಮನೋರಥ । ವಿನ್ನು ಕಠಿಣ ॥ 44 ॥

॥ ಭಾಮಿನಿ ॥

ಈ ಪರಿಯೊಳಾಲೋಚಿಸುತ ಸಂ ।
ತಾಪದಲಿ ಬೆಂಡಾಗಿ ನಡೆತಂ ।
ದಾ ಪತಿವ್ರತೆ ರಮಣನಂಘ್ರಿದ್ವಯಕೆ ಮಣಿದಿರಲು ॥
ಆ ಪರಂತಪಕುಲತಿಲಕ ಸ ।
ಲ್ಲಾಪಗೈಯದೆ ಪತ್ನಿಯೊಡನತಿ ।
ಕೋಪದಿಂದೀಕ್ಷಿಸದೆ ಲಕ್ಷ್ಮಣನತ್ತ ತಿರುಗಿದನು ॥ 45 ॥

॥ ಮಾರವಿ – ಏಕ ॥

ಈ ತೆರದಿಂ ರಘುನಾಥನು ಧರಣೀ ।
ಜಾತೆಯ ನೋಡದಿರೆ ॥
ಸೀತೆಯನೊಯ್ದನ ವಾತತನುಜ ಖ ।
ದ್ಯೋತಜ ಜಾಂಬವರು ॥ 46 ॥

ನಳ ನೀಲಾಂಗದ ಗವಯ ಕುಮುದ ಶತ ।
ಬಲಿ ಮುಂತಾದವರು ॥
ಲಲನೆಯನಂಗೀಕರಿಸೆಂದರು ಪದ ।
ಜಲರುಹಕಭಿನಮಿಸಿ ॥ 47 ॥

ಒಂದೆಸೆಯೊಳು ಚತುರಾನನ ತಾನ್ಯೆ ।
ತಂದು ಕರವ ಮುಗಿದು ॥
ನಿಂದವನಿಜೆಯನು ವರಿಸೆಂದರು ಸಂ ।
ಕ್ರಂದನ ಮೊದಲಾಗಿ ॥ 48 ॥

॥ **ವಾರ್ಧಕ** ॥

ರಾವಣಾಂತಕಗೆ ಪರಿಪರಿಯಿಂದ ಸಕಲಮುನಿ ।
ದೇವರ್ಕಳಖಿಳ ಕಪಿನಿಕರ ಮುಂತಾಗಿಯೆ ಮ ।
ಹಾವಿಷ್ಣು ನೀನು ಜಾನಕಿ ಲೋಕಮಾತೆಯುಪಚರಿಸೆಂದರೊಪ್ಪದಿರಲು ॥
ಆ ವಿದೇಹಕುಮಾರಿಯೆಂದಳೀ ಸಂಶಯಕೆ ।
ಪಾವಕನ ಪೊಗುವೆ ಜೀವಿಸಿ ಬಂದಡೆನ್ನ ವ ।
ಕ್ತ್ರಾವಲೋಕನವಾಗಲೆಂದಗ್ನಿಕುಂಡದೊಳಗೊಟ್ಟಿಸಿದಳಿಂಧನವನು ॥ 49 ॥

॥ **ಭಾಮಿನಿ** ॥

ನಿತ್ಯಪತಿಭಜನೆಯನುಳಿದ ಪಾ ।
ತಿತ್ಯಳಾದಡೆ ಉರಿಯೊಳುರಿವೆನು ।
ಸತ್ಯಹೀನೆಯಲಾಕುಸುಮ ಬಾಡಿದುದೆ ತಾನೆಂದು ॥
ಅತ್ಯಧಿಕ ಭಕ್ತಿಯಲಿ ಮಣಿದಾ ।
ದಿತ್ಯಕುಲಜಗೆ ಬಂದು ಭುವನ ।
ಸ್ತುತ್ಯೆ ಧುಮುಕಿದಳಾಗ ಧಗಧಗಿಸುವ ಮಹಾಗ್ನಿಯನು ॥ 50 ॥

ಪರಮ ಪತಿವ್ರತೆಯಲ್ಲದೇ ನರ ।
ತರುಣಿಯೇ ಜಾನಕಿ ಜನಾರ್ದನ ।
ನರಸಿಯೈಸಲೆ ಸುವ್ರತೆಯ ಶಿಖಿ ಮುಟ್ಟುವುದೆ ಬಳಿಕ ॥
ಮರುತಸಖ ನಡುನಡುಗಿ ಕರೆತಂ ।
ದರಸು ರಾಮಂಗೊಪ್ಪಿಸಿದ ಸ ।
ಚ್ಚರಿತೆಯನು ಜಯಜಯಯೆನುತ ನುತಿಗೈದನೊಲವಿನಲಿ ॥ 51 ॥

॥ **ಬೇಹಾಗ್ – ಏಕ** ॥

ಜಯಜಯ ಕೋದಂಡರಾಮ ।
ಜಯಜಯ ಸೀತಾರಾಮ ॥
ಭಯಸಂಕ್ಷಯ ಭಕ್ತಪ್ರಿಯ
ಜಯಸದ್ಗುಣಧಾಮ ॥ ಪ ॥

ಚಿದ್ವಿಗ್ರಹ ಚಿನ್ಮಯ ಶರಣಾಗತ ।
ಹೃದ್ವನರುಹ ಶುಭನಿಲಯ ॥

ಅದ್ವಯನಾಶನ ವಿರಹಿತಕರುಣ ಸ ।
ರಿದ್ವರ ಕೋಮಲಯ ॥ 52 ॥

ನರನಾಟಕವನ್ನು ತೋರಿದೆ ಹೆಚ್ಚಿದ ।
ಧರಣಿಯ ಭಾರವ ಕಳೆದೆ ॥
ದುರುಳ ದಶ್ಯಾಸನ ವಧಿಸಿದೆ ಸುರಮುನಿ ।
ವರರನು ಕರುಣದಿ ಕಾಯ್ದೆ ॥ 53 ॥

ಮೊದಲೆನ್ನೊಳಗಿತ್ತಪೆಯಲ ಸೀತಾ ।
ಸುದತಿಯ ಕರೆತಂದಿಹೆನು ॥
ಪದುಮಾಕ್ಷಿಯನು ಪರಿಗಣಿಸೈ ಗುಣ ।
ನಿಧಿ ಕರುಣಾಕರ ನೀನು ॥ 54 ॥

॥ **ವಾರ್ಧಕ** ॥

ಇಂತಾ ಧನಂಜಯಂ ಪೇಳ್ದುದಕೊಡಂಬಟ್ಟು ।
ಕಾಂತೆಯನು ಬಿಗಿದಪ್ಪಿ ಮುದ್ದಿಸಿದನತಿಭಕ್ತಿ ।
ಯಿಂ ತನಗೆ ರಾವಣಾನುಜನಿತ್ತ ಪುಷ್ಪಕವನಡರಿದಂ ಪತ್ನಿಸಹಿತ ॥
ಧ್ವಾಂತಾರಿಸುತ ಸುಷೇಣಕ ಶರಭ ನೀಲ ಹನು ।
ಮಂತ ಜಾಂಬವ ಮುಖ್ಯಕಪಿಸೈನಿಕಂವೆರಸಿ ।
ಸಂತೋಷದಿಂದಯೋಧ್ಯಾಪುರವ ಪೊಕ್ಕ ತಾನನುಜಸಹ ರಘುನಾಥನು ॥ 55 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಬಂದು ಜನನಿಯರಡಿಗಳಿಗೆ ರಘು ।
ನಂದನನು ತಲೆವಾಗಲತಿಮುದ ।
ದಿಂದ ತೆಗೆದಪ್ಪಿದಳು ಕೌಸಲೆ ।
ಯಂದು ಮಗನ ॥ 56 ॥

ಪರಮಹರುಷದಿ ಲಕ್ಷ್ಮಣನನುಪ ।
ಚರಿಸಿ ತಕ್ಕೈಸಿದಳು ಕಂಬನಿ ।
ಯುರುಳಿದುದು ಕಾಣುತ್ತ ಸೀತಾ ।
ತರುಣಿಯನ್ನು ॥ 57 ॥

ತಾಯೆ ಬಾರೌ ತಂಗಿ ಬಾ ಪಿರಿ
ದಾಯಸವನನುಭಸಿದೆಯ ಬಡ ।
ವಾಯಿತೌ ಕಳೆಗುಂದಿ ಕೋಮಲ ।
ಕಾಯ ನಿನ್ನ ॥ 58 ॥

ಎನುತ ಮೈದಡವಿದಳು ಸೀತಾ ।
ವನಿತೆಯನು ಪೊಗಳಿದಳು ರಾಮನ ।
ಜನಕನಾಜ್ಞೆಯ ಸಲಿಸಿದನು ಕುಲ ।
ತನುಜನೆಂದು ॥ 59 ॥

ಗುರು ವಶಿಷ್ಟಮುನೀಂದ್ರನಾ ರಘು ।
ವರನೆಡೆಗೆ ನಡೆತಂದ ಮಂತ್ರೀ ।
ಶ್ವರ ಸುಮಂತಾದ್ಯಷ್ಟಸಚಿವರು ।
ನೆರೆದರಾಗ ॥ 60॥

॥ **ಭಾಮಿನಿ** ॥

ಸರಸಿಜೋದ್ಭವ ಮುಖ್ಯಸುರ ದಿಗು ।
ವರರು ವಸುಗಂಧರ್ವವಿದ್ಯಾ ।
ಧರರು ಕಿನ್ನರ ಗರುಡ ಮನುಮುನಿ ಮಂಡಲೇಶ್ವರರು ॥
ನೆರದುದಾ ರಘುರಾಮಚಂದ್ರನ ।
ದರುಶನಕೆ ಬೀಡಿಕೆಗಳಾದವು ।
ತರುಚರೇಂದ್ರಾದ್ಯರಿಗೆ ಸಕಲ ನೃಪಾಲಸಂತತಿಗೆ ॥ 61 ॥

॥ **ಕೇದಾರಗೌಳ – ಝಂಪೆ** ॥

ವರ ಸುಮಂತಾಜ್ಞೆಯಿಂದ । ಪುರವು ಶೃಂ ।
ಗರಿಸಿತು ವಿಚಿತ್ರದಿಂದ ॥
ಸುರಪುರವನೇಡಿಸಿದುದು । ಸೌಧಾಗ್ರ ।
ಸುರಭಿತನ್ಮಯವಾದುದು ॥ 62 ॥

ಗುಡಿತೋರಣಾವಳಿಗಳು । ರನ್ನಗ ।
ನ್ನಡಿ ಲಲಿತಕಲಶಂಗಳು ॥

ಕಡು ಚೆಲುವಿನಿಂ ಮೆರೆದುದು । ಮೇಲ್ಗಟ್ಟು ।
ನುಡಿಯಲಸದಳವಪ್ಪುದು ॥ 63 ॥

ಧವಲಾತಪತ್ರ ವ್ಯಜನ । ರತುನಮಯ ।
ಸುವಿಮಲ ಮೃಗೇಂದ್ರಾಸನ ॥
ವಿವಿಧ ಕುಸುಮಾಕ್ಷತೆಗಳು । ಗುಡತೈಲ ।
ಸವಿಸವಿಯ ಷಡುರಸಗಳು ॥ 64 ॥

[ಮಧುರಸಂಗೀತಗಾನ । ಸತ್ಕಲಾ ।
ವಿದರ ನಾಟ್ಯಾರಾಧನ] ॥
ವಿಧವಿಧ ಸುವಸ್ತುತತಿಯ । ತ್ವರಿತದಿಂ ।
ದೊದಗಿಸಿದ ಮಂತ್ರಿರಾಯ ॥ 65 ॥

॥ **ವಾರ್ಧಕ** ॥

ಇಂತು ಮೂರ್ಧಾಭಿಷೇಚನಕೆ ಸಕಲಾನುಕೂ ।
ಲಂ ತಡೆಯದಾಯ್ತು ವಿಪ್ರವ್ರಾತದೊಗ್ಗಾತ ।
ನಂತ ವಾದ್ಯಪ್ರತತಿ ಮೊಳಗುತೀರ್ದವು ಪಣವ ಮುರಜ ಕಹಳಾನಕಗಳು ॥
ಶಾಂತವಿಗ್ರಹಗೆ ಪಟ್ಟವ ಕಟ್ಟಿದರು ಮಹಾ ।
ಸಂತೋಷದಿಂದ ಬುಧರಾಮ್ನಾಯಘೋಷ ಸೀ ।
ಮಂತಿನಿಯರಖಿಳಶೋಭನ ಮುತ್ತಿನಕ್ಷತೆಯ ನೀರಾಜನದ ಸಿರಿಯೊಳು ॥ 66 ॥

॥ **ಡವಳಾರ – ಏಕ** ॥

ಚಾರುತರದಲಂದುಗೆಗೆಂದುಟಿಯ ಸ ।
ದಾರುಣವೆತ್ತ ಕಟಾಕ್ಷದ ಬೆಡಗಿನ ।
ಮಾರನ ಸಿಂಜಿನಿಯಾ ಕುರುಳುಳ್ಳಾ ॥
ಕುರುಳುಳ್ಳತಿಸೊಬಗಿನ ಸತಿಯರು ರತು ।
ನಾರತಿಗಳ ತಂದುऽ ಬೆಳಗಿರೆऽ ॥ ಶೋಭಾನೆऽ ॥ 67 ॥

ಬಡನಡುವಿನ ತಳಿರಡಿಗಳ ಯುಗಪೊಂ ।
ಗೊಡಕುಚಗಳ ನುಣ್ದೊಡೆಯ ನಿತಂಬವ ।
ನಡೆಸಿದ ಮೇಖಲೆಯಾ ಮಣಿಗಳ ॥
ಮಣಿಗಳ ಬೆಳಕುಜ್ವಲಿಸುವ ಮಂಜುಳ ।
ಮಡದಿಯರಾರತಿಯऽ ಬೆಳಗಿರೆऽ ॥ ಶೋಭಾನೆऽ ॥ 68 ॥

ಕಿರುವರ್ತುಳ ಜಂಘೆಯನುಪ್ಪರಿಸಿದ ।
ವರಜಘನದ ಸೆಲ್ಲುಗುರಿನ ಮುದ್ರಿಕೆ ।
ವೆರಳಿನ ಶೋಭಿಸುವಾ ತ್ರಿವಳಿಯ ॥
ತ್ರಿವಳಿಯ ಕುಂಡಲಿಬಾಸೆಯ ಸತಿಯರು ।
ಹರಳಿನಾರತಿಯs ಬೆಳಗಿರೆs ॥ ಶೋಭಾನೆs ॥ 69 ॥

ಮೊಲ್ಲೆದಶನಪಂಕ್ತಿಯ ಸುಮನೋಹರ ।
ಮಲ್ಲಿಗೆಪೂದುರುಬಿನ ನಳಿತೋಳಿನ ।
ಪಲ್ಲವಕರದರುಣ ತೊಳಗುವ ॥
ತೊಳಗುವ ನೈದಿಲೆಗಣ್ಣಿನ ಸತಿಯರು ।
ಮಲ್ಲಿಗೆಯಾರತಿಯs ಬೆಳಗಿರೆs ॥ ಶೋಭಾನೆs ॥ 70 ॥

ಪಂಕಜಗಂಧಿನಿಯರು ದಿವ್ಯಾಂಬರ ।
ಕಂಕಣವಲಯವಿಭೂಷಣಾಂಗಿಯರು ಶ ।
ಶಾಂಕವಕ್ತ್ರೆಯರು ನಲವಿಂದ ॥
ನಲವಿಂದಲಿ ಶೋಭನಪಾಡುತ ।
ಕುಂಕುಮದಾರತಿಯs ಬೆಳಗಿರೆs ॥ ಶೋಭಾನೆs ॥ 71 ॥

॥ **ಭಾಮಿನಿ** ॥

ಆದುದಾ ಬಾಣಸಿನ ಭವನದಿ ।
ವೋದನಗ್ರತ ಸೂಪ ಪಾಯಸ ।
ಭೇದವಡೆದ ಸುಭಕ್ಷ್ಯ ನಾನಾವಿಧದ ಶಾಕಗಳು ॥
ಮೇದಿನೀಪತಿ ಸರ್ವರನು ಬಹ ।
ಳಾದರಣೆಯಿಂದನುಸರಿಸಿ ಕಲ ।
ಶೋದಕವ ಕೊಡಿಸಿದನು ಭೋಜನವಾಯ್ತು ಸರ್ವರಿಗೆ ॥ 72 ॥

॥ **ದ್ವಿಪದಿ** ॥

ಭೋಜನಾನಂತರದಿ ವೀಳ್ಯವನು ಕೊಡಿಸಿ ।
ರಾಜಸಂತತಿಗುಚಿತ ಉಡುಗೊರೆಯ ಪೊದಿಸಿ ॥ 73 ॥

ವಿನಯೋಕ್ತಿಯಿಂದ ಕಳುಹಿಸಿ ಸಮಸ್ತರನು ।
ಇನವಂಶಜಾತ ರಾಜ್ಯವ ಪಾಲಿಸಿದನು ॥ 74 ॥

ನಳ ಪುರೂರವ ಹರಿಶ್ಚಂದ್ರಭೂಪತಿಗೆ ।
ಇಳೆಯನಾಳಿದನು ತಾ ಮಿಗಿಲೆನಿಸಿ ಪ್ರಜೆಗೆ ॥ 75 ॥

ಆಚಾರಧರ್ಮನಿರತರು ಸರ್ವಜನರು ।
ನೀಚಕ್ರಿಯೆಯಸತ್ಯದಿಂದ ವರ್ತಿಸರು ॥ 76 ॥

ಪುತ್ರಾದಿ ಸಕಲಸಂಪತ್ಸಮನ್ವಿತರು ।
ಚಿತ್ರರಸಧರ್ಮದಲಿ ವಾಸವಾಗಿಹರು ॥ 77 ॥

॥ **ವಾರ್ಧಕ** ॥

ಜಂತುಗಳ ಮೇಲೆ ನಿರ್ದಯವಿಲ್ಲ ಭಯವಿಲ್ಲ ।
ಚಿಂತೆ ನಿಷ್ಠೂರ ಘರ್ಷಣವಿಲ್ಲ ಋಣವಿಲ್ಲ ।
ಸ್ವಂತದೊಳಜಸ್ರ ಚಂಚಲವಿಲ್ಲ ಛಲವಿಲ್ಲ ವರ್ಣಸಂಕರಗಳಿಲ್ಲ ॥
ಸಂತತಂ ದುಃಖದುಷ್ಕೃತಿಯಿಲ್ಲ ಖತಿಯಿಲ್ಲ ।
ಕ್ರಂತನವ್ಯಾಧಿಸಂಕಟವಿಲ್ಲ ಸಟೆಯಿಲ್ಲ ।
ಕಂತುಶರದುರುಬೆಗಾಸ್ಪದವಿಲ್ಲ ಮದವಿಲ್ಲ ಕೃತಬಂಧನಂಗಳಿಲ್ಲ ॥ 78 ॥

ಎಲ್ಲಿ ನೋಡಿದರು ದಾಕ್ಷಿಣ್ಯಮಯ ಪುಣ್ಯಮಯ ।
ಎಲ್ಲಿಯುಂ ನಡೆವ ಸತ್ಕರ್ಮಮಯ ಧರ್ಮಮಯ ।
ಎಲ್ಲಿಯುಂ ಹರಿಕಥಾನಾದಮಯ ವೇದಮಯ ವಿಪ್ರಸಂತರ್ಪಣೆಗಳು ॥
ಎಲ್ಲಿಯುಂ ಸರ್ವದಾರೋಗ್ಯಮಯ ಭಾಗ್ಯಮಯ ।
ವೆಲ್ಲಿಯುಂ ಶಮೆ ದಮೆ ವಿಭೂತಿಮಯ ನೀತಿಮಯ ।
ಎಲ್ಲಿಯುಂ ಶೋಭಿಪಾರಾಮಮಯ ಹೇಮಮಯವಾದುದಾ ರಾಷ್ಟ್ರದೊಳಗೆ ॥ 79 ॥

॥ **ಭೈರವಿ – ಝಂಪೆ** ॥

ಈ ತೆರದಿ ಸಕಲಧರ । ಣೀತಳವ ದಿನಪಕುಲ ।
ಜಾತನಾಳಿದನು ಸಂ । ಪ್ರೀತಿಯಿಂದೊಲಿದು ॥ 80 ॥

ಇತ್ತಲು ವಿಭೀಷಣನು । ಪತ್ತನದಿ ಸಕಲಸಂ ।
ಪತ್ತಿನಲಿ ಧರೆಯನಾ । ಳುತ್ತಿರಲು ಮುದದಿ ॥ 81 ॥

ಕೆಲವು ದಿವಸದ ಮೇಲೆ । ನಿಲವುಗೆಡಿಸಿದನೋರ್ವ ।
ಖಳಮೂಲಕಾಸುರನು । ಬಲವತಿಕೆಯಿಂದ ॥ 82 ॥

ಬಂದಯೋಧ್ಯೆಯಲಿ ಕುಶ । ನಿಂದಳಿದನೆನಲು ಮುನಿ ।
ಸಂದೋಹ ಶಂಕಿಸುತ । ಲಂದು ಕೇಳಿದರು ॥ 83 ॥

ಆ ನಿಶಾಚರನಾರ । ಸೂನು ಲಂಕಾಧಿಪನೊ ।
ಳೇನು ಹಗೆ ಕುಶನಿಂದ । ತಾನಳಿದನೇಕೆ ॥ 84 ॥

॥ **ವಾರ್ಧಕ** ॥

ಚಿತ್ತಸಂಶಯವ ಪರಿಹರಿಸೆಂದು ಕೇಳೆ ಮುನಿ ।
ಪೊತ್ತಮಂ ಪೇಳ್ದ ಪೂರ್ವದಿ ರಾವಣಾಸುರಂ ।
ಪೆತ್ತನೀ ರಕ್ಕಸನ ಮೂಲತಾರೆಯೊಳರಿಷ್ಟಾಂಶದೊಳ್ ಜನಿಸಿರಲ್ಕೆ ॥
ತತ್ತನುಜನಿಂದ ತವಪುತ್ರ ಮಿತ್ರಾದಿಸಂ ।
ಪತ್ತು ನಾಶನ ಷೋಡಶಾಬ್ದದೊಳಗೆಂದು ವಿ ।
ಪ್ರೋತ್ತಮರೆನಲ್ಕೆ ಕೈಯಾರೆ ಕೊಲಲಳುಕಿ ಹೇರಡವಿಯೊಳ್
ಬಿಸುಡಿಸಿದನು ॥ 85 ॥

॥ **ಭೈರವಿ – ಏಕ** ॥

ಆ ವಿಪಿನದ ಮಧ್ಯದೊಳು । ಅತಿ ।
ರಾವದೊಳೊದರುತ್ತಿರಲು ॥
ದಾವನು ಕೂಗುವನೆಂದು । ವನ ।
ದೇವತೆಯರು ನಡೆತಂದು ॥ 86 ॥

ವೃಂದಾರಕವೈರಿಯನು । ದಯ ।
ದಿಂದೀಕ್ಷಿಸಿ ಬಾಲಕನು ॥
ತಂದೆತಾಯಿಗಳುಳಿದಿಹನು । ಎನು ।
ತಂದು ಪೊರೆದರಾತನನು ॥ 87 ॥

ಬೆಳೆದನವರ ದಯದಿಂದ । ಖಳ ।
ತಿಳಿಯದೆ ಮನದೊಳಗೊಂದ ॥
ಕಳೆದನು ಚಿರಕಾಲವನು । ಅಲ್ಲಿ ।
ಸುಳಿದನು ಸುರಮುನಿವರನು ॥ 88 ॥

॥ **ಸಾಂಗತ್ಯ – ರೂಪಕ** ॥

ಸುಂದರಮೊಗದ ಕೆಂಜೆಡೆಯ ತ್ರಿಪುಂಡ್ರದ ।
ಮಂದಹಾಸದ ತೇಜೋಮಯದ ॥
ಇಂದಿರಾಪತಿಯ ಧ್ಯಾನದ ವೀಣಾನಾದದಾ ।
ನಂದಮೂರ್ತಿಯು ಗೋಚರಿಸಿದ ॥ 89 ॥

ಸರಸಿಜಮಿತ್ರನಂಬರದಿಂದಲಿಳಿವಂತೆ ।
ಪರಮತೇಜಪುಂಜನಾಗಿ ॥
ಹರಿಕೃಷ್ಣ ಪುಂಡರೀಕಾಕ್ಷಯೆನ್ನುತ ಬಂದ ।
ಸುರಮುನೀಂದ್ರನು ಖಳನೆಡೆಗೆ ॥ 90 ॥

ದೇವಮುನಿಯ ಪಾದಾಂಭೋಜವ ಕಂಡು ಸಂ ।
ಭಾವಿಸಿ ಭಯಭಕ್ತಿಯಿಂದ ॥
ನೀವಿಲ್ಲಿ ಬಿಜಯಂಗೈದಿದ ಕಜ್ಜವೇನೆಂದು ।
ರಾವಣಿ ಬೆಸಗೊಂಡನಂದು ॥ 91 ॥

ಮಂದಹಾಸದೊಳೆಂದನೆಲೆ ದಾನವೇಂದ್ರ ಕೇಳ್ ।
ಬಂದ ವೃತ್ತಾಂತವ ಪೇಳ್ವೆ ॥
ನಿಂದಿಸುವರು ನಿನ್ನ ವಂಶವೃಕ್ಷದಿ ಫಲ ।
ಬಂದ ಪರಿಯೊಳಾಯಿತೆಂದು ॥ 92 ॥

ರಜತಾದ್ರಿಯನು ಕಿತ್ತ ದೈತ್ಯನು ವಿಂಶತಿ ।
ಭುಜ ಕಾಮಚರ ದಶಮುಖನು ॥
ತ್ರಿಜಗದೊಳ್ ಬಲವಂತ ದುರ್ಬಲನಾದನಾ ।
ತ್ಮಜನಿಂದವೆಂಬುದು ಲೋಕ ॥ 93 ॥

॥ **ಭಾಮಿನಿ** ॥

ಎಂದ ಮಾತನು ಕೇಳಿ ಸಂಶಯ ।
ದಿಂದ ನುಡಿದನು ಮುನಿಪ ಕೇಳ್ಯೆ ।
ತಂದೆ ಯಾರನ್ವಯವದಾವುದು ಕುಲಕೆ ತನ್ನಿಂದ ॥

ಬಂದ ಕುಂದಕವೇನು ನೀವೆನ ।
ಗಿಂದು ಪೂರ್ವಾಪರವ ತಿಳುಪೆನ ।
ಲಂದು ವಿಸ್ತರಿಸಿದನು ತತ್ಸಂಗತಿಯ ನಾರದನು ॥ 94 ॥

॥ ಕಾಪಿ – ಆದಿ ॥

ದಾನವಾಗ್ರಣಿ ಲಾಲಿಸಯ್ಯಾ । ವಂಶ ।
ವೇನೆಂದೆನಲಿ ಬ್ರಹ್ಮಕುಲಜಾತರಯ್ಯಾ ॥ ಪ ॥

ದನುಜ ರಾವಣನುದರದಲಿ । ನೀನು ।
ಜನಿಸಿದೆ ಪೂರ್ವತಾರೆಯಲಿ ॥
ಜನನಕಾಲವ ನೋಡಿ ಬುಧರು । ಮುಂದೆ ।
ಘನವಾಗದಿವನಿಂದೆ ಎಂದುಸುರಿದರು ॥ 95 ॥

ಕೈಯಾರೆ ಕೊಲಬಾರದೆಂದು । ನಿನ್ನ ।
ಅಯ್ಯ ಬಿಸುಟ ಘೋರಾರಣ್ಯಕೆ ತಂದು ॥
ಪ್ರೀಯದಿ ವನದೇವತೆಯರು । ನಿನ್ನ ।
ತಾಯಿತಂದೆಗಳಂದದಿ ಸಲಹಿದರು ॥ 96 ॥

ಏನಾದುದೆಂಬೆ ಕೇಳಿಲ್ಲಿ । ರಘು ।
ಸೂನು ತನ್ನರಸಿ ಸೀತೆಯ ನೆವದಲ್ಲಿ ॥
ವಾನರಸೈನಿಕಗೂಡಿ । ಈ ಲಂ ।
ಕಾನಿವಾಸನ ತಮ್ಮೊಳಳವನು ಮಾಡಿ ॥ 97 ॥

ಅತಿಕಾಯ ಕುಂಭಕರ್ಣರನು । ಇಂದ್ರ ।
ಜಿತು ಮೊದಲಾದ ದಾನವಸುಭಟರನು ॥
ಹತವಮಾಡಿದನು ಯುದ್ಧದಲಿ । ನಿನ್ನ ।
ಪಿತನ ಕೊಂದನು ಕಡೆಗಾಳಗದಲ್ಲಿ ॥ 98 ॥

ಧರೆಯನಾಳುವ ವಿಭೀಷಣನು । ನಿನ್ನ ।
ಕಿರಿಯಪ್ಪನವನು ಮುಂದಾಹ ಕಾರ್ಯವನು ॥
ಅರಿತುಕೊಳ್ಳೆಂದು ನಾರದನು । ತಾನು ।
ತೆರಳಿದನಿತ್ತ ದುಃಖಿಸಿದ ಮೂಲಕನು ॥ 99 ॥

॥ **ನೀಲಾಂಬರಿ – ರೂಪಕ** ॥

ಪಾವನ ಮುನಿವಂಶೋದ್ಭವ । ರಾವಣನುದರದಿ ಜನಿಸಿದೆ ।
ನೀ ವನದಲಿ ಬದುಕಿದೆ ವನ । ದೇವತೆಯರ ದಯದಿ ॥
ದೇವಾರಾತಿಯು ವಿಪಿನಕೆ । ಪಾವಕನಾದೆನೆ ಶಿವಶಿವ ।
ಭೂವಳಯದಿ ಶಾಲೂರನ ತೆರದಲಿ । ಜೀವಿಸಿ ಫಲವೇನು ॥ 100 ॥

ಕುಲಕಂಟಕನೆನಿಸಿದೆ ಜಗ । ದೊಳಗಿದನರಿಯದೆ ವ್ಯರ್ಥದಿ ।
ಸಲೆ ನಿಂದೆಗೆ ಗುರಿಯಾದೆನೆ ರಣ । ದೊಳಗಳಿದರೆ ಬಂಧುಗಳು ॥
ನೆಲನಾಸೆಗೆ ತನ್ನಣ್ಣನ । ಕೊಲಿಸಿದ ಕಿರಿಯಪ್ಪನು ಪಾಪದ ।
ಕೆಲಸವಿದೆಂದುಳಿಯದೆ ವೈರಿಗ । ಳೊಳಗಾಗದೆ ತಾನು ॥ 101 ॥

ತಂದೆಯ ಮಡುಹಿದ ಮನುಜನ । ಕೊಂದಲ್ಲದೆ ತನಗೀ ಲೋಕದಿ ।
ನಿಂದೆಯು ಪರಿಹರಿಸದು ನಿಶ್ಚಯ । ವೆಂದನು ಪಲುಮೊರೆದು ॥
ನಿಂದಾಲೋಚಿಸುತಿರಲೈ । ತಂದರು ವನದೇವತೆಯರು ದಯ ।
ದಿಂದೀಕ್ಷಿಸಿ ರಾವಣಿಯನು ನುಡಿಸಿದ । ರಂದತಿ ವಿನಯದಲಿ ॥ 102 ॥

॥ **ನಾದನಾಮಕ್ರಿಯೆ – ಅಷ್ಟತಾಳ** ॥

ಕಂದ ಚಿಂತೆ ಏನಿದೂ । ಕಳೆ ।
ಗುಂದಿತಾನನ ಮಂಜುಳವೀಗ ॥ ಪ ॥

[ಬಾಲಕ ನೀನಳುತಿಹುದೇನು । ನಿನ್ನ ।
ನೋಲೈಸುತಿದಕೊ ಸುಂದರ ಕಾನು] ॥
ಈ ಲಘುತ್ವವ ಪಡೆದಿಹುದೇನು । ಅನು ।
ಗಾಲ ವಿಜೃಂಭವುಳ್ಳವ ನೀನು ॥ 103 ॥

ಅಸುಖವೆಂದೀಗ ಚಿಂತಿಸಲಿಲ್ಲ । ನಿಮ್ಮ ।
ಬಸುರೊಳು ತಣ್ಣಗಿರ್ದಪೆನಲ್ಲ ॥
ನಸಿದುದು ಕುಲವೆಂದು ಕೇಳಿದೆ । ಮುಂದೆ ।
ವಸುಮತಿಯೊಳು ನಿಂದೆಗೊಳಗಾದೆ ॥ 104 ॥

ಮೊಸತಲ್ಲ ನೀನ್ಯಾಕೆ ಮರುಗುವೆ । ಹಿಂದ ।
ಣಸುರರೋರ್ವರು ಸಾಯಲಿಲ್ಲವೆ ॥

ವಸುಧೆಯ ಋಣ ತೀರಲಳಿವರ್‍ೈ । ತಮ್ಮ ।
ನೊಸಲ ಲಿಪಿಯ ಮೀರುವರಾರ್‍ೈ ॥ 105 ॥

ಸೈರಿಸಲಾರೆನು ಸುಮ್ಮನೆ । ಎನ್ನ ।
ವೈರಿಗಳ ವಧಿಸದೆ ಬಿಡುವೆನೆ ॥
ದಾರಿಗಾಣದೆ ಸುಮ್ಮನಿಹೆನಲ್ಲ । ನಿಮ್ಮ ।
ಕಾರುಣ್ಯವಿರಲಂಜುವವನಲ್ಲ ॥ 106 ॥

ತನಯ ನಿನ್ನನು ಬಿಟ್ಟ ಗಿರಿಯೊಳು । ಕಪ ।
ರ್ದಿನಿಯ ಪೂಜಿಸು ನಿರಶನದೊಳು ॥
ನಿನಗೆ ಕಾಮಿತ ಸಿದ್ಧಿಯಪ್ಪುದು । ನಮ್ಮ ।
ವಿನಯೋಕ್ತಿ ಲವಲೇಶ ತಪ್ಪದು ॥ 107 ॥

॥ **ವಾರ್ಧಕ** ॥

ತನ್ನ ಮನದಿಷ್ಟಾರ್ಥಮಂ ಪಡೆದು ವೈರಿಗಳ ।
ಬನ್ನ ಬಡಿಸುವೆನೆಂದು ದೈತ್ಯೇಯ ಕೋಪದಿ ಮ ।
ಹೋನ್ನತಂ [ತಾನಾಗಿ] ತೋರ್ಪ ಲೋಕಾಲೋಕ ಪರ್ವತಾಗ್ರದಲಿ ನಿಂದು ॥
ಸನ್ನುತೆ ಕಪರ್ದಿನೀಶ್ವರಿ ಚಂಡಿ ಭಯ ಸಂ ।
ಪನ್ನೆ ಕಾತ್ಯಾಯನಿ ಭವಾನಿ ಕೌಮಾರಿ ಪ್ರ ।
ಸನ್ನೆ ಪಾರ್ವತಿ ರಕ್ಷಿಸೆಂದೇಕಚಿತ್ತದಿಂ ತಪಗೈದ ನಿರಶನದೊಳು ॥ 108 ॥

॥ **ಸೌರಾಷ್ಟ್ರ – ತ್ರಿವುಡೆ** ॥

ನಿರಶನವ್ರತದಿಂದ ಸಾವಿರ ।
ವರುಷ ತಪಗೈಯಲ್ಕೆ ಚಂಡಿಕೆ ।
ದರುಶನವನಿತ್ತಳು ಸುರಾರಿಗೆ ।
ಹರುಷದಿಂದ ॥ 109 ॥

ಹಾರ ಕಂಕಣವಲಯಧರಿ ಕೇ ।
ಯೂರ ಕಾಂಚೀದಾಮ ನೂಪುರ ।
ಚಾರು ದಿವ್ಯಾಂಬರ ವಿಭೂಷಣ ।
ನೀರಜಾಕ್ಷಿ ॥ 110 ॥

ಮಂದಹಾಸದೊಳೀಕ್ಷಿಸುತ ಶಿವೆ ।
ನಿಂದಿರಲು ಪ್ರತ್ಯಕ್ಷವಾಗಿಯೆ ।
ವಂದಿಸುತ ಭಕ್ತಿಯಲಿ ನುತಿಸಿದ ।
ನಂದು ದನುಜ ॥ 111 ॥

॥ **ನವರೋಜು – ಆದಿ** ॥

ಪಾಲಿಸೆನ್ನನು ತಾಯೆ । ಕರು ।
ಣಾಳು ಶಂಕರಪ್ರೀಯೆ ॥
ಮೂಲಮಂತ್ರದಲಿ ಮುನಿಮನನಿಲಯೆ ।
ಕಾಳರಾತ್ರಿ ಮಣಿಕಂಕಣವಲಯೆ ॥ ಪ ॥

ನಂಬಿದೆ ನಾನಾ ರೂಪೆ । ಜಗ ।
ದಾಂಬಿಕೆ ಕೀರ್ತಿಕಲಾಪೆ ॥
ಕಂಬುಕಂಠಿನಿ ಜಗದೀಶ್ವರಿ । ಷಟ್ ಚ ।
ಕ್ರಾಂಬುಸಂಚಾರಿಣಿ ಮಹಾದೇವಿ ॥ 112 ॥

ಇಂದುನಿಭಾನನೆ ಗೌರೀ । ಸುರ ।
ವಂದಿತೆ ಕಲ್ಮಷಹಾರೀ ॥
ಸುಂದರಾಂಗಿ ಸುಖದಾಯಿನಿ । ನಿತ್ಯಾ ।
ನಂದರೂಪೇ ಎನಲೆಂದಳು ಗಿರಿಜೆ ॥ 103 ॥

ನಿನಗೇ ಮೆಚ್ಚಿದೆ ನಾನು । ನಿನ್ನ ।
ಮನದಾಭೀಷ್ಟವದೇನು ॥
ಎನಲಾಕ್ಷಣ ವರವೆರಡನು ಕೊಡುವೆನು ।
ತನಯ ನೀ ಬೇಡಿಕೊಳ್ಳೆಂದಳು ಮುದದಿ ॥ 114 ॥

॥ **ಭಾಮಿನಿ** ॥

ತಂದೆತಾಯ್ಗಳ ಬೀಜವಿಲ್ಲದೆ ।
ಬಂದು ಜನನಿಯ ಜಠರವಾಗದೆ ।
ಕಂದನನು ತಾಯ್ ತಂದೆ ಬಯಸದೆ ಪುಟ್ಟಿದವನಿಂದ ॥

ಹೊಂದುವೆನದಲ್ಲದೆ ಚತುರ್ವಿಧ ।
ವೆಂದೆನಿಪ ಜೀವರುಗಳಿಂದೆನ ।
ಗೆಂದು ಮರಣವು ಬಾರ[ದೊಲು ನೀಡುವುದು] ವರವೆಂದ ॥ 115 ॥

॥ **ಕೇದಾರಗೌಳ – ಅಷ್ಟ** ॥

ಲಾಲಿಸಿನ್ನೊಂದಭೀಷ್ಟವನುಸುರುವೆ ದೇವಿ ।
ಕಾಳಗ ಮುಖದೊಳಗೆ ॥
ಆಳು ರಥಾಶ್ವ ಮದೇಭ ಸಂದೋಹವು ।
ಮೇಲೆ ಮೇಲೊದಗಬೇಕು ॥ 116 ॥

ಮನದಿ ಯೋಚಿಸಿದಂತೆ ನೆರೆದು ವಾಹಿನಿ ಶರ ।
ಧನು ಖಡ್ಗ ಮುಸುಲದಿಂದ ॥
ತನಗೆ ಪಾಸಟಿಯಾಗಿ ರಣದೊಳು ಕಾದುವ ।
ದನುಜರು ಜನಿಸುವಂತೆ ॥ 117 ॥

ಪ್ರೀತಿಯಿಂದೀಯಬೇಕೆಂದು ದಶಾಸ್ಯ ಸಂ ।
ಭೂತನು ವಂದಿಸಲು ॥
ಈ ತೆರನಾದ ವಾಂಛಿತವಿತ್ತು ನಡೆದಳು ।
ಯಾತುಧಾನಾಗ್ರಣಿಗೆ ॥ 118 ॥

॥ **ವಾರ್ಧಕ** ॥

ಚಂಡಿಕಾದೇವಿಯೊಳ್ ಕಾಮಿತವ ಪಡೆಯುತಾ ।
ಖಂಡಲಾರಿಯ ಸಹೋದರಪೂರ್ವಮಾತೆಯರ್ ।
ಕಂಡು ಲಂಕಾದುರ್ಗಮಂ ತೋರಿಸಲ್ಕೆವೊಡಗೊಂಡು ಪೂಜಾರಿಣಿಯನು ॥
ದಂಡಾದಿ ಪರಶು ಮುದ್ಗರ ಶೂಲ ಶಕ್ತಿ ಕೋ ।
ದಂಡ ಶರ ಗದೆ ಪಾಶ ಸುರಗಿ ತೋಮರ ಚಕ್ರ ।
ಪಿಂಡಿವಾಲಾದಿ ನಾನಾಯುಧವಿಶಾರದರ ನೆನೆದನಾ ಕ್ಷಣ ಜನಿಸಿತು ॥ 119 ॥

॥ ಮಾರವಿ – ಏಕ ॥

ಅತಿಮಿತಿ ಇಲ್ಲದ । ಚತುರ ತುರಂಗಮ ।
ತತಿ ಜೊತೆಯಿಂದಾ । ಖತಿಯುತರಾಗಿಹ ।
ದಿತಿಸುತ ಸೇನಾ । ಪ್ರತತಿ ತದಂಘ್ರಿಯ ।
ಹತಿಗತಿ ಕಂಪಿಸಿ । ಕ್ಷಿತಿಸತಿಯೊದರಲು ॥
ಬಂದರಾಗ । ನಡೆತಂದರಾಗ ॥ 120 ॥

ಕಂಗಳರುಣ ದಶ । ನಂಗಳ ಮಿರುಪ ಭು ।
ಜಂಗಳೊಳಲಘು ವಾ । ದ್ಯಂಗಳ [ರವ] ಶ ।
ಸ್ತ್ರಂಗಳ ಝುಡಿತೆ ಹ । ಯಂಗಳ ಹೇಷ ಗ ।
ಜಂಗಳ ಛೀತ್ಕಾ । ರಂಗಳ ರಭಸದಿ ॥
ಬಂದರಾಗ । ನಡೆತಂದರಾಗ ॥ 121 ॥

ಅಡಿಗಡಿಗುದಿಸುತ । ಪಡೆ ಕಡುಮದಿಸುತ ।
ಕಿಡಿಗೆದರುತ ಎಡೆ । ಬಿಡದೊದರುತ ತೊಡ ।
ರೆಡರೆಬ್ಬುತವೊಡ । ನೊಡ ನುಬ್ಬುತ ಘುಡು ।
ಘುಡು ಘುಡು ಘುಡಿಸುತ । ನಡುನಡುಗಿಸುತಾ ।
ಬಂದರಾಗ । ನಡೆತಂದರಾಗ ॥ 122 ॥

॥ ವಾರ್ಧಕ ॥

ತೆಗೆದು ಝುಳಪಿಸುವ ಕರಪತ್ರದಿಂ ಛತ್ರದಿಂ ।
ಗಗನಕೆಬ್ಬಿಸುವ ಕೆಂಧೂಳ್ಗಳಿಂ[ದಾಳ್ಗಳಿಂ] ।
ಅಗಣಿತ ಮದೇಭ ಹಯಜಾಲದಿಂ ಶೂಲದಿಂ ಧನುಶರಾದ್ಯಸ್ತ್ರದಿಂದ ॥
ಜಗವ ನುಂಗಲ್ಕೆ ತೆರೆದಾಸ್ಯದಿಂ ಹಾಸ್ಯದಿಂ ।
ಮಿಗುವರಿವ ಕಾರೊಡಲ ಮುರುಪಿನಿಂದರುಪಿನಿಂ ।
ಪಗೆಗಳಂ ಜಯಸುವಾಟೋಪದಿಂ ಕೋಪದಿಂದೈತಂದನಾ ರಾವಣಿ ॥ 123 ॥

॥ ದ್ವಿಪದಿ ॥

ಬಂದು ಲಂಕೆಯ ಬಹಿರ್ಭಾಗದಲಿ ನಿಂದು ।
ಮುಂದೆಸೆವ ಹರ್ಮ್ಯ ಪ್ರಾಸಾದಗಳನಂದು ॥ 124 ॥

ಕಂಡು ವಿಸ್ಮಿತನಾಗಿ ಮಂತ್ರಿಗಳ ಕರೆದು ।
ಕಂಡಿರೇ ನಮ್ಮಯ್ಯನಾಳ್ದ ನಗರವಿದು ॥ 125 ॥

ಎನುತ ತೋರಿದನು ಸೌಧಾವರಣಗಳನು ।
ಕನಕಮಯವಾಗಿ ಥಳಥಳಿಪ ಕುಡ್ಯವನು ॥ 126 ॥

ಕನ್ನಡಿಯ ಕರುವಾಡದುಪ್ಪರಿಗೆಗಳನು ।
ಉನ್ನತದ ಗೋಪುರದ ಚಿತ್ರಪತ್ರವನು ॥ 127 ॥

ನವರತುನದಾಳುವೇರಿಗಳ ಕೆಲಬಲದಿ ।
ಅವಿರಳಾರಾಮಗಳ ಕಂಡನುತ್ಸವದಿ ॥ 128 ॥

॥ **ವಾರ್ಧಕ** ॥

ಕುಸುಮ ಫಲಭಾರದಿಂದಳಿಯ ಝೇಂಕಾರದಿಂ ।
ಲಸದುತ್ತ್ರವಾಳದಿಂ ಶುಕಪಿಕ ಮರಾಳದಿಂ ।
ಶ್ವಸನ ದಾಳಿಂಬದಿಂ ವಟ ಶಮಿ ಕದಂಬದಿಂ ಪೂಗಪುನ್ನಾಗದಿಂದ ॥
ಕಿಸಲಯ ಮರೀಚಿಯಿಂದಪರಿಮಿತ ವೀಚಿಯಿಂ ।
ದೆಸೆವ ಕಾಸಾರದಿಂದಮಲಪಯಪೂರದಿಂ ।
ಬಿಸಜಸುಮಗಂಪಿನಿಂ ಶ್ರಮಗಳವತಂಪಿನಿಂದೆಸೆದಿರ್ದವಾ ವನಗಳು ॥ 129 ॥

॥ **ಭಾಮಿನಿ** ॥

ಪುರದ ಸಿರಿಯನು ನೋಡಿ ಮನದೊಳು ।
ಕರುಬನಾಂತು ದಶಾಸ್ಯನಾತ್ಮಜ ।
ಪರಿಪರಿಯ ಫಲಪುಷ್ಪ ಪಣ್ಗಳ ಕೊಯ್ದುತಾರೆಂದು ॥
ಚರನನೋರ್ವನ ಕರೆದು ನೇಮಿಸೆ ।
ಭರದಿ ಪರಿತಂದಾ ವನವ ಪೊಗು ।
ತಿರಲು ಕಾಪಿನ ದೂತನಡಗಟ್ಟಿದನು ರೋಷದಲಿ ॥ 130 ॥

॥ **ಪಂತುವರಾಳಿ – ಮಟ್ಟೆ** ॥

ವನವ ಪೊಗುವರ್ಯಾರೊ ನಮ್ಮ ।
ಇನಿತು ಗಬ್ಬಿತನವೆ [ಬೆನ್ನ ।
ಹಣಿದು ಕೈಯ] ಕಾಲ್ಮುರಿವೆ ।
[ಮನೆಗೆ ಪೋ]ಗೆಲವೊ ಸುಮ್ಮನೆ ॥ 131 ॥

ತಡೆವೆ ಯಾಕೊ ನಮ್ಮನಿಲ್ ।
ಬಡವಿ ಬಲ್ಮಡಾಕಿನಿಂದ ।
ತೊಡಕುಬೇಡ ಮುದಿಯ ಮುಂದೆ ।
ಬಿಡದೆ ಪೆಟ್ಟ ತಿನ್ನುತಿಯಾ ॥ 132 ॥

ನಿಲ್ಮೆ ಮುದಿಯ ನಲ್ ಸಿಪಾಯಿ ।
ಬಲ್ಮೆ ಕೈಯಲಿದಕೊ ಬಾಕು ।
ದಾಲ್ಮ ಹೊಂಬಾಳ್ಕತಾರಿ ।
ತಾಳ್ಮೆ ಬಗಿಯ ನೋಡು ಕೈಯ್ಯಾ ॥ 133 ॥

ಸಾಕು ಮುರ್ಕುಪಾಣಿ ವಾಲ್ ಧಿ ।
ಮಾಕು ತೋರ್ತಿ ಮುಸುಡ ಮೈ ।
ಜೋಕಿಯಾಗದೆಂದು ಬೆದರ ।
ದೇಕು ಮಾಸು ದೋರುತಿಯಾ ॥ 134 ॥

ನಮ್ಮದೂರ್ವಾಶಿ ಕಾಲನಿಕ ।
ಲೊಮ್ಮಿವಾನ್ ಖಚರಿಗೊಯ್ದು ।
ತಿಮ್ಮದೆವು ಕುತೀನಿ ಚಂಡಿನ ಮೇಲ್ ।
ನಿರ್ಮದಗಲ್ಪಾ ಬೈದೆಯಾ ॥ 135 ॥

ಸೊಕ್ಕಿನಿಂದ ಗರ್ಜು ಲೂಯಿ ।
ನಿಕ್ಕುತಿ ನಮ್ಮ ದೊರೆಗೆ ಸ ।
ಲ್ತಕ್ಕದುದ್ಯಾನವಿದಕೆ
ದಕ್ಕೆ ನಿನ್ನು ನಮ್ಮದೇಯಾ ॥ 136 ॥

॥ **ಭಾಮಿನಿ** ॥

ಕೈದುಡುಕಿತಿಂತೆಂಬ ಮಾತಿಗೆ ।
ಬೈದು ಬಡಿದಾಡಲ್ಕೆ ಬೋಡಿಗೆ ।
ಹೊಯ್ದು ನೂಕಿದರೆಲವೊ ನಿಮ್ಮಪ್ಪಂಗೆ ಪೇಳೆಂದು ॥
ಮೈದೊಗಲ ಮದ್ದುತ ಬಂದನು ।
ಸುಯ್ದು ಲಂಕಾಧಿಪನ ಪತ್ತಿರ ।
ವೊಯ್ದಿಳುಹಿದನು ಸಕಲ ವೃತ್ತಾಂತವನು ಮರುಗುತ್ತ ॥ 137 ॥

॥ **ಮುಖಾರಿ – ಆದಿ** ॥

ಚಿತ್ತವಿಸೆನ್ನ ಬಿನ್ನಪವ । ಲಂಕಾಪುರೀಶ ।
ಚಿತ್ತವಿಸೆನ್ನ ಬಿನ್ನಪವ ॥
ಪತ್ತಿ ತುರಗ ಗಜ । ವತ್ತರದಿಂ ಕಾ ।
ರ್ಗತ್ತಲೆಯಂದದಿ । ಮುತ್ತಿದೆ ಪುರವನು ॥ ಪ ॥

ಮೂಲಕಾಸುರನೆಂಬ ಖಳನು । ಪೂರ್ವದಿ ದಶ ।
ಮೌಳಿಯಿಂದಲೆ ಪುಟ್ಟಿದವನು । ತಂದೆಯ ನಿಧನ ।
ಕೇಳಿ ರಾಘವನಿಂದ ನೀನು । ಕೊಲಿಸಿದೆನೆನುತ ।
ತಾಳಿ ಸ್ವಾಂತದಿ ವಿರೋಧವನು ॥
ಶೂಲ ಮುಸುಲ ಕರ । ವಾಳ ಪರಶು ನಿಡು ।
ಗೋಲು ಧರ್ಮವಿಡಿ । ದಾಳುನಿಕರ ಸ ।
ಮ್ಮೇಳದಿ ನಿನ್ನೊಳು । ಕಾಳಗಗೈಯಲು ।
ಖೂಳನು ಬಂದಿಹ । ರೋಳು ಬಲುಮೆಯಿಂ
ದಾಲಿಸು ದೊರೆಯೆ ॥ 138 ॥

ಘೋರರೂಪಿನ ನಿಶಾಚರರು । ಉತ್ತುಂಗ ವಾಜಿ ।
ವಾರಣಂಗಳನಡರಿಹರು । ಯಕ್ಷೇಶ ಯಮ ಸ ।
ಮೀರಾದಿ ಸರ್ವ ದಿಗ್ವರರು । ನಿಂತಲ್ಲಿ ನಿಲ್ಲ ।
ದೂರಬಿಟ್ಟರು ವೃಂದಾರಕರು ॥
ಮೂರಂಬಕನಪ । ಚಾರಿಸಿ ಗೆಲುವ ಮ ।
ಹಾರಾಕ್ಷಸ ಪರಿ । ವಾರವ ಗಣಿಸಲು ।
ತೀರದನಂತಗೆ । ತೋರಾಳ್ದನನೆಂ ।
ದಾರುಭಟಿಸುವರು । ಮೀರಿತು ಜವದಿ ವಿ ।
ಚಾರಿಸು ದೊರೆಯೆ ॥ 139 ॥

॥ **ಶಂಕರಾಭರಣ – ಮಟ್ಟೆ** ॥

ಚರರ ನುಡಿಯ ಕೇ । ಳ್ದಾ ವಿಭೀಷಣ ॥
ಬೆರಗಿನಿಂದ ಸೈ । ಪಿಟ್ಟು ದೂತನ ॥ 140 ॥

ಕರೆಸಿ ಸಚಿವರಾ । ಸಖ ಚಮೂಪರಾ ॥
ಅರುಪಿ ಬಲವನು । ಕೂಡಿರೆಂದನು ॥ 141 ॥

ನೆರೆದುದಾಕ್ಷಣ । ತುರಗ ವಾರಣ ॥
ಮೊರೆವ ಕಹಳೆಯ । ಪಣವ ಭೇರಿಯ ॥ 142 ॥

ವಿಧವಿಧಾಸ್ತ್ರದಿಂ । ದಾತಪತ್ರದಿಂ ॥
ಕದನಕಸುರರು । ಪೊರಟು ನಿಂದರು ॥ 143 ॥

॥ **ವಾರ್ಧಕ** ॥

ಪೆಗಲೊಳೇರಿಸಿದ ನವತೂಣದಿಂ ಬಾಣದಿಂ ।
ಬಗೆಬಗೆಯ ವಾದ್ಯಗಳ ಘೋಷದಿಂ ತೋಷದಿಂ ।
ದೃಗುಯುಗದೊಳೊಗೆವ ಕೂರ್ಗಿಡಿಗಳಿಂದಡಿಗಳಿಂ ಪೊಡವಿ ಕಂಪಿಸುತಿರಲ್ಕೆ ॥
ಸಗರಾನ್ವಯನ ಕೃಪೆಯ ಬಲದಿಂದ ಛಲದಿಂದ ।
ಮೃಗರಾಜರವ ಪರಾಕ್ರಮದಿಂದ ಕ್ರಮದಿಂದ ।
ಸುಗದಾಸಿ ಪರಶು ತೋಮರದಿಂದ ಭರದಿಂದ ಪೊರಮಟ್ಟುದಾ ವಾಹಿನಿ ॥144॥

॥ **ನಾದನಾಮಕ್ರಿಯೆ – ಅಷ್ಟ** ॥

ಪುರವ ಮುತ್ತಿದ ಚತುರ್ಬಲವನು । ರಥ ।
ತುರಗಮದೇಭ ಸಂಕುಲವನು ॥
ಉರವಣಿಸುತ ಹೊಕ್ಕು ಹೊಯ್ದರು । ನಿಶಾ ।
ಚರ ಪಡೆಯನು ಕೊಲೆಗೈದರು ॥ 145 ॥

ನಾಲ್ದೆಸೆಯೊಳಗೆ ಕೈಗಲಿಸಿತು । ನಿಡು ।
ಗೋಲ್ದುದಿಯಲಿ ರಕ್ತ ನೆಲಸಿತು ॥
ಸೋಲ್ದವರಿಲ್ಲ ಸಂಗ್ರಾಮದಿ । ಪಿಂತೆ ।
ಕಾಲ್ದೆಗೆಯರು ಕ್ಷಣ ಸಾಮದಿ ॥ 146 ॥

ಕಂಡು ಮೂಲಕನತಿ ಕೋಪದಿ । ಬಿಲು ।
ಗೊಂಡು ಝೇಂಕರಿಸಿ ಪ್ರತಾಪದಿ ॥
ಅಂಡಲೆದಹಿತರ ಕೊಂದನು । ನಿಮ್ಮ ।
ತೊಂಡ ತೋಳೇಸ ತೋರಿರೆಂದನು ॥ 147 ॥

॥ **ವಾರ್ಧಕ** ॥

ಶರವ ಪುಷ್ಕರವ ಮಿಗೆ ಮೆಚ್ಚಿದಂ ಕೊಚ್ಚಿದಂ ।
ಹರಿಯ ಮದಕರಿಯ ರಥದೊಳವನೂರ್ವಳವ ಪಿಂ ।
ದಿರಿಸುತಬ್ಬರಿಸುತರುಣಾಕ್ಷ ಹರಿಯಕ್ಷ ಗಜನಿಕರದೊಳ್ಚರಿಸುವಂತೆ ॥
ಜರದು ಬಾಯ್ದೆರೆದು ಹುಂಕರಿಸಿ ಮತಿದೊರಕಿ ಮುಂ ।
ಬರಿದು ಬಗೆಯರಿದು ಜವಗೆಡಿಸಿಲವಗೆಡಿಸಿ ಸಂ ।
ಗರದಿ ನಿಜಕರದಿ ನಾನಾಸ್ತ್ರದಿಂ ಶಸ್ತ್ರದಿಂ ಕೊಲೆಗೈವುತಿರೆ ಬಲವನು ॥ 148 ॥

॥ **ಶಂಕರಾಭರಣ – ಮಟ್ಟೆ** ॥

ಖಳನ ಬಲುಹ ನೋಡಿ ರೋಷ । ದಲಿ ವಿಭೀಷಣ ।
ಎಲವೊ ಕಲ್ಮಷಾತ್ಮಬಂಧು । ಕುಲವಿನಾಶನ ॥
ನಿಲು ಕ್ಷಣಾರ್ಧದಲ್ಲಿ ನಿನ್ನ । ತಲೆಯಕೊಂಬೆನು ।
ಕಲಹದಲ್ಲಿ ತೋರು ನಿನ್ನ । ಬಲುಹ ಕಾಂಬೆನು ॥ 149 ॥

ಎಂದು ಸರಳವರ್ಷಗರೆಯ । ಲಂದು ದನುಜನು ।
ಬಂದ ಶರವ ಕಡಿದು ನುಡಿದ । ನಂದು ಕುಲವನು ॥
ಕೊಂದ ಬಳಿಕ ನಿನಗು ಮೃತ್ಯು । ವೆಂದು ತಿಳಿದಿರು ।
ಮುಂದೆ ನಿನ್ನ ಕೊಲ್ಲದುಳಿಯೆ । ನೆಂದಿಗಾದರೂ ॥ 150 ॥

ಎನ್ನ ಕಲ್ಮಷಾತ್ಮನೆಂಬ । ಮುನ್ನ ವೈರಿಯ ।
ಬನ್ನಬಡಿಸದೊಳವ ಪೊಕ್ಕು । ಎನ್ನ ತಂದೆಯ ॥
ನಿನ್ನ ಬಾಳ್ವೆಗಾಗಿ ವಂಶ । ವನ್ನು ಕೊಲಿಸಿದೆ ।
ಕುನ್ನಿಯಂತೆ ಬಗುಳ್ವ ನುಡಿಯು । ಚೆನ್ನವಾಗಿದೆ ॥ 151 ॥

ಶ್ವಾನವೆಂದು ಬಗೆದೆಯೇನೋ । ದಾನವಾಧಮ ।
ಭಾನುಕುಲದೊಳುದಿಸಿದ ವೈ । ಮಾನಿಕೋತ್ತಮ ॥
ತಾನು ರಕ್ಷಿಸಿದ ಮೃಗೇಂದ್ರ । ನೀನದರಿಯದೆ ।
ಮಾನಗೆಟ್ಟು ನುಡಿದಡೆನಗೆ । ಹೀನವಿನ್ನದೆ ॥ 152 ॥

ಸುರವಿರೋಧಿಯಾಗಿ ಪೊಕ್ಕೆ । ನರನ ಮರೆಯನು ।
ತೊರೆದೆ ನಾಚಿಕೆಯನು ನಿನ್ನ । ವರನು ಕಂಡೆನು ॥

ಬರಿದೆ ಬಣ್ಣವೇಕೆ ಮುಚ್ಚು । ಮರುಳೆ ನಿನ್ನನು ।
ಧುರದಿ ನೋಳ್ಪೆನೆನುತ ಕರೆದ । ಸರಳಮಳೆಯನು ॥ 153 ॥

॥ **ಭೈರವಿ – ಏಕ** ॥

ಉರಗಾಸ್ತ್ರವ ಬಿಡಲದನು । ಖಗ ।
ವರಬಾಣದಿ ಸವರಿದನು ॥
ಗಿರಿಶರವನು ಖಳ ಪೂಡೆ । ಪರಿ ।
ಹರಿಸಿದ ಕುಶಲದಿ ಕೂಡೆ ॥ 154 ॥

ಜಲಸಾಯಕವನು ತೊಡಲು । ಅದ ।
ಗೆಲಿದನು ಮರುತಾಸ್ತ್ರದೊಳು ॥
ಛಲದಿಂ ತುಹಿನಾಸ್ತ್ರವನು । ಬಿಡೆ ।
ಚಲಿಸದೆ ಲಂಕಾಧಿಪನು ॥ 155 ॥

ಹುತವಹ ಶರದಿಂ ಗೆಲಲು । ಖಳ ।
ನತಿಬೆಚ್ಚುತ ರೋಷದೊಳು ॥
ಜಿತಕೋದಂಡವ ಕಡಿದ । ಹಯ ।
ರಥಸಾರಥಿಗಳ ತರಿದ ॥ 156 ॥

॥ **ಭಾಮಿನಿ** ॥

ಕರದ ಧನುವನು ಕತ್ತರಿಸಿದೊಡೆ ।
ಧುರದಿ ಕೈಗೆಡುವನೆ ವಿಭೀಷಣ ।
ಸರಸಿಜೋದ್ಭವನಿತ್ತ ಶಕ್ತಿಯ ತೆಗೆದು ಮುನಿದಿಟ್ಟ ॥
ಉರವ ಬಗಿದುದ್ಬಳಿಸಿ ಹಾಯ್ದುದು ।
ಧರೆಯೊಳೊರಗಿದನಾಗ ಮೂಲಕ ।
ಮರೆದು ತನ್ನ ಶರೀರದಿರವನು ತ್ರಿಘಟಿ ಪರಿಯಂತ ॥ 157 ॥

॥ **ಭೋಗಷಟ್ಪದಿ** ॥

ಬಳಿಕ ಮೂರ್ಛೆಯಿಳಿದು ವರದ ।
ಬಲುಮೆಯಿಂದಲೆದ್ದು ಭಾಪು ।
ಭಳಿರೆ ಸಹಸಿಯೆನುತ ಮುಷ್ಟಿಗಲಹಕಾಂತನು ॥

ಕಲಹದಲ್ಲಿ ಬೆಚ್ಚಿಬೆದರಿ ।
ತೊಲಗುವನೆ ವಿಭೀಷಣಾಂಕ ।
ನಿಲುನಿಲೆನುತ ಭುಜವನಿತ್ತನಲಘುವಿಕ್ರಮ ॥ 158 ॥

ಗಿರಿಯೊಳಶನಿ ತಾಗುವಂತೆ ।
ಭರದಿ ತಿವಿಯೆ ಮೂಲಕಾಖ್ಯ ।
ಧಿರುರೆ ವೀರನಹೆಯೆನುತ್ತ ತರಹರೀಸುತ ॥
ಮರಳಿ ಕರವ ಬಲಿದು ದೈತ್ಯ ।
ನುರದ ಮೇಲೆ ತಿವಿದ ಸಿಡಿಲು ।
ಧರೆಯ ಬಡಿದವೋಲು ಕಾಲ್ಗಳೆರಡು ಕಂಪಿಸೆ ॥ 159 ॥

ಒಡನೆ ಹತಿಯ ತಾಳಿ ದಶನ ।
ಗಡಿವುತಸುರ ಶಶಿಯ ರಾಹು ।
ತುಡುಕುವಂತೆ ಜವದಿ ಬಂದು ಪಿಡಿದು ಪಾಣಿಯ ॥
ಅಡಿಯ ಕೂಡಿ ತಿರುವಿ ಗಗನ ।
ಕಿಡಲು ಬೆದರದಿಳಿದು ಕಾಲ ।
ತೊಡರಿ ಚಿತ್ತ್ರತಾಪದಿಂದ ಕೆಡಪಿ ಧರಣಿಗೆ ॥ 160 ॥

ಮುನಿದು ನೆಗಪಿ ಬಿಟ್ಟ ಸಪ್ತ ।
ವನಧಿಗಳನು ದಾಂಟಿ ನೋಯ ।
ದನಿತರೊಳಗೆ ಕೂಡಿ ನಿಲ್ಲೆನುತ್ತ ರಾವಣಿ ॥
ನಿನಗೆ ಮಣಿವನಲ್ಲ ಬರಿದೆ ।
ಜನಿತರೋಷದಿಂದ ನಿನ್ನ ।
ತನುವ ಕಳೆವೆ ಯಾಕೆ ಬಂದು ವಿನಯದಿಂದಲೆ ॥ 161 ॥

ಪುರವನೆನಗೆ ಬಿಟ್ಟುಕೊಟ್ಟು ।
ಸಿರಿಯ[ನೆಲ್ಲ ಪದಕೆ ಬಿಟ್ಟು] ।
ಮರೆಯ ಪೊಕ್ಕು ಜೀವಿಸೆಲವೊ ಧುರದಿ ಕೊಲ್ಲೆನು ॥
ಮರುಳೆ ನಿನ್ನ ಕೈಯಲೆನಗೆ ।
ಮರಣವುಂಟೆ ರಕ್ಷಿಸುವನು ।
ತರಣಿಕುಲಲಲಾಮ ಮನದೊಳರಿಯೆ ಸುಮ್ಮನೆ ॥ 162 ॥

ಅಳಲಬೇಡ ಬರಿದೆ ನಗರ ।
ನಿಲಯ ದೇಶಕೋಶ ನಿನಗೆ ।
ಸಲುವದಲ್ಲ ಬಯಸಿ ವ್ಯರ್ಥ ಕೊಲಿಸಿಕೊಂಬೆಯ ॥
ನಳಿನನಾಭನಿತ್ತ ಪದವಿ ।
ಯೊಳಗೆ ಚಲಿಸಬೇಡ ಮನವ ।
ಚಲಿಸೆ ಯುದ್ಧಗೈಯೆನಲ್ಕೆ ಮುಳಿದು ನಿಂದನು ॥ 163 ॥

ಒಮ್ಮೆ ಮೂರ್ಛೆಯಿಂದ ಬೀಳ್ವ ।
ರೊಮ್ಮೆ ಪಂಥದಿಂದಲೇಳ್ವ ।
ರೊಮ್ಮೆ ಯುದ್ಧದಲ್ಲಿ ಸೋಲ್ವರೊಮ್ಮೆ ಗೆಲ್ವರು ॥
ಒಮ್ಮೆ ಚಾಪಬಾಣದಿಂದ ।
ಲೊಮ್ಮೆಖಡ್ಗ ಮುಸುಲದಿಂದ ।
ಲೊಮ್ಮೆ ಸುರಗಿ ಕುಂತದಿಂದಲೊಮ್ಮೆ ಗದೆಯೊಳು ॥ 164 ॥

॥ **ವಾರ್ಧಕ** ॥

ಒಂದೆಸೆಯೊಳೀರ್ವರ ಚತುರ್ಬಲಂ ಸರಿಯಾಗಿ ।
ನಿಂದು ಕಾದುತ್ತಿರಲು ಮೃತಿಯಾಗಿ ಬರಿಗೈಯ್ಯ ।
ಲಂದು ದಶಲಪನಾತ್ಮಜಂ ಮನದಿ ನೆನೆದನಿಮ್ಮಡಿ ನಾಲ್ಕುಮಡಿಯಾಗಲು ॥
ಬಂದು ಮುಸುಕಿತು ವಿಭೀಷಣನು ಮಾನತ್ರಯಂ ।
ಕುಂದದೆಚ್ಚಾಡಿ ಕಡೆಗಾಹವದಿ ಶತ್ರುಗಳ ।
ಮುಂದೆ ನಿಲಲಾರದೆ ಪಲಾಯನಂ ಗೈದು ನಾಸಿಕದುರ್ಗಮಂ ಪೊಕ್ಕನು ॥165 ।

॥ **ಮಧ್ಯಮಾವತಿ – ತ್ರಿವುಡೆ** ॥

ಓಡಿದ ವಿಭೀಷಣನ ಮೂಲಕ ।
ನೋಡಿದನು ಚಿಕ್ಕಪ್ಪನೆಲೆ ರಣ ।
ಹೇಡಿ ಯುದ್ಧದಿ ಜೀವದಾಸೆಯ ।
ಮಾಡಿದೆಯಾ ಹೋಗೆಂದನು ॥ 166 ॥

ವಿರಥನಾದನ ಶರಣು ಹೊಕ್ಕನ ।
ಮರೆಯ ಬಿದ್ದೋಡಿದನ ಕೈದುವ ।
ಧರಿಸದೀರ್ಪನ ರಣದಿ ಕೊಲುವುದು ।
ಧರೆಯೊಳನುಚಿತವೆಂದನು ॥ 167 ॥

ಹೋಗಿ ಬದುಕಿರೆನುತ್ತ ಧರ್ಮದೊ ।
ಳಾಗ ಪುರವನು ಪೊಕ್ಕು ಮನದನು ।
ರಾಗದಲಿ ಸಕಲ ವಸ್ತುವೊಡವೆಯ ।
ಬೇಗ ತಾ ಬೈಚಿಟ್ಟನು ॥ 168 ॥

ತಂದೆಯನು ಕೊಂದವನ ಕೊಲುವುದು ।
ಮುಂದೆ ತನ್ನಯ ರಾಜಕಾರ್ಯವಿ ।
ದೆಂದಯೋಧ್ಯಾಪುರವರಕೆ ನಡೆ ।
ತಂದ ಸೇನೆಯು ಸಹಿತಲಿ ॥ 169 ॥

ಮನದ ಚಿಂತೆಯೊಳಾ ವಿಭೀಷಣ ।
ಘನಕೃಪಾನಿಧಿ ರಾಮಚಂದ್ರನ ।
ನೆನೆವುತೀರ್ದನು ದಯದಿ ತ್ರಿಜಗ ।
ಜ್ಜನಕ ನೀ ಸಲಹೆನ್ನುತ ॥ 170 ॥

॥ **ಮಾರವಿ – ಏಕ** ॥

ಇತ್ತಲಯೋಧ್ಯಾಪುರದೊಳು ಭಾನುಕು ।
ಲೋತ್ತುಮನಿರುತಿರಲು ॥
ಚಿತ್ತಜಪಿತ ನಾರಾಯಣಯೆನುತ ವಿ ।
ಯತ್ತಳದಿಂದಾಗ ॥ 171 ॥

ವೀಣಾಗಾಯನದಿಂದಿಳಿದನು ಗೀ ।
ರ್ವಾಣಮುನಿಪ ಮುದದಿ ॥
ಕಾಣುತ ಸತ್ಕರಿಸಿದನು ಶರಾಸನ ।
ಪಾಣಿಯು ವಿಧವಿಧದಿ ॥ 172 ॥

ನಾರದಮುನಿ ಭೂಜಾತೆಯ ಪತಿಯುಪ ।
ಚಾರವ ಕೈಗೊಂಡು ॥
ತೋರಿದ ವೃತ್ತಾಂತಂಗಳನರುಹಿದ ।
ಕಾರಣವಿಗ್ರಹಗೆ ॥ 173 ॥

॥ ದ್ವಿಜಾವಂತಿ – ಅಷ್ಟ ॥

ಲಾಲಿಸು ಕರುಣಾನಿಧೆ ರಾಘವಗುಣ ।
ಶೀಲ ಶ್ರೀರಾಮಚಂದ್ರ ॥
ಬಾಲದಿವಾಕರಕೋಟಿಭಾಸಜನ ।
ಪಾಲ ಸುಗುಣಸಾಂದ್ರ ॥
ಮೂಲಕನೆಂಬ ನಿಶಾಚರನಿಂದ ನಿ ।
ಜಾಲಯವ ಬಿಟ್ಟಿರ್ಪವಿಭೀಷಣ ॥ 174 ॥

ಏನಿದದ್ಭುತವಿದು ನಾರದ ಕೇಳನು ।
ಮಾನವಾಗಿದೆ ನನಗೆ ।
ನೀನುಸುರ್ಯೆ ಮದ್ಭಕ್ತವಿಭೂಷಣ ।
ಗೇನು ಉಪದ್ರವವವಗೆ ॥
ದಾನವನೆಲ್ಲಿ ಸಂಭವಿಸಿದ ಕಾರಣ ।
ವೇನು ಲಂಕಾನಗರಕ್ಕೈತರಲು ॥ 175 ॥

ದುರುಳಖಳನ ವೃತ್ತಾಂತವ ಕೇಳ್ ದಶ ।
ಶಿರನ ಪುತ್ರನವನು ।
ಧರೆಗುದಿಸಲು ಶುಭವಲ್ಲವೆಂದು ಬುಧ ।
ರೊರೆಯಲು ತನುಜನನು ॥
ತರಿಯಳಲುಕಿ ಹೇರಡವಿಯೊಳಿಡುಕಲು ।
ತರಳ ಬೆಳೆದನಾರಣ್ಯಮಧ್ಯದಲಿ ॥ 176 ॥

ತನಗೆ ಸಲುವ ಸಾಮ್ರಾಜ್ಯವಿದನು ಬಿಡೆ ।
ನೆನುತ ಬಂದು ಖಳನು ।
ಅನುವರದೊಳು ಕೈಗೆಡಿಸಲು ಬಿಟ್ಟನು ।
ಮನೆಮನೆ ವಾರ್ತೆಯನು ॥
ತನುವಿಡಿದಿರ್ಪನು ನಾಸಿಕದುರ್ಗದೊ ।
ಳೆನುತ ಸೂಚಿಸಿ ಸುರಮುನಿವರನೈದಿದ ॥ 177 ॥

॥ **ಕಂದಪದ್ಯ** ॥

ನಾರದನೆಂದಾ ನುಡಿ ಕೇ ।
ಳ್ದಾ ರಘುವೀರನು ವಿಸ್ಮಿತನಾಗುತ ಮನದೊಳ್ ॥
ಕಾರಣವೆಂತುಟೊ ಮುಂದಣ ।
ಕಾರಿಯಕಾ ಲಕ್ಷ್ಮಣನಂ ಕರೆದಿಂತೆಂದಂ ॥ 178 ॥

॥ **ಘರಜು – ಆದಿ** ॥

ತಮ್ಮ ಕೇಳಯ್ಯ ನೀ ನೂತನಕಥೆಯ ।
ನಮ್ಮ ಪೊದ್ದಿದ ವಿಭೀಷಣನ ದುಸ್ಥಿತಿಯ ॥ ಪ ॥

ದೇಶಕೋಶವ ಬಿಟ್ಟು ಸುಮ್ಮನೆ ಬಹಳ ।
ಊರಬಿಡುವನಂತೆ ಕೆಡಿಸಿದ ದುರುಳ ॥ 179 ॥

ಮರೆಯಬಹುದೆ ಇಂಥ ಪರಮಸಖನನು ।
ಧುರವಿಜಯಕೆ ನೆರವಾಗಿ ನಿಂದವನು ॥ 180 ॥

ದಶಮುಖನನು ಗೆಲಿದೆವು ಇವನಿಂದ ।
ಶಶಿಮುಖಿ ಕೈಯ್ಯಸೇರಿದಳು ನೋಡೆಂದ ॥ 181 ॥

ನಂಬಿದವರ ವಿಪತ್ ಪರಿಹರಿಸುವುದು ।
ಅಂಭೋರುಹಸಖ ಕುಲಜರ ಬಿರುದು ॥ 182 ॥

ಏನುಪಾಯವ ಕಂಡೆ ಮನದೊಳು ನೀನು ।
ದಾನವಾಧಮನ ಸಂಹರಿಸಬೇಕಿನ್ನು ॥ 183 ॥

॥ **ಶಂಕರಾಭರಣ – ಮಟ್ಟೆ** ॥

ಎಂದ ಮಾತ ಕೇ । ಳ್ದಾಗ ಲಕ್ಷ್ಮಣ ॥
ವಂದಿಸಿ ರಾಮಗಿಂತೆಂದವಿನಯದಿ ॥ 184 ॥
ದೇವ ನಿನ್ನ ಪಾ । ದಾರವಿಂದದ ॥
ಸೇವಕರುಗಳಾ । ವೇನು ಬಲ್ಲೆವೋ ॥ 185 ॥

ನಿನಗಸಾಧ್ಯವೇ । ದುಷ್ಟನಿಗ್ರಹ ॥
ಮನುಜರಂದದಿ । ಮಾತನಾಡುವೆ ॥ 186 ॥

ಜೀಯ ನಮಗೆ ನೀ । ಬೆಸಸಿದಂದದಿ ॥
ಕೈಯ್ಯೊಳಾದ ಸೇ । ವೆಗಳ ಮಾಳ್ಪೆವು ॥ 187 ॥

ಮನುಕುಲೇಂದ್ರ ತ । ಮ್ಮನ ಸುವಾಕ್ಯವ ॥
ಮನದಿ ಮೆಚ್ಚಿ ಮಾ । ರುತಿಯ ಕರೆದನು ॥ 188 ॥

॥ ದೇಶಿ – ಆದಿ ॥

ತುಂಗವಿಕ್ರಮ ಹನುಮಂತ ಬಾಬಾ । ವೀರ ।
ತುಂಗವಿಕ್ರಮ ಹನುಮಂತ ಬಾಬಾ ॥ ಪ ॥

ಹಿಂಗದೆ ಸಾಹಸದಿಂದಲಂಘಿಸಿ ಸಾಗರವ ।
ಅಂಗನೆ ಸೀತೆಗೆನ್ನಂಗುಲೀಯಕವಿತ್ತ ॥ 189 ॥

ಹೊಟ್ಟೆಕಿಚ್ಚಿನಿಂದಲಿ ವಿಶಿಷ್ಟ ಲಂಕಾಧೀಶನ ।
ದೃಷ್ಟ ಮೂಲಕನು ಬಂದಟ್ಟಿ ತಾನಾಳ್ವನಂತೆ ॥ 190 ॥

ಆ ಸಕಲೈಶ್ವರ್ಯಗಳ ಬಿಟ್ಟು ನಾಸಿಕದುರ್ಗದಲ್ಲಿ ।
ವಾಸವಾಗಿಹನಂತೆ ಲೇಸಮಾಡಯ್ಯ ಮುಂದೆ ॥ 191 ॥

॥ ವಾರ್ಧಕ ॥

ತರುಚರರನೊಡಗೊಂಡು ಕಲಿವಿಭೀಷಣನ ಕಂ ।
ಡರಿತು ಮೂಲಕನ ಹದನವ ನಿಮ್ಮ ಕೈಯೊಳಗೆ ।
ಹರಿವಾಗದಡೆ ಭಕ್ತನಂ ಕರೆದು ತಾ ನಮ್ಮ ಬಳಿಗೆಂದು ಕಳುಹಿಸಿದನು ॥
ಮರುತಾತ್ಮಜಂ ಕೆಲವು ಕಪಿನಾಯಕರ್ವೆರಸಿ ।
ಬರುತಿರ್ದನನ್ನೆಗಿದಿರಾಗಿ ರಾವಣಿ ತನ್ನ ।
ಪರಿವಾರಸಹಿತವನ ಕಂಡು ಬೆದರುತ ಕೀಶತತಿ ಕಿರುಚುತಿಂತೆಂದರು ॥ 192 ॥

॥ ಘರಜು – ಆದಿ ॥

ಬಂದ ನೋಡಿ ಖಳ ಹಮ್ಮ ।
ಮುಂದೇನುಪಾಯವು ಬಡ ನಮ್ಮ ॥ ಪ ॥

ಎಲ್ಲ ದೈತ್ಯರಂತಲ್ಲದಿವನನು ತಾ ।
ಬಲ್ಲಿದಾತ ನಾವು ನಿಲ್ಲಬಾರದ್ಯೆ ॥ 193 ॥

ಭೂರಿ ಮೊರೆವುತಿದೆ ಭೇರಿಮುರುಜುಗಳ್ ।
ಭೂರಿ ಸೇನೆ ಭೂಭಾರವಾಗಿಯದೆ ॥ 194 ॥

ಕಂಡರೆಮ್ಮನಿವನು ದಂಡಿಸದೆ ಬಿಡ ।
ಗಂಡುಗಲಿ ಮಹೋದ್ದಂಡ ರಾಕ್ಷಸನು ॥ 195 ॥

॥ **ಭಾಮಿನಿ** ॥

ದೆಸೆದೆಸೆಗೆ ಓಡಿದರು ಕಾಣು ।
ತ್ತಸುರನ ಪತಾಕಿನಿಯ ಕಪಿಗಳು ।
ಶ್ವಸನಸುತನಂಜುವನೆ ಗಮಿಸಿದನೋರ್ವ ಜವದಿಂದ ॥
ಅಸಮಬಲ ಮಾರುತಿಯ ಕಂಡತಿ ।
ಪಸರಿಸಿದ ಚಿಂತೆಯ ನಿವಾರಿಸಿ ।
ನಸುನಗುತ ಬಿಗಿಯಪ್ಪಿ ನುಡಿಸಿದನಾ ವಿಭೀಷಣನು ॥ 196 ॥

॥ **ಸೌರಾಷ್ಟ್ರ – ಆದಿ** ॥

ಕಪಿಕುಲಾಗ್ರಣಿ ವೀರ ಬಂದೆಯ । ಗುಣೋದ್ಧಾರ ।
[ವಿಪುಲ]ಸಾಹಸಗಂಭೀರ ಪರಾಕ್ರಮಿ ॥ ಪ ॥

ಅಂಜನಾಸುತನೆ ನಿ । ರಂಜನ ದಾನವ ।
ಭಂಜಕ ರಾಮನ ದೂತನೆ । ನಿರ್ಭೀತನೆ ॥ 197 ॥

ನಿನ್ನದುಸ್ಥಿತಿಯನು । ಸನ್ನುತರಾಮನು ।
ತನ್ನೊಳರಿತು ಕಳುಹಲೆನ್ನನು । ನಾ ಬಂದೆನು ॥ 198 ॥

ಕಾಲವಶವು ಕೇಳೆನ್ನ ಯಶಶ್ರೀಯನುಳಿ ।
ದೀ ಲಘುತ್ವಕೆ ಗುರಿಯಾದೆನು । ಏನೆಂಬೆನು ॥ 199 ॥

॥ **ಶಂಕರಾಭರಣ – ಅಷ್ಟ** ॥

ಚಿಂತಿಸ ಬೇಡ ವಿಭೀಷಣ । ನಿನ್ನ ।
ಸಂತೋಷಪಡಿಸುವ ರಘುರಾಮ ॥ ಪ ॥

ನಿನ್ನಯೋಧ್ಯೆಗೆ ಕರೆತಾರೆಂದು । ಸ್ವಾಮಿ ।
ಎನ್ನನಟ್ಟಿದ ಕರುಣದೊಳಿಂದು ॥

ಮುನ್ನಿನ ವ್ಯಾಕುಲವೇಕಯ್ಯ । ನಾ ।
ವಿನ್ನಲ್ಲಿಗೈದುವ ಬಾರಯ್ಯ ॥ 200 ॥

ಪರಮಸಾತ್ವಿಕರ ವಿಪತ್ತನು । ಪರಿ ।
ಹರಿಸುವ ಜಾನಕಿರಮಣನು ॥
ಶರಣಸಂದೋಹ ಚಿಂತಾಮಣಿ । ನಿನ್ನನು ।
ದ್ಧರಿಸುವ ಸುಜನಶಿರೋಮಣಿ ॥ 201 ॥

ಸುಸ್ಥಿರಪಟ್ಟವನಂದು । ಇನ್ನ ।
ದಸ್ಥಿರವಪ್ಪುದೆ ನಿನಗೆಂದು ॥
ಸ್ವಸ್ಥಾನಂ ಗೈವನು ರಾಘವ । ಆ ಕಾ ।
ಕುಸ್ಥನ ಬಳಿಗೆ ಬಾ ಪೋಗುವ ॥ 202 ॥

॥ **ಕಂದಪದ್ಯ** ॥

ಎಂದೀರ್ವರು ಮುದದಿಂ ನಡೆ ।
ತಂದರಯೋಧ್ಯಾಪುರಕಂ [ಹರಿಪದನುತಿಯಿಂ] ॥
ವಂದಿಸಿ ಶ್ರೀರಾಘವಗಿಂ ।
ತೆಂದನು ಮಾರುತಿ [ತಾನತಿ] ನಮ್ರತೆಯಿಂದಂ ॥ 203 ॥

॥ **ಕಾಂಭೋದಿ – ಝಂಪೆ** ॥

ಲಂಕಾಧಿಪತಿ ಬಂದ ಜೀಯಾ । ಕರೆತಂದೆ ಜೀಯಾ ॥ ಪ ॥

ಕಂಕಣಾದ್ಯಲಂಕಾರ ಅಕಳಂಕಬಿರುದಂಕನೆ ।
ಕಿಂಕರರತ್ನನೆ ಬಂದ ಜೀಯಾ ॥ 204 ॥

ಭಕ್ತಿನಿತ್ಯ ಶಕ್ತಿಕಾಂತಿ ಯುಕ್ತಿಭಕ್ತಿ ಮುಕ್ತಿದಾ ।
ಭಕ್ತರ ರತ್ನನೆ ಬಂದ ಜೀಯಾ ॥ 205 ॥

ತಂದೆ ರಕ್ಷಿಸೆಂದು ನಿನ್ನ ಮುಂದೆ ರಘುನಂದನ ।
ವಂದಿತರತ್ನನೆ ಬಂದ ಜೀಯಾ ॥ 206 ॥

॥ ಭಾಮಿನಿ ॥

ಮೂರು ತಿಂಗಳು ಮೂಲಕಾಸುರ ।
ಹೋರಿದನು ಗಡ ಕಾದಿ ರಣದಲಿ ।
ಗಾರುಗೆಟ್ಟೋಡಿದನು ಗಡ ನೀ ಸಲಹಬೇಕೆಂದು ॥
ಸಾರಿದನು ತತ್ಪದವ ಮುಂದೆ ವಿ ।
ಚಾರಿಸೆಂದು ವಿಭೀಷಣನ ರಘು ।
ವೀರನಿಗೆ ಕಾಣಿಸಲು ಶಿರವನು ಬಾಗಿ ನುತಿಸಿದನು ॥ 207 ॥

॥ ಕಲ್ಯಾಣಿ – ಆದಿ ॥

ನಮೋ ನಮೋ ಜಯ ದಾಶರಥೇ ।
ನಮೋ ದಾಶರಥೇ ॥ ಪ ॥

ಜನಕಜಾಪತೇ ಜಲರುಹಲೋಚನ ನಮೋ ।
ಸತತ ನಳಿನಜಾಂಡಧರ ನಮೋ ॥ 208 ॥

ಸುರವರಾರ್ಚಿತ ಪದಪಂಕಜಯುಗ ನಮೋ ।
ಜಗದ್ಧಿತ ಕೃತಾಘಹರನೆ ನಮೋ ॥ 209 ॥

ಮತ್ಸ್ಯ ಕೂರ್ಮಾಕೃತಿ ನರಹರಿ ವಾಮನ ನಮೋ ।
ಪರಶುಧರ ವಿಚಾರಪರನೆ ನಮೋ ॥ 210 ॥

ನಿತ್ಯತೃಪ್ತ ನಿರವಧಿ ನಿರ್ಲೇಪ ನಮೋ ।
ನಿಖಿಳ ನಿಗಮಗೋಚರನೆ ನಮೋ ॥ 211 ॥

ಕರುಣಾಳು ರಘುಪತೇ ಮಾಂ ಪಾಲಯ ನಮೋ ।
ಸನಾತನ ದಯಾಸಾಗರನೆ ನಮೋ ॥ 212 ॥

॥ ಬಿಲಹರಿ – ಅಷ್ಟ ॥

ಶರಣಾಗತನ ಶ್ರೀರಘುನಾಥ । ವಾಂಛಿತದಾತ ।
ಶರಣಾಗತನ ಶ್ರೀರಘುನಾಥ ॥ ಪ ॥

ಪಿಡಿದೆತ್ತಿ ನಳಿತೋಳ್ಗಳಿಂದಾಲಿಂಗಿಸಿ ಮೈ ।
ದಡವಿದ ತ್ರಿಭುವನವಿಖ್ಯಾತ ॥ 213 ॥

ಅತಿಮತ್ಸರಿಸಿ ಬಂದು ಕಾದಿಸೋಲಿಸಿ ನಿನ್ನ ।
ಸ್ಥಿತಿಗೆಡಿಸಿದ ರಾವಣಜಾತ ॥ 214 ॥

ಬಂದುದೆಲ್ಲವು ಬರಲದಕೇನು ನೋಡುವ ।
ಮುಂದಂಜಬೇಡ ನಂಬಿಕೊ ಮಾತ ॥ 215 ॥

॥ **ಭಾಮಿನಿ** ॥

ಮನದೊಳಂಜದಿರೆನುತ ಭಯವಿ ।
ತ್ತಿನಕುಲಶಿರೋಮಣಿಯು ಕುಳ್ಳಿರ ।
ಲನಿತರೊಳು ಸಾಕೇತನಗರದ ಬಾಹ್ಯದೇಶದೊಳು ॥
ಘನಪರಾಕ್ರಮದಿಂದ ತನ್ನಯ ।
ಜನಸಹಿತ ನಡೆತಂದು ಮೂಲಕ ।
ದನುಜ ಶಿಬಿರಂಗೈಯ್ಯೆ ಪೇಳ್ದರು ಬಂದು ಚಾರಕರು ॥ 216 ॥

॥ **ಕಲ್ಯಾಣಿ – ತ್ರಿವುಡೆ** ॥

ಬಿನ್ನಪವನು ಕೇಳಯ್ಯಾ । ರಾಜಪ್ರ ।
ಸನ್ನಮೂರೂತಿಯೆ ಜೀಯಾ ॥
ಮುನ್ನಿನ ದಶಕಂಠತನುಜಾತ ಬಂದನು ।
ತನ್ನ ಸೇನೆಯು ಸಹ ನಮ್ಮ ಪಟ್ಟಣಕಿಂದು ॥ ಪ ॥

ಚತುರಂಗಬಲದವಧಿ । ಕಾಣೆವು ಸೀತಾ ।
ಪತಿ ಕರುಣಾವನಧಿ ॥
ಕ್ಷಿತಿ ತಾಳಲಾರದೆ ಕಂಪಿಸುವಳು ಪದ ।
ಹತಿಗೆ ಮಹೀಧರೋಪಮ ಗಜಘಟೆಯಿದೆ ॥ 217 ॥

ಕರೆಯೋ ಕಾಳಗಕೆ ನಿಮ್ಮಾ । ಆಳ್ದನನೆಂದು ।
ದುರುಳ ಬಾಧಿಸುವ ನಮ್ಮಾ ॥
ಪಿರಿದಾಗಿಪರ ಮೊಗಳ್ಕೆಯು ಮಹಾಸ್ಥಾನದಿ ।
ಧರವೆಲ್ಲೆಂಬುದರಿಂದಂಜುವೆವು ವಿಸ್ತರಿಸಲು ॥ 218 ॥

ಎನಲು ಕೇಳುತ ರಾಘವ । ನೋಡಿದನು ತ ।
ನ್ನನುಜಾತ ವೀರರ ಮೊಗವ ॥

ಮನದೊಳುಬ್ಬುತ ಸಂಗ್ರಾಮಕೆ ಕಳುಹಿಸು ನಮ್ಮ ।
ನೆನುತಾಜ್ಞಾಪನೆಯ ಬೇಡಿದರು ಮುಗಿದುಕೈಯ ॥ 219 ॥

॥ ವಾರ್ಧಕ ॥

ದಿನಕರಕುಲೇಂದ್ರ ನೋಡಿದನು ನಸುನಗುತ ಶರ ।
ಣನಮುಖವನೆಲೆ ವಿಭೀಷಣ ತವಾರಾತಿನಿಜ ।
ತನುಕೊಬ್ಬಿನಿಂದಳಿಯಲೆಂದಿಲ್ಲಿ ತಾನಾಗಿ ನಮ್ಮರಸಿ ಬಂದನೆಂದು ॥
ಹನುಮಂತನಂ ಕಳುಹಿ ಸುಗ್ರೀವ ಮೊದಲಾದ ।
ವನಚರ ಚಮೂಪರಂ ಕರೆಸಿ ವೀಳಯಗೊಟ್ಟು ।
ವಿನಯದಿಂ ಬೀಳ್ಕೊಟ್ಟು ಭರತ ಶತ್ರುಘ್ನ ಸೌಮಿತ್ರಿ ಮುಂತಾದವರನು ॥ 220 ॥

॥ ಪಂತುವರಾಳಿ – ಮಟ್ಟೆ ॥

ಸಂಗರಕ್ಕೆ ಪೊರಟರೆಲ್ಲರು । ನಿಖಿಳ ಚಾತು ।
ರಂಗಸೇನೆ ಹನುಮ ಜಾಂಬ ।
ವಾಂಗದಾದಿ ಸುಭಟನಿವಹ ॥ ಪ ॥

ಚಾರುತರ ವರೂಥವೇರಿ । ವೀರ ಭರತ ಮಾಗಧೀಕು ।
ಮಾರ ತನ್ನ ತಮ್ಮ ಸಹಿತು । ದಾರಶೌರ್ಯದಿಂದ ಘನಗ ।
ಭೀರ ನಿಖಿಳ ವಾದ್ಯರಭಸದಿ । ಪ್ರತಿನಿನಾದ ।
ವೋರುಗುಡಿಸೆ ಭುವನಮಧ್ಯದಿ । ಧುರಕೆ ಕರೆವ ।
ಚೋರದೈತ್ಯನೆಲ್ಲಿ ಪೋದ । ತೋರುತೋರೆನುತ್ತ ಭರದಿ ॥ 221 ॥

ಪುಂಡತನದಿ ಪುರವ ಮುತ್ತಿ । ಕೊಂಡರೇನು ಶಿರವ ಮುರಿದು ।
ಚಂಡಾಡಿಸುವೆವು ದಿತಿಜ । ಹಿಂಡನೆನುತ ಮುನಿದುಕೋ ।
ದಂಡ ಝೇಂಕಾರ ಗೈದರು । ಬಾಣ ಸುರಗಿ ।
ಪಿಂಡಿವಾಳದಿಂದ ಹೊಯ್ದರು । ಕೀಶವಿತತಿ ।
ಗುಂಡುಕಲ್ಗಳಿಂದ ಕೊಲಲು । ಕಂಡು ಮೂಲಕಾಖ್ಯ ದನುಜ ॥ 222 ॥

ಫಡಫಡೆಲವೋ ಮಂಗಗಳಿರ । ಕಡೆಯ ಕಾಲ ಬಂತು ನಮ್ಮ ।
ಪಡೆಯ ಕೆಣಕಿ ಸಹಜವೆನುತ । ಲೊಡನೆ ಚಾಪಮಾರ್ಗಣವನು ।
ತುಡುಕಿ ಹುಂಕಾರಗೈದನು । ಸರಳಮಳೆಯ ।

ಕಡುವಿರೋಧದಿಂದ ಸುರಿದನು । ಕಂಗಳಲ್ಲಿ ।
ಕಿಡಿಯನುಗುಳುತೆಚ್ಚಿ ಬಲವ । ಕಡಿದು ಕೆಡಹುತಿರ್ದ ಭರದಿ ॥ 223 ॥

॥ **ವಾರ್ಧಕ** ॥

ಕೆಲರು ಕೈಕಾಲುಡಿದು ಹೊಡಕಿದರ್ ಮಿಡುಕಿದರ್ ।
ಕೆಲಬರಳಿದಲ್ಲಲ್ಲಿ ಮಲಗಿದರ್ ತೊಲಗಿದರ್ ।
ಕೆಲರು ಹೊಯ್ದಾಡಿ ಕೈಗುಂದಿದರ್ ಕಂದಿದರ್ ಕಣೆಯ ಕೋಲಾಹಲದೊಳು ॥
ಕೆಲರುರಿಪು ಮೂದಲೆಯ ಕೇಳಿದರ್ ತಾಳಿದರ್ ।
ಕೆಲರಸ್ತ್ರಹತಿಯ ಕಲಿಯೇರಿದರ್ ತೂರಿದರ್ ।
ಕೆಲರು ಗಿರಿತರುಶಿಲೆಯ ಹೊಂಚಿದರ್ ಮುಂಚಿದರ್ ಸಕಲಸನ್ನಾಹದಿಂದ॥224॥

॥ **ಶಂಕರಾಭರಣ – ಮಟ್ಟೆ** ॥

ದನುಜನುರವಣೆಯನು ಕಂಡು । ಕನಲಿ ಭರತನು ।
ಧನುವ ತುಡುಕಿ ಸರಳಸ್ಸೈ । ವನಿಯಗರೆದನು ॥
ಬಿನುಗು ಖಳನೆ ಕೇಳು ನಮ್ಮ । ವನಚರೌಘವ ।
ಮುನಿದು ಸವರಿ ತೋರ್ಪೆ ಸಹಸಿ । ಎನುತ ಶೌರ್ಯವ ॥ 225 ॥

ಕೋಡಗವನು ಕೊಲಲು ನಿನ್ನ । ನೋಡಿ ಜಯಸಿರಿ ।
ಹೇಡಿಯೆಂದು ಮೆಚ್ಚಳೆಲವೋ । ಮೂಢ ಕೇಳ್ದರೀ ॥
ಪೂಡಿದಂಬ ಕಡಿದು ಕೈ । ಮಾಡು ರಣದಲಿ ।
ಖೋಡಿ ತಿರುಗು ತಿರುಗೆನುತ್ತ । ಕೂಡೆ ಭರದಲಿ ॥ 226 ॥

ಕೇಳಿ ಭರತನೆಂದ ನುಡಿಯ । ಮೂಲಕಾಖ್ಯನು ।
ಕಾಲರುದ್ರನಂತೆ ಕಿನಿಸುದಾಳಿ ನಿಂದನು ॥
ಆಳುಗೊಲೆಯ ಬಿಡುಬಿಡೆಂದು । ಪೇಳುವೆಯ ಭಲಾ ।
ತೋಳಬಲುಹ ತೋರ್ಪೆ ನಿನ್ನ । ಮೇಲೆ ನೋಡೆಲಾ ॥ 227 ॥

ಯುದ್ಧತೊಡಗಿತೀರ್ವರಿಂಗೆ । ಬದ್ಧರೋಷದಿ ।
ಯುದ್ಧವಂಬು ತರಿದು ಕುಣಪ ಬಿದ್ದವಗಲದಿ ॥
ತಿದ್ದಿತೆರಡು ಮಾಸ ಸುಪ್ರ । ಸಿದ್ಧವೀರರು ।
ಇದ್ದಸೇನೆಯರುಣಜಲದೊ । ಳೆದ್ದು ತೀರ್ದರು ॥ 228 ॥

ಹರಿಗೆ ಖಡ್ಗ ಮುಸುಲಶಕ್ತಿ । ಪರಶು ತೋಮರ ।
ಪರಿಘ ಚಕ್ರ ಪಿಂಡಿವಾಳ । ಸುರಗಿ ಮುದ್ಗರ ॥
ಶರನವಾದಿ ಶಸ್ತ್ರದಿಂದ । ಲಿರಿವುತೀರ್ದರು ।
ಬೆರಗುವಟ್ಟು ನಭದಿ ನೋಡು । ತಿರಲು ವಿಬುಧರು ॥ 229 ॥

॥ **ವಾರ್ಧಕ** ॥

ಅಮರಪತಿ ಜಂಭಾಸುರರ್ಗೆ ನೂರ್ಮಡಿಯೆನಲ್ ।
ಸಮರ ವೆಗ್ಗಳಿಸೆ ಖತಿಗೊಂಡು ಮೂಲಕ ಪರಾ ।
ಕ್ರಮದಿಂದ ಅರ್ಧಚಂದ್ರಾಕೃತಿಯ ಬಾಣಮಂ ತೆಗೆದು ಕಿವಿವರೆಗುಗಿದನು ॥
ಅಮಮ ಘೋರೆಂದುರಿ ಛಡಾಳಿಸಲ್ ತೆಗೆದೆಚ್ಚ ।
ಸುಮತಿ ಕೈಕಾತ್ಮಜನ ಪೇರುರಕೆ ತಾಗಿದುದು ।
ನಿಮಿಷಾರ್ಧದೊಳ್ ಬಟ್ಟೆದೆಗೆಯಲ್ಕೆ ಬೆನ್ನೊಳಗೆ ಧರಣಿಗಂ ಪಸೆಗೈದನು ॥230 ॥

॥ **ಭಾಮಿನಿ** ॥

ತಿರುಗಿಸಲು ಸಾರಥಿ ವರೂಥವ ।
ತರುಚರರು ಘೋಯೆಂದು ಗಿರಿಕಲು ।
ಮರನ ಕೈದುಗಳಿಂದ ತರುಬಿದರಮರವೈರಿಯನು ॥
ದುರುಳ ಖಳ ಲೆಕ್ಕಿಸದೆ ಹೊಯ್ದು ।
ಬ್ಬರಿಸಿದೌಕುತ ಭಟನಿಕರ ನಡೆ ।
ತರಲು ರೋಷಾವೇಶದಲಿ ಶತ್ರುಘ್ನನಿದಿರಾದ ॥ 231 ॥

॥ **ಭೈರವಿ – ಏಕ** ॥

ದನುಜಾಧಮ ನಿಲ್ಲೆಲವೋ । ತವ ।
ತನು ನಿಜವೆಂದಬ್ಬರವೋ ॥
ನಿನಗಾನಿಹೆನಂತಕನು । ನೋ ।
ಡೆನುತ ಶರವ ಮುಸುಕಿದನು ॥ 232 ॥

ನರಗುರಿ ನಿನ್ನ ಪಾಡೇನು । ಪುರ ।
ಹರ ಹರಿ ದಿಕ್ಪಾಲರನು ।
ಧುರದೊಳಗಣುವಿಗೆಬಗೆಯೆ । ಎಂದು ।
ಸರಳನು ಶ್ರುತಿವರೆಗೊಗೆಯೆ ॥ 233 ॥

ಕೆಚ್ಚೆದೆಯೊಳು ಮೂಲಕನು । ತೆಗೆ ।
ದೆಚ್ಚಂಬನು ಶತ್ರುಹನು ।
ಕೊಚ್ಚಿದನದ ಮಧ್ಯದಲಿ । ಖಳ ।
ಚುಚ್ಚಿದ ಕವಲಂಬಿನಲಿ ॥ 234 ॥

॥ **ಭಾಮಿನಿ** ॥

ತರಹರಿಸಿ ಕೊಂಡೆದ್ದು ದೈತ್ಯನ ।
ಕರದ ಚಾಪವ ಮುರಿಯೆ ಶತ್ರುಹ ।
ಧಿರುರೆ ಸಾಹಸಿಯೆನುತ ತೆಗೆದಿಡೆ ದಿವ್ಯಶಕ್ತಿಯನು ॥
ಉರದಿ ತಟ್ಟುಗಿಯಲ್ಕೆ ಮೈಮರೆ ।
ದೊರಗಿದನು ಕಣುದಿರುಗಿ ಭರತನ ।
ಪರಿಯೊಳಾಕ್ಷಣ ಮುಸುಕಿದರು ಮೇಲ್ವಾಯ್ದು ಕಪಿವರರು ॥ 235 ॥

॥ **ವಾರ್ಧಕ** ॥

ಇನಜಾತ ಗಜ ಗವಯ ಕುಮುದ ಕುಮುದಾಕ್ಷ ನಳ ।
ಪನಸ ದಧಿಮುಖ ಶರಭ ಶತಬಲಿ ಸುಷೇಣ ಕಲಿ ।
ಹನುಮ ನೀಲಾಂಗದ ವಿರಂಚಿಸುತ ಮೊದಲಾದ ವೀರವಾನರಕಪಿಗಳ ॥
ಅನುವರದೊಳೆಲ್ಲರ ಪಲಾಯನಂ ಗೈದು ನಿಜ ।
ಧನುವನೊದರಿಸುತ ಪಂಚಾಸ್ಯಗರ್ಜನೆಯಿಂದ ।
ದನುಜ ನಡೆತರಲು ಸೌಮಿತ್ರಿ ಕೋದಂಡವಂ ಝೇಗೈದು ಮಾರಾಂತನು ॥ 236 ॥

॥ **ನಾದನಾಮಕ್ರಿಯೆ – ಅಷ್ಟ** ॥

ಭಳಿರೆ ದಾನವ ಪರಾಕ್ರಮಿ ಕಣಾ । ಮುಂದೆ ।
ಮಲೆತುಹೋಗದಿರೆಂದು ಲಕ್ಷ್ಮಣ ॥
ಕಲಿತನದಿಂ ಕಣೆಗರೆವುತ । ಪರ ।
ಬಲವನು ಪೊಕ್ಕ ಗೋಣರಿವುತ ॥ 237 ॥

ವೀರಾಧಿವೀರ ಸೌಮಿತ್ರಿಗೆ । ಇದಿ ।
ರಾರು ಮೂಜಗದೊಳು ಧಾತ್ರಿಗೆ ॥
ವಾರಣ ತುರಗಪದಾತಿಯ । ಅಸು ।
ಜಾರಿ ಬಿದ್ದುದು ತದ್ವಿಘಾತಿಯ ॥ 238 ॥

ಕಾಣುತ್ತ ಖತಿಯಿಂದ ಮೂಲಕ । ಸುಪ್ರ ।
ವೀಣ ಸಂಗ್ರಾಮದೊಳ್ ಬಾಲಕ ॥
ಊಣಯವಿಲ್ಲ ಮೆಚ್ಚಿದೆನೆಂದು । ತನ್ನ ।
ಬಾಣವ ತೆಗೆದು ಮುಚ್ಚಿದನಂದು ॥ 239 ॥

ವೈರಿಮಾರ್ಗಣಗಳ ಮುರಿದನು । ಕಾಲ ।
ಭೈರವನಂತೆ ಬೊಬ್ಬಿರಿದನು ॥
ಮೈರಕ್ತಧಾರೆಯನಿಳಿಸಿದ । [ಕಾದಿ] ।
ಯಾ ರಘುಜರ ತಳ್ಳಿಯನಿಳಿಸಿದ ॥ 240 ॥

ಸುರವಿರೋಧಿಯ ತೇರ ಮುರಿದನು । ಸೂತ ।
ತುರಗಾವಳಿಯನೆಚ್ಚುತರಿದನು ॥
ಉರುಮಹಾಸ್ತ್ರದಲಿ ಕೀಲಿಸಿದನು । ಖಳ ।
ನೊರಗಿ ಧರೆಗೆ ರಕ್ತ ಕಾರ್ದನು ॥ 241 ॥

॥ **ಭಾಮಿನಿ** ॥

ನೊರೆರಕುತವನು ಕಾರುತಲೆ ಬಿ ।
ದ್ದರೆಘಳಿಗೆ ಪರಿಯಂತದಲಿ ಮೈ ।
ಮರೆದು ಬಳಿಕೆಚ್ಚರ್ತು ವಿಲಯದ ರುದ್ರನಂದದಲಿ ॥
ಘುಡಿಘುಡಿಸಿ ಹಲು ಮೊರೆಯುತೆದ್ದನು ।
ಕರದ ಚಾಪವ ನೇವರಿಸಿ ಬಲು ।
ಸರಳ ಕೆನ್ನೆಗೆ ಸೇರಿ ತೆಗೆದೊಡನೆಚ್ಚನಮರಾರಿ ॥ 242 ॥

॥ **ವಾರ್ಧಕ** ॥

ತುಂಗಬಲ ಲಕ್ಷ್ಮಣಂ ಪೌರುಷದೊಳಸಮ ಸಮ ।
ರಾಂಗಣದೊಳಪರಿಮಿತ ದಾನವವರೂಥಿನಿಯ ।
ಭಂಗಿಸಿ ಸಮಗ್ರಮಂತ್ರಾಸ್ತ್ರದಿಂದೆಚ್ಚಾಡಿ ರಾವಣಿಯ ಸರಳಮೊನೆಗೆ ॥
ಅಂಗವಿತ್ತಾಹವದ ತೊಡಕು ಬೇಡೆಂದು ಶಯ ।
ನಂ ಗೈಯೆ ದೈತ್ಯನಾಟೋಪ ಬಿರಿಸಾಗೆ ರಘು ।
ಜಂಗರುಹಬೇಕೆಂದು ಚಾರಕರ್ ಬಂದು ಬಿನ್ನೈಸಿದರ್ ತ್ವರಿತದಿಂದ ॥ 243 ॥

॥ **ಘಂಟಾರವ – ಆದಿ** ॥

ಜೀಯ ಲಾಲಿಸೆಮ್ಮ ಮಾತನು । ಮೂಲಕದೈತ್ಯ ।
ನೋಯಿಸಿದನೆಲ್ಲವರನು ॥
ಬಾಯಬೊಬ್ಬೆಯಿಂದ ಕಪಿಗಳ್ ।
ಗಾಯವಡೆದು ನಿಲ್ಲದೆ ಪ ।
ಲಾಯನಂ ಗೈದರು ಕೆಲರ ।
ನ್ಯಾಯದಿಂದ ಕೊಂದ ದೊರೆಯೆ ॥ 244 ॥

ಭರತನಾದಿಯಲ್ಲಿ ಬಿದ್ದನು । ನೀಲಾಂಗದಾದಿ ।
ತರುಚರರನೆಲ್ಲಗೆದ್ದನು ॥
ಭರಧಿ ಶಕ್ತಿಯಿಂದ ಮೈಯ್ಯ ।
ಮರೆಸಿದನು ಶತ್ರುಹನ ।
ಧುರದೊಳು ಸೌಮಿತ್ರಿಯ ಪೇ ।
ರುರವನೆಚ್ಚು ನೋಯಿಸಿದನು ॥ 245 ॥

ಅರಿಯ ಸೇನೆ ಸತ್ತು ಸವೆಯದು । ಮಹತ್ತದೇನೋ ।
ಹರನೆ ಬಲ್ಲ ನಮಗೆ ತಿಳಿಯದು ॥
ಮರಳಿ ಮಾತಿನ್ನೇನು ರಾತ್ರಿ ।
ಚರನ ಮುಂದೆ ನಿಲ್ವರಿಲ್ಲ ।
ದೊರೆಯೆ ನೀ ವಿಚಾರಿಸಿನ್ನು ।
ಬರಿದೆ ನಮ್ಮಿಂದಪ್ಪುದೇನು ॥ 246 ॥

॥ **ಕಂದಪದ್ಯ** ॥

ದೂತರ ನುಡಿ ಕೇಳ್ದಾ ರಘು ।
ಜಾತಂ ಮನದೊಳಗಚ್ಚರಿಯಂ ತಾ ಪಡುತಂ ॥
ಮಾತಾಡದೆ ಮೌನದೊಳನು ।
ಜಾತಾದ್ಯರ ಪರಿಭವಕಂ ಬಲು ಚಿಂತಿಸಿದಂ ॥ 247 ॥

॥ ಭೈರವಿ – ಆದಿ ॥

ಈ ಮಹಾದ್ಭುತವೇನು ತಿಳಿಯದು ।
ಯಾಮಿನೀಚರಂಗೆ ।
ಪ್ರೇಮದಿಂದೊಡಬಟ್ಟಳೇ ಜಯ ।
ಭಾಮಿನಿಯು ಮಹದೇವ ಬಲ್ಲನು ॥ ಪ ॥

ಕಾಲವಶದಿಂದಾದ ಕೆಲಸವೊ ।
ಕಾಳಗದಲಿ ತಮ್ಮ ಬಾಲನೆ ।
ಸೋಲುವರೆ ಶತ್ರುಘ್ನ ಭರತರು ।
ನೀಲಕಂಠನು ನಮ್ಮ ಸರ್ವರ ।
ಮೇಲೆ ಮುನಿದನೊ ನಮ್ಮ ವಂಶಕೆ ।
ದಾಳಿವರಿದಿಹ ಮಾರಿಯೋಡಿಸು ।
ಮೂಲಕಾಸುರನೊಂದು ರೂಪದಿ ।
ಮೂಲವಾದನೆ ಮತ್ಕುಲಕೆ ಶಿವ ॥ 248 ॥

ಹಿಂದೆ ದಶಗಳ ಮುಖ್ಯ ದೈತ್ಯರ ।
ವೃಂದಮಧ್ಯದೊಳಿನಿತು ರಣದಲಿ ।
ನಿಂದು ಕಾದಿದರಿಲ್ಲ ಪುನರಪಿ ।
ಬಂದ ಬವಣೆಯ ಹೊರತು ನಾವಿ ।
ನ್ನೆಂದಡೆನಿತಿದು ದೈವತಂತ್ರದೊ ।
ಳೊಂದಿದಪಜಯಕಳಲಿ ಫಲವೇ ।
ನೆಂದು ರಣಕನುವಾಗುತಿರಲಿಂ ।
ತೆಂದ ಕುಶ ರಘುಸಾರ್ವಭೌಮಗೆ ॥ 249 ॥

॥ ಗೌಳಿಪಂತು – ಮಟ್ಟೆ ॥

ಏನು ಮನದ ಚಿಂತೆ ಜೀಯ । ಆನೆಯೊಂದು ಸೊಕ್ಕಿ ಪಂ ।
ಚಾನನಂಗೆ ಇದಿರೆ ಬಿಡುಬಿ । ಡೇನು ಮನದ ಚಿಂತೆ ಜೀಯ ॥ ಪ ॥

ನೀನು ಪೊಗಳಲೇತಕಿದಕೆ । ದಾನವನ ಸಮಗ್ರಬಲವ ।
ಹಾನಿಗೈದು ತುಡುಕಿ ವಿಜಯ । ಮಾನಿನಿಯನೆಳೆದುತಹೆನು ॥ 250 ॥

ಗಬ್ಬಿತನದಿ ನಮ್ಮ ಕೆಣಕಿ । ಕೊಬ್ಬಿದಸುರವಾಹಿನಿಯನು ।
ಒಬ್ಬರುಳಿಯದಂತೆ ತರಿದು । ಹಬ್ಬಗೈವೆ ಭೂತತತಿಗೆ ॥ 251 ॥

ಶೂಲಿಯಡ್ಡ [ಬಂದು] ನಿಲಲಿ । ಕಾಲ ತಡೆಯಲೆನ್ನ ರಣದಿ ।
ಮೂಲಾಕಾಖ್ಯ ದನುಜನೆದೆಯ । ಸೀಳಿ ಬಹೆನು ಬೆಸಸು ಬೇಗ ॥ 252 ॥

॥ **ಕೇದಾರಗೌಳ – ಅಷ್ಟ** ॥

ಮಗನದಟನು ನೋಡಿ ರಘುಪತಿ ನೆಮ್ಮಿದ ।
ದುಗುಡವ ಕಳೆದಾಕ್ಷಣ ।
ತೆಗದು ತಕ್ಕೈಸಿ ಮುಂಡಾಡಿ ಮುದ್ದಿಸುತೆಂದ ।
ನಗುತ ನೋಡುತ ಕುಶನ ॥ 253 ॥

ಪುತ್ರ ಕೇಳೆನ್ನ ಮೋಹದ ತಮ್ಮನಾದ ಸೌ ।
ಮಿತ್ರಿ ಸಾಹಸಶೂನ್ಯನೆ ॥
ಶತ್ರುಘ್ನ ಭರತ ಸುಗ್ರೀವಾದಿ ಸುಭಟರ್ಗೆ ।
ರಾತ್ರಿಚರನು ಸೋಲ್ದನೆ ॥ 254 ॥

ಹಸುಮಗನವನೊಲೆಷ್ಟಾದರೂ ನೀನು ನೋ ।
ಡಸುರ ಬಲ್ಲಿದನವನು ॥
ಅಸಮಸಾಹಸಿಯೆಂದು ತೋರ್ಪುದೆನ್ನನು ಬಿಟ್ಟು ।
ಬೆಸಗೊಳ್ಳಬೇಡ ನೀನು ॥ 255 ॥

ಎನ್ನ ಸಂಗಡಿಸಿ ಬೇಕಾದರೆ ಬಾ ಮುಂದೆ ।
ನಿನ್ನ ಕಳುಹಲಾರೆನು ॥
ಮುನ್ನಿನ ಪರಿಭವಕಳಲಿ ಸೈರಿಸಲಾರೆ ।
ತನ್ನೊಳೆಂದನುವಾದನು ॥ 256 ॥

॥ **ಭೈರವಿ – ತ್ರಿವುಡೆ** ॥

ವೀರ ರಘುಪತಿ ಸಂಗರಕೆ ಸುಕು । ಮಾರ ಸಹಿತನುವಾಗಲಾಕ್ಷಣ ।
ತೇರು ತೇರ್ಕೈಸಿದವಪರಿಮಿತ । ವಾರಣಾಶ್ವ ಪದಾತಿಚಯ ರಣ ।
ಧೀರಸಾಹಸಿ ದನುಜಗಜಕಂ । ಠೀರವನ ಕೂಡಿನ್ನು ಕದನ ವಿ ।
ಚಾರ ಬೇಡೆಂದೊದರುತೀರ್ದವು । ಚಾರುತರ ರವದಿಂದ ಕಹಳೆಯು ॥
ಬಂದನಂದು । ಸಮರಕೆ । ಬಂದನೆಂದು ॥ 257 ॥

ಎತ್ತಿ ಪಿಡಿದಿಹ ಕನಕದಂಡಿನ । ಸತ್ತಿಗೆಯ ಸಾಲುಗಳ ದಶದಿಗು ।
ಭಿತ್ತಿ ಬಿರಿವಂದದಲಿ ರವ ಮೊಳ । ಗುತ್ತಿರಲು ವಾದ್ಯಗಳ ಗಡಬಡೆ ।
ಯೊತ್ತಿನಲಿ ಚಮು ಝುಳಪಿಸುತ ಬ । ಲ್ದತ್ತಿಯನು ತೊಲತೊಲಗೆನುತ ಕಾ ।
ರ್ಗತ್ತಲೆಯ ತೆರದಿಂದ ದಾನವ । ಮೊತ್ತವನು ಮುಸುಕಿದರು ವಹಿಲದಿ ॥
ಬಂದನಂದು । ಸಮರಕೆ । ಬಂದನೆಂದು ॥ 258 ॥

ಭಲ್ಲುಕವ್ರಜ ನಾಲ್ದೆಸೆಯೊಳಾರೀ । ಎಲ್ಲಿ ತೋರಾಯೆನುತ ಗಿರಿತರು ।
ಕಲ್ಲುಗುಂಡುಗಳಿಂದ ದಿತಿಜರ । ನೆಲ್ಲರನು ಹೊಯ್ದಪ್ಪಳಿಸಿ ನಿಮ ।
ಗಿಲ್ಲಿ ಜಯಸಿರಿಯೊಲುಮೆಯಾಗುವ । ದೆಲ್ಲಿಯದು ನೋಡುವೆವೆನುತ ರಣ ।
ಮಲ್ಲರನು ಮೂದಲಿಸಿ ಹೊಕ್ಕರು । ತಲ್ಲಣಿಸಿತಸುರರ ಚತುರ್ಬಲ ॥
ಬಂದನಂದು । ಸಮರಕೆ । ಬಂದನೆಂದು ॥ 259 ॥

॥ **ವಾರ್ಧಕ** ॥

ಕ್ಷಣದೊಳದ್ಭುತವಾಯ್ತು ರಣರಂಗ ಬಹುರಂಗ ।
ಕಣದೊಳಗಲಕೆ ಪೆಣನಮಯವಾಯ್ತು ಭಯವಾಯ್ತು ।
ಕುಣಿದವು ಕಬಂಧ ನಲಿದಾಡುತ್ತ ಪಾಡುತ್ತ ಮರುಳಗಣ ಮೆಲುತಿರ್ದವು ॥
ಎಣಿಸದೆ ಶರಾಸನವ ಝೇಂಕರಿಸಿ ಹೂಂಕರಿಸಿ ।
ಸೆಣಸಲೆಂದಮರಾರಿ ನೋಡಿದಂ ಪೂಡಿದಂ ।
ಕಣೆಯ ಕಾರ್ಮಳೆಯಂತೆ ಸುರಿಸಿದಂ ಹರಿಸಿದಂ ರಥವ ರಘುನಾಥನೆಡೆಗೆ॥260॥

॥ **ಸೌರಾಷ್ಟ್ರ – ಅಷ್ಟ** ॥

ಘೋರ ರಕ್ಕಸನೆ ಮುಂದೆ ।
ಸಾರುವುದೆಲ್ಲಿಗೆನ್ನುತ ।
ದಾರಿಯಡ್ಡಗಟ್ಟಿ ನಿಂದ ।
ವೀರಮಾರುತಿ ॥ 261 ॥

ಕಲಹವೇಕೆನ್ನೋಳು ಕಪಿಯೆ ।
ತೊಲಗು ಪಂಥದಿಂದ ವ್ಯರ್ಥ ।
ಕೊಲಿಸಿಕೊಂಬೆಯೆನುತ ಶರವ ।
ಮುಳಿದು ಮುಚ್ಚಿದ ॥ 262 ॥

ಮುಟ್ಟದಾಯ್ತಂಬಿವನ ಮೆಯ್ಯ ।
ಘಟ್ಟಿ ದೇಹವೆನುತ ಧನುವ ।
ಬಿಟ್ಟು ಮಲ್ಲಯುದ್ಧ ಗೈಯ್ಯ ।
ಕೊಟ್ಟ ದೈತ್ಯನು ॥ 263 ॥

॥ **ವಾರ್ಧಕ** ॥

ಕೂಡಿದರ್ ಭರದಿ ಕೇಶಾಕೇಶಿಯಿಂದ ಹೊ ।
ಯ್ದಾಡಿದರ್ ಬೆದರದುರುಮದಗೊಬ್ಬಿನಿಂದ ಮೈ ।
ಬಾಡಿದರ್ ಪಾಣಿಪದಹತಿಯ ನೋವಿಂದ ಮಸಿಗಳದೊಲದು ಬಿದ್ದೇಳುತ ॥
ಮಾಡಿದರ್ ಮಲ್ಲಯುದ್ಧವ ಚತುರಗತಿಯಿಂದ ।
ನೋಡಿದರ್ ಕೆಲಬಲದ ಸೇನೆ ಭಯದಿಂದ ಮುರಿ ।
ದೋಡಿದರ್ ನಿಲಲಾರದಿತ್ತ ವೈಮಾನಿಕ ಪ್ರತತಿ ಬೆರಗಿಡುತಿರ್ದರು ॥264॥

॥ **ಭಾಮಿನಿ** ॥

ಈ ತೆರದಿ ಹೊಯ್ದಾಡಿ ಹನುಮನು ।
ಸೋತು ಮೂರ್ಛಿಸಿ ಬೀಳಲಮರಾ ।
ರಾತಿ ಗರ್ಜಿಸುತ್ತೈದಿದನು ರಘುರಾಯನಿದಿರಿಂಗೆ ॥
ಭೂತಳಾಧಿಪ ರಾಮನುರು ಶೌ ।
ರ್ಯಾತಿಶಯದಿಂದೆದ್ದು ದನುಜನ ।
ಚಾತುರಂಗವ ಮುರಿದು ಕೆಡಹುತಲೆಂದ ಮೂದಲಿಸಿ ॥ 265 ॥

॥ **ಶಂಕರಾಭರಣ – ಮಟ್ಟೆ** ॥

ಎಲವೊ ಮಂದಮತಿಯೆ ಕೇಳು । ಹಳಚಿ ನಿನ್ನ ತಂದೆ ಮೊದಲು ।
ತಲೆಯ ತೆತ್ತ ನಮ್ಮ ಶರಕೆ । ತಿಳಿಯದಾದೆಯಾ ॥
ಸುಲಭವೇ ಮದೀಯ ಕೋಟಿ । ಖಳರಿಗೆಲ್ಲ ಮೃತ್ಯುವಾನು ।
ಛಲದೊಳಿದಿರು ನಿಂದೆಯೆನುತ । ಬಲುಹಿಂದೆಚ್ಚನು ॥ 266 ॥

ಬಂದ ಶರಕೆ ಬೆಚ್ಚದಸುರ । ನೆಂದ ರಾಮ ಪೂರ್ವದಲ್ಲಿ ।
ಕೊಂದೆ ಮತ್ಪಿತಾದಿ ಖಳರ । ನೆಂದು ಗರ್ವಿಸಿ ॥
ಮುಂದುವರಿಯ ಬೇಡ ಮುನ್ನಿ । ನಂದವಲ್ಲ ನೋಡು ಪಗೆಯ ।
ನಿಂದು ತೀರ್ಚಿ ಪೋಗಲೆನುತ । ಬಂದೆ ಭಾವಿಸೈ ॥ 267 ॥

ಬಾಯಮಾತಿನಿಂದಲೇನು । ಸಾಯಕದಲಿ ತೋರ್ಪನೆನುತ ।
ರಾಯರಘುಜನಂಗದಲ್ಲಿ । ಗಾಯಗೈದನು ॥
ಆಯತಾಕ್ಷ ರೋಷದಿಂದ । ನೋಯಿಸಿದ ತುರಂಗ ಸಾರ ।
ಥೀಯನೊಮ್ಮೆ ದನುಜನದಟು । ಬೀಯವಾದುದು ॥ 268 ॥

॥ **ಭಾಮಿನಿ** ॥

ಹಲವು ಪರಿಯಲಿ ಕಾದಿ ಮೂರ್ಛೆಯ ।
ತಳೆದು ನಿಮಿಷದೊಳೆದ್ದು ರಘುಪತಿ ।
ಯೊಲೆದು ಶಿರವನು ಸುಮನಸಾರಿಯ ಸಾಹಸಕೆ ಮೆಚ್ಚಿ ॥
ಸಲುಗೆವಂತ ವಿಭೀಷಣನ ಬೆಸ ।
ಗೊಳಲು ಮರ್ಮವು ತಿಳಿಯದೆಂದನು ।
ಗೆಲುವುದೆಂತಿರಲಾಕ್ಷಣದಿ ನುಡಿದುದು ವಿಯದ್ವಾಣಿ ॥ 269 ॥

॥ **ವಾರ್ಧಕ** ॥

ಇನಕುಲಾಂಬುಧಿಸೋಮ ಕೇಳ್ ದೈತ್ಯನಂ ವಧಿಸೆ ।
ಜನಕಜನನಿಯರ ಬೀಜೋತ್ಪತ್ತಿಯಿಲ್ಲದಾ ।
ವನಿತೆಯರ ಗರ್ಭದೊಳ್ ಪೊರೆಯದ ಕುಮಾರ ಬೇಕೆಂದು ಮನದೊಳು ಬಯಸದೆ ॥
ಜನಿಸಿದವನಿಂದಲ್ಲದಿನ್ನು ಕೂಡದು ಖಳನ ।
ತನುವಿಗಂತಕನು ಕುಶನವನ ಕೊಲ್ಲುವನೆಂದು ।
ನಿನದವಡಗಿತು ಕೇಳ್ದು ಮಗನ ಮೊಗನೋಡಲ್ಕೆ ಸಂಗ್ರಾಮಕನುವಾದನು ॥ 270 ॥

॥ **ಶಂಕರಾಭರಣ – ಮಟ್ಟೆ** ॥

ತುಂಗಬಲ ಕುಶಾಂಕ ನಿಲಲು । ಸಂಗರಕೆ ಖಳ ।
ಹಿಂಗಿದನು ಸಮಗ್ರ ಚಾತು । ರಂಗಯುತಬಲ ॥
ಅಂಗದೊಳಗೆ ನಾಂಟಿ ಸರಳು । ಭಂಗವಟ್ಟುದು ।
ಕಂಗೆಡಿಸುತ ಮೂಲಕಾಸು । ರಂಗೆ ಕವಿದುದು ॥ 271 ॥

ಕುಶನ ಶರದ ಝಳವ ಕಾಣು । ತಸಮ ದೈತ್ಯನು ।
ಬಸುರೊಳುರಿದು ತೊಡಚಿ ಮಂಟ । ವಿಶಿಖಗರೆದನು ॥
ಅಸುರನಂಬ ನಡುವೆ ತುಂ । ಡಿಸುತ ಕುವರನು ।
ಹೊಸತಿದೆಂಬ ತೆರದಿ ಕ್ಷೋಭ । ವೆಸಗುತಿರ್ದನು ॥ 272 ॥

ಸುರಪ ಜಂಭ ಹರಿಹಿರಣ್ಯ । ಕರನು ಮಿಗಿಸಿತು ।
ಧುರದ ಕೈಮೆ ಸಕಲ ಮಂತ್ರ । ಶರವು ತೀರಿತು ॥
ಭರದೊಳವನ ಸೂತ ರಥದ । ತುರಗತತಿಯನು ।
ಮುರಿದು ದಿವ್ಯಮಾರ್ಗಣವ ಬೊ । ಬ್ಬಿರಿದು ತೊಟ್ಟನು ॥ 273 ॥

॥ ಭಾಮಿನಿ ॥

ಬಿಡಲು ಕುಶನು ಮಹಾಸ್ತ್ರವನು ಪೇ ।
ರೊಡಲ ಖಳ ಮೂಲಕನ ಶಿರವನು ।
ಕಡಿದು ಹಾಯ್ದುದು ಮುಂಡದೊಪ್ಪನೆ ಕೆಡದುದವನಿಯಲಿ ॥
ನುಡಿದುದಸುರನ ಪಡೆಯು ಬಯಲಾ ।
ಯ್ತೊಡನೆ ಮುನ್ನಿನ ವರವು ದಿವಿಜರ ।
ಗಡಣ ಭಾಪೆಂದುಲಿದು ಸುರಿದರು ಕುಸುಮವೃಷ್ಟಿಗಳ ॥ 274 ॥

॥ ವಾರ್ಧಕ ॥

ದಾನವನ ಸಂಹರಿಸಿ ಬಂದಡಿಗೆ ಪೊಡಮಟ್ಟ ।
ಸೂನುವನು ತೋಷದಿಂ ಮನ್ನಿಸಿ ರಘೂದ್ವಹಂ ।
ಭಾನುನಂದನ ಮುಖ್ಯ ಕಪಿಗಳಿರವಂ ಕಂಡು ಮನದಿ ಸೈರಿಸಲಾರದೆ ॥
ಸೇನಾಸಮೂಹದೊಳ್ ಬಿಗಿದ ಹುಬ್ಬಿನ ಬಾಡಿ ।
ದಾನನದ ಭಿನ್ನವಾದವಯವದ ಭರತ ಭರ ।
ತಾನುಜ ಸುಮಿತ್ರಾತ್ಮಜರು ಪವಡಿಸಿರಲು ಹಾಹಾಯೆಂದಳಲ್ದನಂದು ॥ 275 ॥

॥ ಸಾವೇರಿ – ಆದಿ ॥

ರಿಪುಕುಲ ಕಾಲಭೈರವ । ಗರ್ಜಿತ ಮೃಗಾ ।
ಧಿಪನೆ ಮದೀಯ ವೈಭವ ॥
ನಿಪುಣ ನಿರ್ಭೀತ ಲಕ್ಷ್ಮಣ । ಕಲಿಸುಪ್ರವೀಣ ।
ತಪನಕುಲೋದ್ಧರಣ ॥ 276 ॥

ಅಣ್ಣ ನಾನೆಂದು ತೋರದೆ । ಅಯ್ಯಯ್ಯೋ ತಮ್ಮ ।
ಕಣ್ಣೆತ್ತಿ ನೋಡಬಾರದೆ ॥
ಪುಣ್ಯವಿಹೀನನಾದೆನೆ । ಇಂದಿಗೆ ಆಮು ।
ಕ್ಕಣ್ಣೇಶ್ವರನು ಮುನಿದನೆ ॥ 277 ॥

ಎನ್ನಾಜ್ಞೆಯನು ಮೀರದೆ । ಸೇವಿಸಿದೆಯ ।
ಭಿನ್ನಭಾವನೆ ಇಲ್ಲದೆ ॥
ಇನ್ನಾರೇನೆಂಬ ಬುದ್ಧಿಯ । ಯೋಚನೆಗೈದು ।
ಚೆನ್ನಾಗಿ ಮಲಗಿದೆಯ ॥ 278 ॥

ನಿರಶನದಿಂದ ಬಳಲಿದೆ । ನಿದ್ರೆಯ ಬಿಟ್ಟೆ ।
ನಿರುತ ಬೆಂಬಲವಾದೆ ॥
ಪರಿಪರಿಯಿಂದಲೆನ್ನನು । ಆರೈದೆ ತಮ್ಮ ।
ಮರೆಯಲೆಂತೈ ನಿನ್ನನು ॥ 279 ॥

ಪರರ ದ್ರವ್ಯವ ಕೊಂಡೆವೋ । ಗೋದ್ವಿಜ ದೇವ ।
ಗುರುಪೂಜೆ ಗೈಯ್ಯದಾದೆವೋ ॥
ದುರಿತಕೃತ್ಯವ ಮಾಡದೇ । ಈ ವಿದಿ ನಮ್ಮ ।
ಬರಿದೆ ಕಾಡುತ ಬಪ್ಪುದೇ ॥ 280 ॥

॥ **ಭಾಮಿನಿ** ॥

ಎನುತ ಹಲವಂಗದಲಿ ಗುಣಗಣ ।
ವನು ನೆನೆದು ಶೋಕಿಸುತ ರಘುಕುಲ ।
ಜನಪ ಪೊರಳಿದನಳಲುಮುಟ್ಟಿತು ಬ್ರಹ್ಮಲೋಕವನು ॥
ವನಜಭವನಲ್ಲಿಗೆ ದಿವೌಕಸ ।
ಜನವು ಮುನಿಗಳು ಸಹಿತಲಿಳಿತಂ ।
ದಿನಕುಲೇಂದ್ರನ ಕುಳ್ಳಿರಿಸಿ ಮೈದಡವುತಿಂತೆಂದ ॥281 ॥

'॥ **ಸೌರಾಷ್ಟ್ರ – ಅಷ್ಟ** ॥

ಮಾನವರಂದದಿ ಮತಿಗೆಟ್ಟು ಮರುಗುವುದೇನಿದೇನು । ನೀನ ।
ಜ್ಞಾನಿಯೊ ನಿಜಗಾಣದೀರ್ದ ವ್ಯಾಕುಲತೆಯೋ । ಏನಿದೇನು ॥
ಈ ನರಲೀಲೆಗೆ ತಕ್ಕವಿಕಾರವೋ । ಏನಿದೇನು । ನಿಮ್ಮ ।
ಭಾನುವಂಶದ ನೃಪರಪಚಾರಕೃತ್ಯವೋ । ಏನಿದೇನು ॥ 282 ॥

ಮಾಯಾಮೋಹಿತರಾದ ಮನುಜರಂತಳಬೇಡ । ಸಾಕುಸಾಕು । ಯೋಗ ।
ಮಾಯಾಧೀಶ್ವರ ನೀನು ಎಲ್ಲವರಂತಾದೆ । ಸಾಕುಸಾಕು ॥

ಬಾಯಾರಿ ಬಳಲಿ ಕೂಗುವೆ ಕಾರ್ಯವಿಲ್ಲದೆ । ಸಾಕುಸಾಕು । ವ್ಯರ್ಥ
ಕಾಯವ ದಂಡಿಸಿ ಫಲವೇನು ಸೈರಿಸು । ಸಾಕುಸಾಕು ॥ 283 ॥

ಮರುಳಾಗ ಬೇಡ ನಿನ್ನೊಳಗೆ ನೀನಾರೆಂದು । ನೋಡು ನೋಡು ॥ ದುಃಖ ।
ಪರಿಹಾರವನು ಮಾಡಲುಂಟೋರ್ವ ವೈದ್ಯನು । ನೋಡುನೋಡು ॥
ಪರಮಸಂಜೀವನೌಷಧಿಗಳುಂಟವನಲಿ । ನೋಡುನೋಡು । ಕ್ಷಿತಿ ।
ವರಶಿರೋಮಣಿಯೆ ನಿನ್ನವರನೆಬ್ಬಿಸುವನು । ನೋಡುನೋಡು ॥ 284 ॥

॥ **ಸೌರಾಷ್ಟ್ರ – ತ್ರಿವುಡೆ** ॥

ಸರಸಿಜೋದ್ಭವನೆಂದ ನುಡಿಗೇ ।
ಳ್ದರಸ ಸಂತೋಷದಿ ಸುಷೇಣನ ।
ಕರೆದು ಮಧುರೋಕ್ತಿಯಲಿ ನೇಮಿಸೆ ।
ತ್ವರಿತದಿಂದ ॥ 285 ॥

ತರಿಸಿ ಸಂಧ್ಯಾಕರಣೆ ಶಲ್ಯಾ ।
ಕರಣೆ ಮೊದಲಾದೌಷಧಿಯೊಳೆ ।
ಚ್ಚರಿಕೆ ಗೈದೆಬ್ಬಿಸಿದನಾಳ್ದನ ।
ಕರುಣದಿಂದ ॥ 286 ॥

ಪರಮಮಂಗಲವಾಯ್ತು ಪೂಮಳೆ ।
ಗರೆದರಭ್ರದೊಳಮರರಿತ್ತಲು ।
ತೆರಳಿದನು ತಾನವರೊಡನೆ ನಿಜ ।
ಪುರಕೆ ದ್ರುಹಿಣ ॥ 287 ॥

ಕಂದ ಕುಶ ಸೌಮಿತ್ರಿ ಕೈಕಾ ।
ನಂದನರನೊಡಗೊಂಡಯೋಧ್ಯೆಗೆ ।
ಬಂದು ಪೊಕ್ಕನು ರಾಮ ತರುಚರ ।
ವೃಂದ ಸಹಿತ ॥ 288 ॥

ಭೇರಿ ಕಹಳೆಗಳೊದರಿದವು ಗುಡಿ ।
ತೋರಣಾವಳಿಯೊಪ್ಪಿದುದು ಪುರ ।
ನಾರಿಯರು ಬೆಳಗಿದರು ರತುನದ ।
ಆರತಿಯನು ॥ 289 ॥

॥ **ಧವಳಾರ – ಏಕ** ॥

ದಶರಥ ನರಪತಿಯ ಗರ್ಭದಿ । ಶಿಶುವಾಗಿ ಜನಿಸಿದ ।
ಕುಶಿಕನಂದನನ ಕ್ರತುಗಾಯ್ದ ॥
ಕ್ರತುಗಾಯ್ದಾ ಮಹಿಮಗೆ ।
ಕುಶಲದಾರತಿಯs ಬೆಳಗಿರೆs ॥ ಶೋಭಾನೆs ॥ 290 ॥

ಧರಣಿಪರದಟಿಗೆ ಮಣಿಯದ । ಹರನ ಚಾಪವ ।
ಮುರಿದು ತರುಣಿ ಜಾನಕಿಯ ವರಿಸಿದ ॥
ವರಿಸಿದ ಸರ್ವೇಶ್ವರಗೆ ।
ಹರಳಿನಾರತಿಯs ಬೆಳಗಿರೆs ॥ ಶೋಭಾನೆs ॥ 291 ॥

ನಾರಿಯ ನೆವದಲಿ ವಸುಧೆಯ । ಭಾರವನೆಲ್ಲವ ಕಳೆದು ।
ಕಾರುಣ್ಯದಿ ಜಗವ ಸಲಹಿದ ॥
ಸಲಹಿದ ಸೀತಾಪತಿಗೆ ।
ಮೇರುವೆಯಾರತಿಯs ಬೆಳಗಿರೆs ॥ ಶೋಭಾನೇs ॥ 292 ॥

॥ **ಕಾಂಭೋದಿ – ಝಂಪೆ** ॥

ರಾಜರಾಜಾಧೀಶನಾಲಯದಿ ದಿವ್ಯಾನ್ನ ।
ಭೋಜನವು ಮುಗಿದುದೆಲ್ಲರಿಗೆ ॥
ಶ್ರೀಜನಕಜಾರಮಣ ಕರೆದೆಂದ ವಂದಿತವಿ ।
ರಾಜಿತಶಿರೋಮಣಿಯ ಕೂಡೆ ॥ 293 ॥

ವಿಮಲಮತಿ ಲಾಲಿಸೈ ಬಂದಡಸಿದಾಪತ್ತು ।
ಶಮನವಾದುದು ನಿನ್ನ ಪುರಕೆ ॥
ಗಮಿಸಿ ಮುನ್ನಿನವೋಲು ಸುಖದೊಳಿರ್ದಪುದೆನಲು ।
ನಮಿಸುತೆಂದನು ವಿಭೀಷಣನು ॥ 294 ॥

ಚಾರು ತಚ್ಚರಣಾರವಿಂದಯುಗಸೇವೆಯನು ।
ಹಾರೈಸುತಿರ್ದೆ ನಾ ಮೊದಲೆ ॥
ಬೇರೊಂದು ಬಗೆಯಾಗಿ ದೈವಗತಿಯಿಂದಿಲ್ಲಿ ।
ಸಾರಿದೆನು ತವಸನ್ನಿಧಿಯನು ॥ 295 ॥

ಒಲ್ಲೆ ಒಲ್ಲೆನು ಉಪದ್ರವದ ರಾಜ್ಯವ ತೊಡಕ ।
ನಲ್ಲಿಗೈದಿಸಬೇಡವೆನಲು ॥
ಬಲ್ಲೆ ಸ್ವಾಂತವ ನಿನ್ನ ಬೆದರಬೇಡಿನ್ನು ಭಯ ।
ವಿಲ್ಲ ಪರರಿಂದ ತತ್ಪುರಿಗೆ ॥ 296 ॥

ಎನುತಭಯವಿತ್ತು ಮೈದಡವಿ ಲಂಕಾಧಿಪನ ।
ವನಿತೆ ಜಾನಕಿಯನೊಡಗೊಂಡು ॥
ಅನುಜ ಲಕ್ಷ್ಮಣದೇವ ಸಕಲ ಕಪಿಬಲಸಹಿತ ।
ಘನಹರುಷದಿಂದ ಪುಷ್ಪಕದಿ ॥ 297 ॥

॥ **ವಾರ್ಧಕ** ॥

ಕರುಣಾಳು ತಾನೆ ಬಿಜಯಂಗೈದು ಲಂಕೆಗ ।
ನ್ಯರು ಕದಾಚಿತ್ ಪ್ರವೇಶಿಸರಿನ್ನು ನಿರ್ಭೀತಿ ।
ಪರಮಭಕ್ತ ವಿಭೀಷಣಂಗೆ ಸುಸ್ಥಿರವೆಂದು ನಿಲಿಸಿ ಪೊರಮಟ್ಟು ಬಳಿಕ ॥
ಬರುತ ನಿಜವಾಹಿನಿಯನೆಲ್ಲ ಮುಂದಕೆ ನಡೆಸಿ ।
ಮುರಿದು ಮಾರ್ಗವನು ಸೇತುವೆ ಕುಂತದೊಳ್ ಕೀರಿ ।
ಪುರಹರನ ಪೂಜಿಸುವೆನೆಂದುತ್ತರಾಭಿಮುಖವಾಗಿ ತಾನೈತಂದನು ॥ 298 ॥

॥ **ದ್ವಿಪದಿ** ॥

ವನಚರವ್ರಾತವನು ಕಳುಹಿ ಮುದದಿಂದ ।
ಜನಪಾಲ ಶೃಂಗಪರ್ವತಕೆ ನಡೆತಂದ ॥ 299 ॥

ಮುನಿಕುಲೋದ್ಭವ ರಾವಣಾದ್ಯರನು ಕೊಂದು ।
ಇನಿತು ತಟ್ಟಿತು ಪರಾಭವ ನಮ್ಮನೆಂದು ॥ 300 ॥

ಕೃತದೋಷಹರಚಿತಂ ಗೈಯ್ಯಬೇಕೆಂದು ।
ಶಿತಿಕಂಠನಂಘ್ರಿಯನು ಭಾವಿಸಿದನಂದು ॥ 301 ॥

ಆ ದಂಪತಿಗಳನುಜಸಹಿತ ನಿರಶನದಿ ।
ಸಾಧಿಸಿದರಷ್ಟಾಂಗಯೋಗವನು ಕ್ರಮದಿ ॥ 302 ॥

ಷಣ್ಮಾಸವಿರಲುಗ್ರವಹ ಸಮಾಧಿಯಲಿ ।
ಷಣ್ಮುಖನಪಿತನೆಚ್ಚರಿತು ಬಂದನಲ್ಲಿ ॥ 303 ॥

॥ ಗೌಳಿಪಂತು – ಮಟ್ಟೆ ॥

ರಾಜಮೌಳಿಯೊಲಿದು ಬಂದನು । ಮುದದಿ ತ್ರಿಜಗ ।
ದ್ರಾಜನಿರ್ದ ಬಳಿಗೆ ಶೈಲ । ರಾಜಸುತೆ ಸಮೇತನಾಗಿ ॥ ಪ ॥

ಮೇದಿನೀಶತಿಲಕ ನಮ್ಮೊಳ । ಭೇದಗೊಂಡ ತನುವಿಗೀ ಸ ।
ಮಾಧಿಯೆಂಬುದೊಂದು ಬರಿವಿ । ನೋದ ಬಳಲಿಕೆ ॥
ಸಾಧುಗುಣಸುಶೀಲ ನಿರಪ । ವಾದಿ ನಿನ್ನ ಮನದಿ ಬಯಕೆ ।
ಯಾದುದೆಂತೆನುತ್ತಲಭವ । ಮೋದದಿಂದ ಕರವ ಪಿಡಿದ ॥ 304 ॥

ಖಂಡಪರಶುವಿನ ಸಮಕ್ಷ । ಕಂಡು ಯುಗತಚರಣ ಚಾರು ।
ಪುಂಡರೀಕಕೆರಗಿ ಮಾ । ರ್ತಾಂಡಕುಲಜನು ॥
ಚಂಡಿಕಾವಲ್ಲಭನೆ ಕೇಳು । ದ್ದಂಡಮುನಿಕುಲಜರ ಖ್ಯಾತಿ ।
ಗೊಂಡು ಕದನಮುಖದೊಳವರ । ದಿಂಡುದರಿದೆನಂದು ನಾವು ॥ 305 ॥

ಬಂದುದತಿಕಿಲ್ಬಿಷವು ತದಘ । ದಿಂದ ಕಾದಲರಿಯದಾ ತ ।
ಮ್ಮಂದಿರೆಲ್ಲ ಮೂಲಕಾಖ್ಯನಿಂದಲಳಿದರು ॥
ಮುಂದೆ ಹರಚಿತಾರ್ಥವಾಗಿ । ನಿಂದೆನುಗ್ರತಪದೊಳೆನಲಿಂ ।
ತೆಂದ ರಾಮನೊಡನೆ ಶೂಲಿ । ಮಂದಹಾಸದಿಂದ ನೋಡುತ ॥ 306 ॥

॥ ಪಹಡಿ – ಏಕ ॥

ಅಹ! ವಿಚಿತ್ರವಿದಕೊ ಕೇಳ್ದೆವು । ಮಹವಿಚಿತ್ರ ।
ಅಹ! ವಿಚಿತ್ರವಿದಕೊ ಕೇಳ್ದೆವು ॥ ಪ ॥
ಅಹ! ವಿಚಿತ್ರವ ಕೇಳಿ ಸ್ವಧರ್ಮದಿ ।
ವಿಹಿತದಘ ಲೇಪಿಸಿತೆ ಬಂದು ॥ ಅ. ಪ ॥

ಆರ ಕೊಂದೆ ನೀನು । ವಧಿಸಿದ ।
ರಾರು ನಿನ್ನವರನು ॥ ಬಿಡು ಸಾ ।
ಕಾರ ಚೇಷ್ಟೆಗಳನು ॥ ನಿಜವ ವಿ ।
ಚಾರಿಸಾದಡಿನ್ನು ॥ ನಿರಹಂ ।
ಕಾರಿ ನಿಷ್ಕಳಂಕನು ಷಡ್ಭಾವ ವಿ ।
ಕಾರಶೂನ್ಯನವ್ಯಯನತಿಸುಖಮಯ ॥ 307 ॥

ಏಕ[ಮೇವಾ]ದ್ವಿತೀಯ । ನಿತ್ಯನು ।
ಶೋಕಗುಣದೊಳ್ ಬೇರೆಯಾ ॥ ಸರ್ವದಾ ।
ಶೋಕಕರ್ಮ ಪೊಲೆಯಾ ॥ ಮರವೆಯಿ ।
ದೇಕೆ ತಿಳಿಯದಿಹೆಯಾ ॥ ಆತ್ಮವಿ ।
ವೇಕಶೂನ್ಯನೇ ನೀನು ವಿಮೂಢತೆ ।
ಸಾಕುಸಾಕು ಸಂದೇಹವನೆಣಿಸದಿರಹ ॥ 308 ॥

ವಾರಿಯೊಳಗೆ ಕೆಡೆದು । ತೋಯನು ।
ದಾರ ವಾಯು ಬಡಿದು ॥ ಒಣಗಿಸ ।
ಲಾರದಗ್ನಿವಿಡಿದು ॥ ದಹಿಸನು ।
ಬೇರೆ ಶರದಿ ಕಡಿದು ॥ ಕೊಲ್ಲುವ ।
ರಾರು ನೋಡು ನಿರವಯ ನಿಶ್ರೇಯನ ।
ತೋರಿ ತೋರಿದಾದ್ಯಂತರಹಿತನೆಂತಹ ॥ 309 ॥

ಜ್ಞಾನವಿಲ್ಲದಳಲಿ । ಕರ್ಮಾ ।
ಧೀನರಾಗಿ ಬಳಲಿ ॥ ನಾನಾ ।
ಹೀನಯೋನಿಗಳಲಿ ॥ ಮರ್‍ತ್ಯಾಬಿ, ।
ಮಾನಯುತರು ತೊಳಲಿ ॥ ಸಂತತ ।
ಹಾನಿವೃದ್ಧಿಜಗವೆಂಬೀನಿಮಿತ್ತದೊಳು ।
[ದಾನವಹತಿ] ನಿರ್ದೋಷವು ನೃಪರಿಂ ॥ 310 ॥

ತನ್ನ ನಿಜವ ತಾನೆ । ತಿಳಿದವ ।
ಗನ್ಯ ದೈವಭಜನೆ । ಯಾತಕೆ ।
ಸನ್ನುತಾರ್ತಿಹರನೆ । ಮನುಕುಲ ।
ರನ್ನ ಕೇಳು ನೀನೆ । ಮಾಧವ ।
ಮುನ್ನ ಬೇಡು ಮನದರ್ತಿಯನಿತ್ತಪೆ ।
ನಿನ್ನ ವಾಕ್ಯದಂತಾಗಲಿ ಕೇಳ್ಳೈ ॥ 311 ॥

॥ **ವಾರ್ಧಕ** ॥

ಹರನೆಂದ ನುಡಿಗೊಡಂಬಟ್ಟು ಧರಣೀಜಾತೆ ।
ಯರಸ ಬೇಡಿದನಲ್ಲಿ ನಿಂದು ತಪಗೈದ ತ ।

ದ್ಗಿರಿಯೊಳಕ್ಷಯವಾಗಲೇನುಮಾಡಲು ಸಿದ್ಧಿಯಾಗಲಾ ತೀರ್ಥತ್ರಯಂ ॥
ಧರೆಯೊಳತಿ ವಿಖ್ಯಾತಿಸಲಿ ನಮ್ಮ ಪೆಸರಿಂದ ।
ಕರುಣಿಸುವುದೆನಲು ವರವಿತ್ತ ಗಿರಿಜೇಶನಂ ।
ಪರಮಸಂತೋಷದಿಂದರ್ಚಿಸಿದರಾಗ ವಿಧ್ಯುಕ್ತದಿಂದಾ ಮೂವರು ॥ 312 ॥

॥ ಆರಭಿ – ಏಕ ॥

ನೀಲಕಂಠಗೆ ಇಂದು । ಮೌಳಿಗೆ ಶಿವಗೆ ।
ಫಾಲಲೋಚನಗೆ ಕ । ಪಾಲಮಾಲನಿಗೆ ।
ಶೂಲಧರಗೆ ಸುರ । ಜಾಲವಿನುತಗೆ ।
ಕಾಲಕಾಲಗೆ ಕರು । ಣಾಳು ಶಂಕರನಿಗೆ ।
ನೀಲದಾರತಿಯs ಬೆಳಗಿರೆs ॥ ಶೋಭಾನೆ ॥ 313 ॥

ಅಂಗಜರಿಪುವಿನ । ರ್ಧಾಂಗಿ ಪಾರ್ವತಿಗೆ ।
ಭೃಂಗಕುಂತಲೆಗೆ ಕು । ರಂಗಲೋಚನೆಗೆ ।
ತುಂಗಕುಚೆಗೆ ಲಲಿ । ತಾಂಗಸುಂದರಿಗೆ ।
ಮಂಗಲಪ್ರದೆಗೆ ಮ । ತಂಗಜಗಮನೆಗೆ ।
ಮಂಗಳಾರತಿಯs ಬೆಳಗಿರೆs ॥ ಶೋಭಾನೆ ॥ 314 ॥

ವ್ಯೋಮಕೇಶಗೆ ಗುಣ । ಧಾಮಗೆ ಭವಗೆ ।
ಪ್ರೇಮವಾರಿಧಿಗೆ ಮ । ಹಾಮಹಿಮನಿಗೆ ।
ಕಾಮಿತವರದಗೆ । ಕಾಮಮರ್ದನನಿಗೆ ।
ಶ್ರೀಮದ್ರಜತಗಿರಿವಾಸಗೆ ಈಶಗೆ ।
ಹೇಮದಾರತಿಯs ಬೆಳಗಿರೆs ॥ ಶೋಭಾನೆ ॥ 315 ॥

॥ ವಾರ್ಧಕ ॥

ಜಯನಮೋ ಜಗದೀಶ ಶರ್ವ ಶಂಭು ಗಿರೀಶ ।
ಜಯನಮೋ ತ್ರಿಪುರಾರಿ ನಿಖಿಳಸುಜನೋದ್ಧಾರಿ ।
ಜಯನಮೋ ಭಸಿತಾಂಗ ದುರುಳ ದನುಜವಿಭಂಗ ಜಯನಮೋ ಭವಶಂಕರ ॥
ಜಯನಮೋ ನಿಟಿಲಾಕ್ಷ ಸುಮನಸಕುಲಾಧ್ಯಕ್ಷ ।
ಜಯನಮೋ ಭವನಾಶ ರುಚಿರಪನ್ನಗಭೂಷ ।
ಜಯನಮೋ ಜಯವಾರ್ಧಿ ಪುಣ್ಯಚರಿತಕಪರ್ದಿ
ಜಯನಮೋಯೆನುತಿರ್ದರು ॥ 316 ॥

॥ **ಭಾಮಿನಿ** ॥

ಇಂತು ಸನ್ನುತಿಗೈಯ್ಯಲವರ್ಗಳ ।
ಚಿಂತಿತಾರ್ಥವ ಸಲಿಸಿ ಗಿರಿಜಾ ।
ಕಾಂತನಂಬಿಕೆ ಸಹಿತ ತೆರಳಿದನಿವರ ಬೀಳ್ಕೊಂಡು ॥
ಸ್ವಾಂತದಲಿ ಸಂದೇಹವಡುತೇ ।
ಕಾಂತದಿಂ ಕೇಳಿದನು ಕುಶವೃ ।
ತ್ತಾಂತವನು ಸತಿಯೊಡನೆ ವಿಸ್ತರಿಸೆಂದು ರಾಘವನು ॥ 317 ॥

॥ **ಸಾವೇರಿ – ಆದಿ** ॥

ಮಾನಿನಿ ಕೇಳೇನಿದು ಪೇಳ್ ತಿಳಿಯದು ॥ ಪ ॥

ಸತಿಯ ಪುರುಷ ಕೂಡದೆ । ಸುತರು ಬೇಕೆನ್ನದೆ ।

ಕ್ಷಿತಿಗೆ ಜನಿಸಲಪ್ಪುದೇ । ಮ । ನ್ಮತಿಗೆ ಸಂಶಯವಿದೆ ॥ 318 ॥
ಖಳನ ಸಂಗರದಲ್ಲಿ । ಒಲವನಂಬರದಲ್ಲಿ ।
ಒಲಿದುಸುರ್ದ ನುಡಿಯಲ್ಲಿ । ನಾ । ತಿಳಿದೆನಾ ದಿನದಲ್ಲಿ ॥ 319 ॥

ತನುಜನೆಂತಾದನು । ನಿನಗೆ ಕೈಸಾರ್ದನು ।
ಮನಕೆ ನಿಶ್ಚಯವನು । ಪೇ । ಳ್ವನಿತೆ ಬೇಗೆಂದನು ॥ 320 ॥

॥ **ಮಧ್ಯಮಾವತಿ – ಆದಿ** ॥

ಪತಿಯೆ ಲಾಲಿಸು ಕುಶ ಪುಟ್ಟಿದ ಪೂರ್ವಸಂ ।
ಗತಿಯನು ತಿಳಿಸುವೆ ಮೊದಲು ॥
ಸುತನೊಬ್ಬಲವನ ನಾ ಪಡೆದಿರ್ದೆ ತನ್ಮುನಿ ।
ಪತಿಯಾಲಯದಲಿ ಕೇಳಂದು ॥ 321 ॥

ತನುಶುದ್ಧಿಗೋಸುಗ ನದಿಗೈದುತಿರ್ದೆ ನಾ ।
ದಿನದಿನದಲಿ ಕಂಡೆನಲ್ಲಿ ॥
ವನಚರವ್ರಜ ತಮ್ಮ ಮರಿಗಳ [ಕೂಡಿ]ಕೊಂ ।
ಡನುರಾಗದಿಂದಾಡುತಿಹುದ ॥ 322 ॥

ಮರುದಿನ ಕರೆದೊಯ್ದು ಕೂಡೆ ಕುಮಾರನ ।
ಪರಮಋಷಿಯ ಪತ್ನಿ ನೋಡಿ ।
ತರಳನಿಲ್ಲೆಂದು ತಲ್ಲಣಿಸಿ ತಿಳುಪೆ ಬಂದು ।
ಮರುಕಗೊಂಬಳು ಸೀತೆಯೆಂದು ॥ 323 ॥

ಮುನಿಸುತ ಕಾಂಕ್ಷೆಯಿಂ ಪೇಳಲು ಜಡೆಯ ಜೀ ।
ಯನುಪವಿತ್ರವು ಸಹವಾಗಿ ।
ಅನಲಕುಂಡದ ಮಧ್ಯದಲ್ಲಿ ಪುಟ್ಟಿದ ಋಷಿ ।
ವನಿತೆಯರಿಟ್ಟು ತೊಟ್ಟಿಲಲಿ ॥ 324 ॥

ಪಾಡುತಿರಲು ಪುತ್ರ ಸಹವಾಗಿ ನಾ ಬರೆ ।
ನೋಡುತ್ತಲಧಿಕ ಲೇಸೆಂದು ।
ಜೋಡಾಗಿ ಸಲಹೆಂದಡೊಪ್ಪದೆ ಮುನಿಪ ತಾ ।
ನಾಡಿದಂತಿಹೆನೆಂದು ಪೇಳೆ ॥ 325 ॥

॥ **ಭಾಮಿನಿ** ॥

ಅಂದು ಋಷಿವರನಿತ್ತ ಕೈಯ್ಯೊಡ ।
ಮುಂದೆ ಕಾರಣವುಂಟು ಸಲಹಿಕೊ ।
ನಂದನರನೀರ್ವರನು ನಿಮ್ಮನ್ವಯಕೆ ವಿಖ್ಯಾತಿ ॥
ಬಂದಪುದು ಕುಶನೆಂಬ ಪೆಸರಿಂ ।
ತೆಂದು ಪೂರ್ವಾಪರವಿದೆನೆ ನಿಜ ।
ವೆಂದೊಡಂಬಡದಿರಲು ಬಂದುಸುರಿದನು ನಾರದನು ॥ 326 ॥

॥ **ನೀಲಾಂಬರಿ – ಆದಿ** ॥

ಸಹಜವಿದಕೆ ಸಂಶಯವೇನು । ಇನ್ನು ।
ಬಹುವಿಧದಲಿ ಶೋಧಿಸು ನೀನು ॥ ಪ ॥

ತರುಣಿಯು ಪುಸಿಯನಾಡುವಳಲ್ಲ । ಕಿಂಚಿ ।
ತ್ಕುರುಹು ನಿನಗೆ ತೋರಿಪುದಲ್ಲಾ । ಕುಂದು ।
ಕೊರತೆಯೆಣಿಕೆ ನೀ ಬಿಡಲಿಲ್ಲ । ಇದ ।
ನರಿತು ನೋಡಿದಡೊಮ್ಮೆ ಸಟೆಯಲ್ಲ ರಾಮಾ ॥ 327 ॥

ಲವನು ತೊಟ್ಟಿಲೊಳ್ ಕಾಣಲಿಲ್ಲೆಂದು । ಮುನಿ ।
ಭವನದೊಳರಸುತ ಸುತನೆ ಹಾಯೆಂದು । ಬಂದು ।
ಯುವತಿ ಜಾನಕಿ ದುಃಖಿಪಳೆಂದು । ಚೆಲ್ವ ।
ಕುವರನ ಸೃಜಿಸಿ ಖುಷಿಯಂದು ॥ 328 ॥

ಮುಂದೆ ಕೀರ್ತಿಯು ನಿಮಗುಂಟೆಂದು । ಈತ ।
ನಿಂದಲಿ ಶಿಶುವ ನೀ ಸಲಹೆಂದು । ಮುದ ।
ದಿಂದ ಕೈಯ್ಯೊಳಗಿತ್ತಪನೆಂದು । ರಘು ।
ನಂದನಗರುಪಿ ನಡೆದನಂದು ॥ 329 ॥

॥ **ವಾರ್ಧಕ** ॥

ನಾರದನ ನುಡಿಗೊಪ್ಪಿ ರಘುಸಾರ್ವಭೌಮ ನಿಜ ।
ನಾರಿ ಲಕ್ಷ್ಮಣ ಸಹಿತ ಬಂದಯೋಧ್ಯಾಪುರ ।
ದ್ವಾರಮಂ ಪೊಕ್ಕ ಬರಮಂ ಕಂಡು ಸಕಲಜನ ಬಂದಿದಿರ್ಗೊಂಡುದಾಗ ॥
ಚಾರು ವಾದ್ಯಧ್ವನಿಗಳಿಂದಾಪ್ತಮಂತ್ರಿ ಪರಿ ।
ವಾರ ಮುಖ್ಯನಿಯೋಗಿ ನಿಕರದೊಡಗೂಡಿ ಬ ।
ಪ್ಪಾ ರಾಮಚಂದ್ರ ಜಾನಕಿಯರ್ಗೆ ತಂದರಾರತಿಯ ನೀಲಾಳಕಿಯರು ॥ 330 ॥

॥ **ಧವಳಾರ–ಏಕ** ॥

ಶ್ರೀಮದ್ರಾಜಾಧಿರಾಜ ಪರಾಕು ।
ಭೂಮಿಪಾಲಶಿರೋಮಣಿಯೆ ಪರಾಕು ।
ಕಾಮಿತವರದ ಪ್ರೇಮಾಬ್ಧಿ ಪರಾಕು ।
ಭೀಮವಿಕ್ರಮ ಸೀತಾರಾಮ ಪರಾಕು ॥
ರಾಮಣೀಯಕ ರಾಜೀವಾಕ್ಷ ಪರಾಕೆಂದು ।
ಹೂವಿನಾರತಿಯಽ ಬೆಳಗಿರೆಽ ॥ 331 ॥

ಕಂದರ್ಪಕೋಟಿ ಸದೃಶ ಸುಂದರಾಂಗ ।
ವಂದಿತಪ್ರಿಯ ಸರ್ವಪಾಪವಿಭಾಂಗ ॥
ನಂದಿವಾಹನಸಖ ಭುಜಬಲೋತ್ತುಂಗ ।
ವೃಂದಾರಕೋತ್ತಮ ನಿರುತಸತ್ಸಂಗ ।

ಇಂದಿರಾವರ ನಿತ್ಯಾನಂದ ಪರಾಕೆಂದು ।
ಕುಂದಣದಾರತಿಯs ಬೆಳಗಿರೆs ॥ ಶೋಭಾನೆs ॥ 332 ॥

ರಾವಣಾಂತಕ ರಘುವಂಶಲಲಾಮ ।
ದೇವೇಂದ್ರಸುತ ಭುಜದರ್ಪವಿರಾಮ ।
ಕೇವಲಭಕ್ತ ರತ್ನಾಕರ ಸೋಮ ।
ಭೂವರೋತ್ತಮ ಸಾರ್ವಭೌಮ ಪರಾಕೆಂದು ।
ಹೇಮದಾರತಿಯs ಬೆಳಗಿರೆs ॥ ಶೋಭಾನೆs ॥ 333 ॥

॥ **ವಾರ್ಧಕ** ॥

ಮಂದಿಸಂದಣಿ ಸಕಲಸಂಭ್ರಮ ಸುಮಾಂಗಲ್ಯ ।
ದಿಂದ ಒಳಪೊಕ್ಕು ಸಿಂಹಾಸನ ಸ್ಥಿತನಾಗಿ ।
ಬಂಧುಬಾಂಧವ ಪುತ್ರಮಿತ್ರಸಹಜಾತಾದ್ಯರೊಡಗೂಡಿ ಹರುಷದಿಂದ ॥
ಮುಂದೆ ನಿಜರಾಜ್ಯಮಂ ಪಾಲಿಸಿದ ಶ್ರೀರಾಮ ।
ನೆಂದು ಮುನಿವರಸೂತ ಪೇಳ್ದ ಋಷಿಗಳಿಗಿತ್ತ ।
ಇಂದುಕುಲತಿಲಕ ಜನಮೇಜಯಮಹೀವರಗುಸುರ್ದ ವೈಶಂಪಾಯನು ॥ 334 ॥

ಧರೆಯೊಳು ಶತ್ರುತ್ಕರೀಪುರಮಧ್ಯವಾಸಿ ಭೂ ।
ಸುರಕುಲೋತ್ಪನ್ನ ಕಾಶ್ಯಪಗೋತ್ರಭವ ಮನೋ ।
ಹರ ತಿರುಮಲಾರ್ಯನ ಸುಪುತ್ರ ಶಂಕರನ ಕುಲಸತಿ ಸರಸ್ವತಿಸೂನು ನಾ ॥
ಪರಮಗುರುವರ್ಯ ಸುಬ್ರಹ್ಮಣ್ಯನಂಘ್ರಿಪಂ ।
ಕರುಹದೊಲವಿಂದ ವಿರಚಿಸಿದೆನೀ ಕಾವ್ಯಮಂ ।
ತರಳ ರಾಮನ ಬಾಲಭಾಷಿತವನುದ್ಧರಿಸಿ ಸುಜನರೊಲಿದಾಲಿಸುವುದು ॥ 335 ॥

॥ **ಮಂಗಲಪದ** ॥

ಆದಿಯೊಳಾಮ್ನಾಯವ ತಂದ ಮತ್ಸ್ಯಗೆ ।
ಮೇದಿನೀದ್ರವವಾಂತ ಕೂರ್ಮನಿಗೆ ॥
ಭೇದಿಸಿ ದೈತ್ಯನ ಧರೆಯ ತಂದಿಳುಹಿದ ।
ಸಾಧುಸಂತಾನಗೆ ನರಹರಿಗೆ ॥ ಮಂಗಳಂ ॥ 336 ॥

ವಾಮನ ರೂಪದಿ ಬಲಿಯೊಳು ಮೂರಡಿ ।
ಭೂಮಿಯ ದಾನವ ಬೇಡಿದಗೆ ॥
ಜಾಮದಗ್ನಿಗೆ ಜನಕಾತ್ಮಜೆಯರಸಗೆ ।
ಸ್ವಾಮಿ ಕೃಷ್ಣಗೆ ಬೌದ್ಧಕಲ್ಕ್ಯನಿಗೆ ॥ ಮಂಗಳಂ ॥ 337 ॥

ಪರಮಪುರುಷಗೆ ಪಂಕೇಜದಳಾಕ್ಷಗೆ ।
ಶರಣಾಗತರನುದ್ಧರಿಸುವಗೆ ॥
ನಿರುಪಮೋತ್ತಮ ರತ್ನಪುರದೊಳು ನೆಲೆಸಿದ ।
ಗುರು ವೆಂಕಟಾಚಲಮೂರುತಿಗೆ ॥ ಮಂಗಲಂ ॥ 338 ॥

* * * * *

ಶಬ್ದಾರ್ಥಸೂಚಿ

[ಆವರಣದಲ್ಲಿ ಪ್ರಸಂಗಸಂಖ್ಯೆ ಮತ್ತು ಪದ್ಯಸಂಖ್ಯೆಯನ್ನು ಕೊಟ್ಟಿದೆ]

ಅಂಗರೇಕ (3–243) – ನಿಲುವಂಗಿ
ಅಜಸ್ರ (4–78) – ಸತತ
ಅರ್ಭಕ (1–152) – ಮಗು
ಅಶನಿ (4–159) – ಗುಡುಗು
ಅಹಿತಲ್ಪ (1–11) – ಶೇಷಶಾಯಿ
ಆಣ್ಮ (2–19) – ಒಡೆಯ
ಆಮ್ನಾಯ (4–66) – ವೇದ
ಆರಾಮ (4–128) – ಉಪವನ
ಇನಜನೂರು (3–285) – ಯಮನ ಪಟ್ಟಣ
ಇಭವಾಹ (1–134) – ದೇವೇಂದ್ರ
ಉಡೆ (3–156) – ಬಟ್ಟೆ
ಎರೆಯ (1–55) – ಕಾಂತ
ಎಲರಶನ (1–105) – ಶೇಷ, ಬಲರಾಮ
ಕಂಧರ (3–338) – ಕೊರಳು
ಕಪರ್ದಿನಿ (4–108) – ಪಾರ್ವತಿ
ಕಪ್ಪಡ (3–235) – ಬಟ್ಟೆ
ಕಬಳ (3–222) – ತುತ್ತು
ಕರುವಳ (3–52) – ಕರುಗಳನ್ನು ಕಾಯುವವನು
ಕ್ಷಮೆ (1–191) – ಭೂಮಿ
ಕಾಕ (3–381) – ವಕ್ರ
ಕಿರುಕೂಳ (3–233) – ನೀಚ
ಕಿಸಲಯ (4–129) – ತಳಿರು
ಕುಂಭಿ (3–317) – ಆನೆ
ಕುಡ್ಯ (4–126) – ಗೋಡೆ
ಕುರಂಗಾಕ್ಷಿ (1–136) – ಹರಿಣಾಕ್ಷಿ

ಕುಸ್ತರಿಸು (3–171) – ಸಂತೈಸು
ಕೈವಾಡ (3–433) – ಕುಶಲಕೆತ್ತನೆ
ಗಾಳಿಗೂಳ (3–203) – ಸರ್ಪ
ಗೋಕರ್ಣರಾಜ (3–211) – ಆದಿಶೇಷ
ಘಸಣಿ (3–376) – ಘಾಸಿ
ಚಲನಾತ್ಮಭವ (1–89) – ವಾಯುಸಂಭವ, ಭೀಮ
ಜೋದ (3–325) – ಮಾವುತ
ಜೊನ್ನ (3–265) – ಬೆಳದಿಂಗಳು
ದಂದುಗ (1–83) – ತೊಂದರೆ
ದಶನ (4–160) – ದಂತ
ದಶಲಪನ (4–165) – ದಶಕಂಠ, ರಾವಣ
ದ್ರವಗಲ್ಲು (3–214) – ಚಂದ್ರಕಾಂತಶಿಲೆ
ಧ್ವಾಂತಾರಿ (4–55) – ಸೂರ್ಯ
ನಯಸರ (3–310) – ಇಂಪಾದ ಸ್ವರ
ನಿಟ್ಟೆಲುವು (3–262) – ಬೆನ್ನುಮೂಳೆ
ನಿಪ್ಪಸರ (3–372) – ರಭಸ
ನಿಶೀಥಿನಿ (4–4) – ರಾತ್ರಿ
ನೀರ್ನೇಜಕ (3–231) – ಅಗಸ
ಪಕ್ಕೆ (3–203) – ಹಾಸುಗೆ
ಪಡಿಗ (3–436) – ಸ್ಫಟಿಕ
ಪನ್ನತಿಕೆ (3–386) – ಪರಾಕ್ರಮ
ಪಾಕ (3–204) – ಮಗು
ಪುಟಭೇದನ (4–28) – ವಾದ್ಯವಿಶೇಷ
ಬಾಲಾರ್ಯಮ (3–445) – ಬಾಲಸೂರ್ಯ
ಬಿಡೆಯ (4–413) – ನಾಚಿಕೆ
ಬೀಡಿಕೆ (3–212) – ಬಿಡಾರ
ಬೀಯ (4–268) – ನಾಶ
ಬೋಡು (4–137) – ತಲೆ

ಮಾವಂತಿಗ (3–320)	–	ಮಾವುತ
ಮಿಸುನಿ (2–31)	–	ಬಂಗಾರ
ಮುಂಜಾಡಿಕೆ (3–386)	–	ಮುಂಭಾಗದ ವಸ್ತ್ರ
ಯಂತೃ (3–326)	–	ನಿಯಂತ್ರಕ
ಯಾತುಧಾನ (4–118)	–	ರಾಕ್ಷಸ
ರವಿಜೆ (3–172)	–	ಯಮುನಾನದಿ
ಲಳಿಗೆ (3–65)	–	ನಳಿಗೆ
ಲುಳಿತ (3–428)	–	ಹನಿಸಿದ
ವಂದಾರು (3–3–29)	–	ವಂದಿಸುವವನು
ವಿಭಾವರಿ (3–103)	–	ರಾತ್ರಿ
ವಿಯದ್ವಾಣಿ (4–269)	–	ಆಕಾಶವಾಣಿ
ಸೊಲ್ಮಡದಿಯಾಣ್ಮ (3–385)	–	ವಾಗ್ದೇವಿಯ ಗಂಡ, ಬ್ರಹ್ಮ
ವಿನತಜ (1–181)	–	ಗರುಡ
ವೇಷ್ಟಿಸು (3–301)	–	ಸುತ್ತುವರಿಯು
ಶಾಲೂರ (4–100)	–	ಕಪ್ಪೆ
ಸಸಿಮುಖಿ (3–254)	–	ಚಂದ್ರಮುಖಿ
ಹಸುಗೆ (1–8)	–	ಪಾಲು
ಹಿಮಾಂಶು (3–264)	–	ಚಂದ್ರ

* * * * *

ರಾಜ್ಯಪ್ರಶಸ್ತಿ ಪುರಸ್ಕೃತ
ಶಿರೂರು ಫಣಿಯಪ್ಪಯ್ಯ
(ಕಿರುಪರಿಚಯ)

ಜನನ : 06 ಜುಲೈ 1918

ನಿಧನ : 12 ಮಾರ್ಚ್ 2004

ತಂದೆ-ತಾಯಿ : ದೇವಪ್ಪಯ್ಯ ಮತ್ತು ಗೌರಮ್ಮ

ಹೆಂಡತಿ : ಗಿರಿಜಾ

ಮಕ್ಕಳು : ದೇವಪ್ಪಯ್ಯ, ಪರಮೇಶ್ವರಯ್ಯ, ಪ್ರಭಾಕರಯ್ಯ, ಉಮೇಶ, ರಮೇಶ (ಪುತ್ರರು) ಶಕುಂತಳಾ (ಪುತ್ರಿ)

ರಚಿಸಿದ ಯಕ್ಷಗಾನ ಪ್ರಸಂಗಗಳು: ಶ್ರೀಕೃಷ್ಣಗಾರುಡಿ, ಮಹೇಂದ್ರವಿಜಯ, ನಹುಷೋದ್ಭವ, ಮದಾಲಸಾ ಪರಿಣಯ, ವಾಜಿಗ್ರಹಣ, ಸಗರಾಶ್ವಮೇಧ, ಅಮೃತಾಪಹರಣ, ಶ್ವೇತಚಂದ್ರಿಕಾ, ವೀರವರ್ಮಕಾಳಗ, ನೀಲಧ್ವಜಕಾಳಗ, ಭೂಮಿಕಾಪರಿಣಯ, ಭ್ರಮರವೇಣಿಕಲ್ಯಾಣ, ಪೌಲೋಮಚರಿತ್ರೆ, ಸರ್ಪಾಧ್ವರ, ಅಬ್ಯಾಡಿ ಕ್ಷೇತ್ರಮಹಾತ್ಮೆ. (ಒಟ್ಟು 15 ಪ್ರಸಂಗಗಳು)

ಪ್ರಶಸ್ತಿ-ಪುರಸ್ಕಾರಗಳು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ರಾಜ್ಯಪ್ರಶಸ್ತಿ (2001),
ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ, ಹಟ್ಟಿಯಂಗಡಿ.(1997)
ದಕ್ಷಿಣಕನ್ನಡ ಜಿಲ್ಲಾ ಕರಾವಳಿ ಉತ್ಸವ ಸನ್ಮಾನ, (2000).

ಹವ್ಯಾಸ : ಯಕ್ಷಗಾನ ಭಾಗವತಿಕೆ, ಮೃದಂಗ ಕಟ್ಟುವುದು, ಮೃದಂಗ ನುಡಿಸುವಿಕೆ, ನೃತ್ಯಶಿಕ್ಷಣ ನೀಡುವಿಕೆ, ಮಣ್ಣಿನ ಗಣಪತಿ ರಚನೆ, ಮದುವೆ ಮಂಟಪರಚನೆ ಇತ್ಯಾದಿ ಕೌಶಲ, ಗಿಡಮೂಲಿಕೆ ಔಷಧಿ ನೀಡಿಕೆ, ಜ್ಯೋತಿಷ್ಯ, ತಾಳೆಗರಿ ಓದುವುದು ಮತ್ತು ಯಕ್ಷಗಾನ ಪ್ರಸಂಗ ಸಂಗ್ರಹ.

* * * * *



ಶಿರೂರು ಫಣಿಯಪ್ಪಯ್ಯನವರ ಶ್ರೀ ಕೃಷ್ಣಗಾರುಡಿ ಒಟ್ಟು 203 ಪದ್ಯಗಳಿರುವ ಪ್ರತಿಭಾಪೂರ್ಣ ಪ್ರಸಂಗ. ವಿನೂತನ ಕಥಾಹಂದರ, ಸನ್ನಿವೇಶ ರಮ್ಯತೆ , ರಸವೈವಿಧ್ಯ, ಸಾಹಿತ್ಯ ಸೌಂದರ್ಯ, ಸುಲಲಿತವಾದ ಪದ್ಯಬಂಧಗಳು ಈ ಪ್ರಸಂಗದ ಮಹಿಮೆ. ಕವಿಯು ಸ್ವಯಂ ಭಾಗವತರಾದುದರಿಂದ ಪದ್ಯಗಳ ರಚನೆಯಲ್ಲಿ ಸಂಗೀತ ಸಾಹಿತ್ಯಗಳ ಸಮಾಮೇಲನ ಸಮುಚಿತವಾಗಿ ಮೂಡಿ ಬಂದಿದೆ.

ಜಾನಪದ ಲೋಕದ ಸಂಕೀರ್ಣಕಥಾ ವರ್ಗಕ್ಕೆ ಸೇರುವ ಮಹೇಂದ್ರವಿಜಯ ಹೊಸಮಾದರಿಯ ಪ್ರಸಂಗಗಳ ಕಕ್ಷೆಯಲ್ಲಿ ಕಾಣಿಸಿಕೊಳ್ಳುವ ಮುಖ್ಯಕೃತಿ. ಪೂರ್ವಕವಿಗಳ ಪದ್ಯ ಬಂಧಗಳನ್ನೇ ಹೋಲುವ ಸುಂದರರಚನೆಗಳನ್ನು ಹೆಣೆಯುವಲ್ಲಿ ವಿಶೇಷ ಒಲವನ್ನು ತೋರುವ ಕವಿ ಹಟ್ಟಿಯಂಗಡಿ ರಾಮ ಭಟ್ಟ, ಮುದ್ದಣ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಮುಲ್ಕಿ ರಾಮಕೃಷ್ಣಯ್ಯ ಮುಂತಾದವರ ಪ್ರಭಾವ, ಪ್ರೇರಣೆಗೆ ಒಳಗಾಗಿರುವುದು ಅಲ್ಲಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ.

ಹಟ್ಟಿಯಂಗಡಿ ರಾಮಭಟ್ಟರ ಬಿಲ್ಲಹಬ್ಬ ಕಂಸವಧೆ ಭಾಗವತ ಪುರಾಣವನ್ನು ಆಧರಿಸಿದ ಅತ್ಯುತ್ತಮ ಪ್ರಸಂಗ ಕೃತಿ.ಭಾಷಾ ಶೈಲಿ, ಛಂದೋಬಂಧ,ಕಾವ್ಯಮೌಲ್ಯಗಳ ದೃಷ್ಟಿಯಿಂದ ಇದನ್ನು ಕವಿಯ ಉತ್ಕೃಷ್ಟ ರಚನೆ ಎನ್ನಬೇಕು. ಅಪೂರ್ವವಾಗಿ ತಾರಾವಳಿ ವೃತ್ತ ದಂಡಕ ಎಂಬ 29 ಸಾಲುಗಳ ಛಂದೋಬಂಧವನ್ನು ಈ ಪ್ರಸಂಗದಲ್ಲಿ ಕಾಣಬಹುದು.

ರತ್ನಾಪುರ ರಾಮ ಬರೆದ ಮೂಲಕಾಸುರ ಕಾಳಗ ಪ್ರಸಂಗದಲ್ಲಿ ಕಾವ್ಯದ ಮನೋಹರತೆ ಗಮನಾರ್ಹ ವಾಗಿದೆ.ಹಲವಾರು ವಾರ್ಧಿಕ ಷಟ್ಪದಿಗಳು ಅನುಪ್ರಾಸ ವೈಭವದಿಂದ ಮನಸೆಳೆಯುತ್ತವೆ. ಈ ಕವಿಯು ಬಳಸಿದ ವೈವಿಧ್ಯಪೂರ್ಣವಾದ ಯಕ್ಷಗಾನ ಛಂದೋಬಂಧಗಳು ಪ್ರಸಂಗದ ರಸಾಭಿವ್ಯಂಜನೆಗೆ ಪೂರಕವಾಗಿವೆ. ಕೆಲವು ಸೃಜನಶೀಲವಾದ ವಿನ್ಯಾಸಗಳು ರಂಗದಲ್ಲಿ ಚೇತೋಹಾರಿಯಾದ ಅನುಭವಕ್ಕೆ ಕಾರಣವಾಗುವುದರಲ್ಲಿ ಸಂದೇಹವಿಲ್ಲ.

ಈ ನಾಲ್ಕು ಪ್ರಸಂಗಗಳ ಸಂಪುಟವು ಯಕ್ಷಗಾನ ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡುವವರಿಗೆ ತುಂಬಾ ಸಹಕಾರಿಯಾಗಿದೆ.

–ಡಾ ಕಬ್ಬಿನಾಲೆ ವಸಂತ ಭಾರದ್ವಾಜ್ (ಮುನ್ನುಡಿಯಿಂದ)

ಫಣಿಗಿರಿ ಪ್ರತಿಷ್ಠಾನ
ಶಿರೂರು